ಗುರುವಾರ, ಆಗಸ್ಟ್ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 241 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಕಲಾತ್ಮಕ ನಗರವನ್ನು ರೂಪಿಸಲು ಪ್ರಾಜೆಕ್ಟ್ 'ಪರಿ'



ಆಳ-ಅಗಲ
ಹೈಕೋರ್ಟ್‌ಗೆ ಪ್ರಮಾಣಪತ್ರವನ್ನೇ ಸಲ್ಲಿಸದ ರಾಜ್ಯ ಸರ್ಕಾರ

ಒಳಮೀಸಲಾತಿ ನೀಡಲು ಬದ್ಧ: ಸಿ.ಎಂ 4

16 ದಿನ ಠಾಣೆಗೆ ಅಲೆದ ಸಂತ್ರಸ್ತೆ 11

ಸೆನ್ಸೆಕ್ಸ್	ನಿಫ್ಟಿ	₹/$
81,785	25,052	83.97

ಸಿದ್ದರಾಮಯ್ಯ, ಡಿಕೆಶಿಗೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣ • ಹೈಕೋರ್ಟ್ 'ಪೀಠ'ಗಳತ್ತ ಚಿತ್ತ

ಸಿಎಂ– ಡಿಸಿಎಂ 'ನ್ಯಾಯ' ಪರೀಕ್ಷೆ ಇಂದು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧದ ಎರಡು ಪ್ರತ್ಯೇಕ ಪ್ರಕರಣಗಳ ಭವಿಷ್ಯ ಗುರುವಾರ ನಿರ್ಧಾರವಾಗಲಿದ್ದು, ಕುತೂಹಲಕ್ಕೆ ಕಾರಣವಾಗಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ನೀಡಿದ ಕ್ರಮ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ. ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪೂರ್ಣಗೊಂಡಿದ್ದು, ಕಾಯ್ದಿರಿಸಿದ ತೀರ್ಪು ಇಂದೇ ಪ್ರಕಟವಾಗಲಿದೆ. ಸರ್ಕಾರಕ್ಕೆ ಹೆಗಲುಕೊಟ್ಟಿರುವ ಇಬ್ಬರು ನಾಯಕರ ಕಾನೂನು ಸಮರದ 'ನ್ಯಾಯ' ಪರೀಕ್ಷೆ ಇಂದು ನಡೆಯಲಿದೆ. ಹೀಗಾಗಿ, ಆಡಳಿತಾರೂಢ ಪಕ್ಷಕ್ಕೆ ಇಂದು ನಿರ್ಣಾಯಕ ದಿನವಾಗಿದೆ.

ಸಿ.ಎಂ ವಿರುದ್ಧದ 'ಮುಡಾ' ಪ್ರಕರಣ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯಲ್ಲಿ ಆಗಿರುವ ಅಕ್ರಮಕ್ಕೆ ಸಂಬಂಧಿಸಿ ತನಿಖೆಗೆ ಅನುಮತಿ ನೀಡಿದ ರಾಜ್ಯಪಾಲರ ಆದೇಶವನ್ನು ವಜಾಗೊಳಿಸುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿ ಕುರಿತು ತೀರ್ಮಾನ ಗುರುವಾರ ಹೊರಬೀಳುವ ಸಂಭವ ಇದೆ.

'ರಾಜ್ಯಪಾಲರು ನನಗೆ ನೀಡಿದ್ದ ಷೋಕಾಸ್ ನೋಟಿಸ್‌ಗೆ ಸಂಬಂಧಿಸಿದಂತೆ ರಾಜ್ಯ ಸಚಿವ ಸಂಪುಟ 2024ರ ಆಗಸ್ಟ್ 1ರಂದು ಸಲಹೆಯೊಂದನ್ನು ನೀಡಿತ್ತು. ಅದನ್ನು ಧಿಕ್ಕರಿಸಿರುವ ರಾಜ್ಯಪಾಲರು, ನನ್ನ ವಿರುದ್ಧದ ತನಿಖೆಗೆ ಅನುಮತಿ ನೀಡಿದ್ದಾರೆ. ಈ ನಿರ್ಧಾರ ಅಸಾಂವಿಧಾನಿಕವಾಗಿದ್ದು, ಕಾನೂನಿನ ಎಲ್ಲಾ ಅಂಶಗಳನ್ನೂ ಗಾಳಿಗೆ ತೂರಿರುವ ಇಂತಹ ಆದೇಶವನ್ನು ವಜಾ ಮಾಡಬೇಕು' ಎಂದು ಸಿದ್ದರಾಮಯ್ಯ ಕೋರಿದ್ದಾರೆ.

ಈ ಸಂಬಂಧ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾ. ಎಂ.ನಾಗ ಪ್ರಸನ್ನ ಅವರು ವಿಚಾರಣೆ ನಡೆಸಿದ್ದು, 'ಅರ್ಜಿಯ ಅರ್ಹತೆ ಮೇಲಿನ ವಿಚಾರಣೆ ಆಲಿಸಿ ಆ.29ರಂದೇ ಅರ್ಜಿ ವಿಲೇವಾರಿ ಮಾಡಲಾಗುವುದು' ಎಂದಿದ್ದರು.

4ನೇ ಪುಟ ನೋಡಿ

ಆಸ್ತಿ ಗಳಿಕೆ: ಡಿಕೆಶಿ ವಿರುದ್ಧದ ಆರೋಪ



ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ತನಿಖೆ ನಡೆಸಲು ಈ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರವು ಸಿಬಿಐಗೆ ಅನುಮತಿ ನೀಡಿದ್ದ ಆದೇಶವನ್ನು; ಕಾಂಗ್ರೆಸ್ ನೇತೃತ್ವದ ಈಗಿನ ರಾಜ್ಯ ಸರ್ಕಾರ ಹಿಂಪಡೆದಿರುವುದನ್ನು ಪ್ರಶ್ನಿಸಿ ದಾಖಲಾಗಿರುವ ಎರಡು ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ಮುಕ್ತಾಯಗೊಳಿಸಿರುವ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ಕಾಯ್ದಿರಿಸಿರುವ ತೀರ್ಪನ್ನು ಗುರುವಾರ (ಆ.29) ಪ್ರಕಟಿಸಲಿದೆ.

ಈ ಸಂಬಂಧ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ಎರಡು ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ಪೂರೈಸಿ ತೀರ್ಪು ಕಾಯ್ದಿರಿಸಿದೆ. ಶಿವಕುಮಾರ್ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ, ರಾಜ್ಯ ಸರ್ಕಾರದ ಪರ ವಕೀಲ ಕಪಿಲ್ ಸಿಬಲ್, ಯತ್ನಾಳ ಪರ ವೆಂಕಟೇಶ್ ಪಿ.ದಳವಾಯಿ ಮತ್ತು ಸಿಬಿಐ ಪರ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

4ನೇ ಪುಟ ನೋಡಿ

'ಏನೇ ತೀರ್ಪು ಬಂದರೂ ಸಿ.ಎಂ ಜೊತೆ ಹೈಕಮಾಂಡ್'



'ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಲ್ಲಿಸಿರುವ ರಿಟ್ ಅರ್ಜಿ ವಿಚಾರದಲ್ಲಿ ನ್ಯಾಯಾಲಯ ಏನೇ ತೀರ್ಪು ನೀಡಿದರೂ, ಹೈಕಮಾಂಡ್ ಮತ್ತು ನಾವೆಲ್ಲರೂ ಮುಖ್ಯಮಂತ್ರಿ ಬೆನ್ನಿಗೆ ನಿಲ್ಲುತ್ತೇವೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ರಾಜ್ಯಪಾಲರ ನಿರ್ಣಯವನ್ನು ಕೋರ್ಟ್ ಪರಿಗಣಿಸುವುದಿಲ್ಲ ಎಂಬ ನಿರೀಕ್ಷೆಯಿದೆ. ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಹಿ, ಯಾವುದೇ ರೀತಿಯ ಪುರಾವೆಗಳು ಇಲ್ಲ. ನೋಂದಣಿಯಲ್ಲಿಯೂ ಅವರ ಹೆಸರು ಉಲ್ಲೇಖವಾಗಿಲ್ಲ. ಅದೆಲ್ಲವನ್ನು ಗಮನಿಸಿ ನ್ಯಾಯಾಲಯ ಆದೇಶ ಕೊಡುವ ನಿರೀಕ್ಷೆಯಿದೆ' ಎಂದರು.

'ಬಿಜೆಪಿ ಆಡಳಿತ ನಡೆಸುತ್ತಿರುವ ಸರ್ಕಾರಗಳು, ಕೇಂದ್ರ ಸರ್ಕಾರದ ಮೇಲೆಯೂ ಭ್ರಷ್ಟಚಾರದ ಆರೋಪಗಳಿಲ್ಲವೇ? ನಮ್ಮ ಸರ್ಕಾರದ ಮೇಲೆ ಬಂದಿರುವ ಆರೋಪಗಳು ನಿರಾಧಾರ ಎಂಬುದನ್ನು ನಾವು ಸಾಬೀತುಪಡಿಸುತ್ತೇವೆ. ನ್ಯಾಯಾಲಯದ ಆದೇಶ ಬಂದ ಬಳಿಕ ರಾಷ್ಟ್ರಪತಿಯನ್ನು ಭೇಟಿ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ' ಎಂದೂ ಹೇಳಿದರು.



ಹರಿದ ನೀರು...

ಸಕಲೇಶಪುರ ತಾಲ್ಲೂಕಿನ ಕೆಸವನಹಳ್ಳಿಯ ಕುಂಬರಡಿ ಕಾಫಿ ಎಸ್ಟೇಟ್ ಬಳಿ ಎತ್ತಿನಹೊಳೆ ಯೋಜನೆ ಅಡಿ ಪ್ರಾಯೋಗಿಕವಾಗಿ ನೀರು ಹರಿಸುವ ಕಾರ್ಯಾಚರಣೆಯನ್ನು ಬುಧವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಿಶೀಲಿಸಿದರು

ಸುದ್ದಿ 4B

ಅನ್ನಭಾಗ್ಯ: ನಗದು ಬದಲು 'ದಿನಸಿ ಕಿಟ್'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 'ಅನ್ನಭಾಗ್ಯ' ಯೋಜನೆಯಡಿ ಐದು ಕೆ.ಜಿ ಅಕ್ಕಿ ಜತೆಗೆ ನೀಡುತ್ತಿರುವ ನಗದು ಬದಲು 'ದಿನಸಿ ಕಿಟ್' ವಿತರಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಅಡುಗೆ ಎಣ್ಣೆ, ಬೇಳೆ, ಸಕ್ಕರೆ, ಉಪ್ಪು ದಿನಸಿ ಕಿಟ್‌ನಲ್ಲಿ ಇರಲಿದೆ. ಈ ಕುರಿತು ಆಹಾರ ಇಲಾಖೆಯು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದು, ಅಕ್ಟೋಬರ್ 1ರಿಂದ ಜಾರಿಗೊಳಿಸಲು ಸಿದ್ಧತೆ ನಡೆದಿದೆ.

'ಅನ್ನಭಾಗ್ಯ'ದ ಗ್ಯಾರಂಟಿಯಡಿ ಬಿಪಿಎಲ್ ಕುಟುಂಬದ ಪ್ರತಿ ಸದಸ್ಯರಿಗೆ 10 ಕೆ.ಜಿ ಅಕ್ಕಿ ನೀಡುವುದಾಗಿ ಕಾಂಗ್ರೆಸ್ ಪಕ್ಷ ಚುನಾವಣೆ ಪೂರ್ವದಲ್ಲಿ ಘೋಷಿಸಿತ್ತು. ಅಷ್ಟು ಪ್ರಮಾಣದ ಅಕ್ಕಿ ಲಭ್ಯವಾಗದೇ ಇದ್ದಾಗ, ಐದು ಕೆ.ಜಿ ಅಕ್ಕಿ ಜತೆಗೆ, ಉಳಿದ ಐದು ಕೆ.ಜಿ ಲೆಕ್ಕದಲ್ಲಿ ನಗದು ನೀಡುವ ಯೋಜನೆ ಜಾರಿಗೊಳಿಸಿತ್ತು. ನಗದು ಬದಲು ದಿನಸಿ ನೀಡುವ ಯೋಜನೆ ಜಾರಿಗೆ ಬರಲಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಯೋಜನೆ ಜಾರಿಗೆ ಅಗತ್ಯವಿದ್ದ ಹೆಚ್ಚುವರಿ ಅಕ್ಕಿ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿತ್ತು.

10ನೇ ಪುಟ ನೋಡಿ

ಹೆಣ್ಣು ಮಕ್ಕಳಿಗೆ ಶೀಘ್ರ ಉದ್ಯೋಗ ತರಬೇತಿ

ನವದೆಹಲಿ (ಪಿಟಿಐ): ದೇಶದ ದುಡಿಯುವ ವರ್ಗದಲ್ಲಿ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದರ ಅಂಗವಾಗಿ 14ರಿಂದ 18 ವಯೋಮಾನದ ಹೆಣ್ಣು-ಮಕ್ಕಳಿಗೆ ಸಾಂಪ್ರದಾಯಿಕವಲ್ಲದ ಹುದ್ದೆಗಳ ಬಗ್ಗೆ ತರಬೇತಿ ನೀಡುವ ಸಂಬಂಧ ಪ್ರಾಯೋಗಿಕ ಯೋಜನೆಯ ಅನುಷ್ಠಾನಕ್ಕೆ ಮುಂದಾಗಿದೆ.

ಶಿಕ್ಷಣದ ಜೊತೆಯಲ್ಲಿಯೇ ಡಿಜಿಟಲ್ ಕೌಶಲ, ಡಿಜಿಟಲ್ ಮಾರ್ಕೆಟಿಂಗ್ ಹಾಗೂ ಸಾಮಾನ್ಯ ವ್ಯಕ್ತಿತ್ವ ಕುರಿತು ತರಬೇತಿ ನೀಡಲಾಗುತ್ತದೆ. ದುಡಿಯುವ ವಲಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಇದರ ಉದ್ದೇಶವಾಗಿದೆ.

ಹೆಣ್ಣುಮಕ್ಕಳು ಮತ್ತು ಮಹಿಳೆಯರ ಸಬಲೀಕರಣಕ್ಕಾಗಿ ರೂಪಿಸಿರುವ ಈ ವಿಶೇಷ ಯೋಜನೆಯಡಿ, ಹತ್ತಿರದ ಶಾಲೆಗಳು ಮತ್ತು ಮನೆಗಳಲ್ಲಿಯೇ ತರಬೇತಿ ನೀಡಲಾಗುತ್ತದೆ.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ





ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ನಿಧಿ ಬಳಕೆ ವಿರೋಧಿಸಿ ಬೆಂಗಳೂರಿನಲ್ಲಿ ಬುಧವಾರ ಕರ್ನಾಟಕ ಆಹಿಂದ ಸಂಘಟನೆಗಳ ಒಕ್ಕೂಟದ ಸದಸ್ಯರು ಪ್ರತಿಭಟಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ

ವಿವರ 04

ಮೇಕೆದಾಟು–ಮಧ್ಯಸ್ಥಿಕೆ ಇಲ್ಲ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಜಲವಿವಾದವನ್ನು ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮೂಲಕವೇ ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಪುನರುಚ್ಚರಿಸಿದೆ. ಉಭಯ ರಾಜ್ಯಗಳ ನಡುವೆ ಮಧ್ಯಸ್ಥಿಕೆ ವಹಿಸಿ ಮೇಕೆದಾಟು ವಿವಾದ ಬಗೆಹರಿಸಬೇಕು ಎಂಬ ಕರ್ನಾಟಕದ ಬೇಡಿಕೆಯನ್ನು ಕೇಂದ್ರ ಸರ್ಕಾರವು ತಳ್ಳಿ ಹಾಕಿದೆ.

'ಅಂತರ–ರಾಜ್ಯ ಜಲವಿವಾದ ಕಾಯ್ದೆ 1956ರ ಸೆಕ್ಷನ್ 6ರ ಅನ್ವಯ ಹಾಗೂ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಕೇಂದ್ರ ಸರ್ಕಾರವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ನೀರು ನಿಯಂತ್ರಣ ಸಮಿತಿಯನ್ನು 2018ರಲ್ಲಿ ಸ್ಥಾಪಿಸಿದೆ. ಈ ಸಮಿತಿಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೆರಿ ಪ್ರತಿನಿಧಿಗಳಿದ್ದಾರೆ. ಕಾವೇರಿ ಕಣಿವೆಯ ವಾಸ್ತವಾಂಶ ಪರಿಗಣಿಸಿ ಪ್ರಾಧಿಕಾರ ಹಾಗೂ ಸಮಿತಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತವೆ' ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸ್ಪಷ್ಟಪಡಿಸಿದೆ.

4ನೇ ಪುಟ ನೋಡಿ

ದರ್ಶನಾತಿಥ್ಯ ಪ್ರಕರಣ: ನಟ ಸೇರಿ ಹಲವರ ವಿಚಾರಣೆ • ಡಿವಿಆರ್ ಪರಿಶೀಲನೆ

'ಟೀ–ಪಾರ್ಟಿ ಆಯೋಜಿಸಿದ್ದು ನಾಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಗಸ್ಟ್ 22ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಶೇಷ ಬ್ಯಾರಕ್ ಎದುರು ಟೀ ಪಾರ್ಟಿ ಆಯೋಜಿಸಿದ್ದು ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜ' ಎಂಬುದಾಗಿ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ಚಿತ್ರನಟ ದರ್ಶನ್ ಪೊಲೀಸರಿಗೆ ತಿಳಿಸಿದ್ದಾರೆ.

ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಶೇಷ ಆತಿಥ್ಯ, ವಿಡಿಯೊ ಕರೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸ್ ತನಿಖಾ ತಂಡಗಳು ಬುಧವಾರ ಹಲವರನ್ನು ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆ ಹಾಕಿದವು.

ಜೈಲಿನೊಳಗೆ ವಿಶೇಷ ಆತಿಥ್ಯ ಪಡೆದು ಕುರ್ಚಿಯಲ್ಲಿ ಕುಳಿತು ಸಿಗರೇಟ್ ಸೇದುತ್ತಾ ರೌಂಡ್ ಟೇಬಲ್ ಪಾರ್ಟಿ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್, ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ದರ್ಶನ್ ವ್ಯವಸ್ಥಾಪಕ ನಾಗರಾಜ್ ಅವರನ್ನು ತನಿಖಾಧಿಕಾರಿಗಳು ಬುಧವಾರ ವಿಚಾರಣೆಗೆ ಒಳಪಡಿಸಿದರು.

ಸಿಗರೇಟ್ ಸೇದಿ, ಪಾರ್ಟಿ ನಡೆಸಿದ್ದ ಸ್ಥಳವನ್ನು ವೀಕ್ಷಿಸಿದ ತನಿಖಾಧಿಕಾರಿಗಳು ಮಹಜರು ನಡೆಸಿದರು. ಅಲ್ಲದೇ ಸಿ.ಸಿ. ಟಿ.ವಿ ಕ್ಯಾಮೆರಾಗಳ ಕಾರ್ಯಕ್ಷಮತೆ ಪರಿಶೀಲಿಸಿದ ಪೊಲೀಸರು ಕೆಲವು ಡಿವಿಆರ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಗೊತ್ತಾಗಿದೆ.

5ನೇ ಪುಟ ನೋಡಿ

ಬಳ್ಳಾರಿಗೆ ದರ್ಶನ್ ಸ್ಥಳಾಂತರ ಇಂದು



ಬಳ್ಳಾರಿ ಜೈಲಿಗೆ ದರ್ಶನ್ ಅವರನ್ನು ಗುರುವಾರ ಬೆಳಿಗ್ಗೆಯೇ ಸ್ಥಳಾಂತರಿಸುವ ಸಾಧ್ಯತೆಯಿದೆ. ಬುಧವಾರ ಸಂಜೆಯೇ ಸ್ಥಳಾಂತರಕ್ಕೆ ಜೈಲು ಸಿಬ್ಬಂದಿ ಹಾಗೂ ನಗರ ಪೊಲೀಸರು ಸಿದ್ಧತೆ ನಡೆಸಿದ್ದರು. ಆದರೆ, ದರ್ಶನ್ ವಿಚಾರಣೆ ಬಾಕಿಯಿದ್ದ ಕಾರಣಕ್ಕೆ ಸ್ಥಳಾಂತರ ವಿಳಂಬವಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉಳಿದ ಒಂಬತ್ತು ಆರೋಪಿಗಳ ಸ್ಥಳಾಂತರವೂ ಗುರುವಾರವೇ ನಡೆಯಲಿದೆ ಎಂದು ಗೊತ್ತಾಗಿದೆ.

ಪವಿತ್ರಾ ಜಾಮೀನು: 31ಕ್ಕೆ ಆದೇಶ



ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಪವಿತ್ರಾಗೌಡ ಜಾಮೀನು ಅರ್ಜಿ ವಿಚಾರಣೆ ನಡೆಸಿದ 57ನೇ ಸಿಸಿಎಚ್ ನ್ಯಾಯಾಲಯವು ಆಗಸ್ಟ್ 31ಕ್ಕೆ ಆದೇಶ ಕಾಯ್ದಿರಿಸಿದೆ. ಪ್ರಕರಣದ ಮೊದಲ ಆರೋಪಿ ಪವಿತ್ರಾ ಜಾಮೀನು ಅರ್ಜಿ ಸಲ್ಲಿಸಿದ್ದ ಬೆನ್ನಲ್ಲೇ ಇತರೆ ಆರೋಪಿಗಳಾದ ಅನುಕುಮಾರ್, ವಿನಯ್, ಕೇಶವಮೂರ್ತಿ ಸಹ ಜಾಮೀನಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು.

ಪವಿತ್ರಾ ಹಾಗೂ ಅನುಕುಮಾರ್ ಜಾಮೀನು ಅರ್ಜಿಯ ಆದೇಶವನ್ನು ಇದೇ 31ಕ್ಕೆ ಕಾಯ್ದಿರಿಸಿದರೆ, ವಿನಯ್ ಹಾಗೂ ಕೇಶವ ಮೂರ್ತಿ ಜಾಮೀನು ಆದೇಶವನ್ನು ಸೆಪ್ಟೆಂಬರ್ 2ಕ್ಕೆ ಕಾಯ್ದಿರಿಸಲಾಗಿದೆ.

ವಿಐಪಿ ಬ್ಯಾರಕ್‌ಗೆ ದರ ನಿಗದಿ

'ಅಪರಾಧ ಪ್ರಕರಣಗಳಲ್ಲಿ ಪರಪ್ಪನ ಅಗ್ರಹಾರ ಸೇರಿದರೆ ಆರಂಭದಲ್ಲಿ ಕ್ವಾರಂಟೈನ್ ಸೆಲ್‌ನಲ್ಲಿ ಆರೋಪಿಯನ್ನು ಇಡಲಾಗುತ್ತದೆ. ನಂತರ, ವಿಐಪಿ ಬ್ಯಾರಕ್‌ಗೆ ಹೋಗಬೇಕಾದರೆ ಜೈಲು ಸಿಬ್ಬಂದಿಗೆ ಹಣ ನೀಡಬೇಕು' ಎಂದು ಜಾಮೀನಿನ ಮೇಲೆ ಬಿಡುಗಡೆಯಾದ ಆರೋಪಿಯೊಬ್ಬರು ತಿಳಿಸಿದ್ದಾರೆ.

'ಕಾರಾಗೃಹದಲ್ಲಿ ವಿಶೇಷ ಬ್ಯಾರಕ್‌ಗಳಿವೆ. ಆ ಬ್ಯಾರಕ್‌ನಲ್ಲಿ ಉಳಿಯಲು 15 ದಿನಕ್ಕೆ ₹30 ಸಾವಿರದಿಂದ ₹40 ಸಾವಿರ ನಿಗದಿ ಪಡಿಸಲಾಗಿದೆ. ರೌಡಿಗಳು, ಉಳ್ಳವರು ಸಿಬ್ಬಂದಿಗೆ ಹಣ ಕೊಟ್ಟು ಆ ಬ್ಯಾರಕ್‌ಗಳಲ್ಲಿ ಉಳಿಯುತ್ತಾರೆ. ಇಲ್ಲದಿದ್ದರೆ ಸಾಮಾನ್ಯ ಸೆಲ್‌ನಲ್ಲಿ ಇತರೆ ಕೈದಿಗಳ ಜತೆಗೆ ಇರಬೇಕು' ಎಂದು ಬಹಿರಂಗ ಪಡಿಸಿದ್ದಾರೆ.

5ನೇ ಪುಟ ನೋಡಿ

ಕೆಪಿಎಸ್‌ಸಿ ಪರೀಕ್ಷೆ: ಅಭ್ಯರ್ಥಿಗಳ ಆಕ್ರೋಶ; ಮರು ಪರೀಕ್ಷೆಗೆ ಆಗ್ರಹ

ಮತ್ತಷ್ಟು ಎಡವಟ್ಟು; ಪ್ರಶ್ನೆಗಳೇ ತದ್ವಿರುದ್ಧ

• ಸೂರ್ಯನಾರಾಯಣ ವಿ.

ಬೆಂಗಳೂರು: ಕರ್ನಾಟಕ ಲೋಕ ಸೇವಾ ಆಯೋಗವು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ಮಂಗಳವಾರ ನಡೆಸಿದ್ದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳನ್ನು ಕನ್ನಡಕ್ಕೆ ಅನುವಾದ ಮಾಡುವಾಗ ಆಗಿರುವ ಮತ್ತಷ್ಟು ಎಡವಟ್ಟುಗಳು ಬಯಲಾಗಿವೆ.

ಎರಡೂ ಪ್ರಶ್ನೆ ಪತ್ರಿಕೆಗಳಲ್ಲೂ ಹಲವಾರು ತಪ್ಪುಗಳು ನುಸುಳಿದ್ದು, ಕೆಲವು ಪ್ರಶ್ನೆಗಳು ಮತ್ತು ಉತ್ತರದ ಆಯ್ಕೆಗಳು ಇಂಗ್ಲಿಷ್ ಮತ್ತು ಕನ್ನಡದಲ್ಲಿ ತದ್ವಿರುದ್ಧವಾಗಿವೆ. ಇನ್ನೂ ಕೆಲವು ಪ್ರಶ್ನೆಗಳು, ಉತ್ತರದ ಆಯ್ಕೆಗಳು ಅರ್ಥವೇ ಆಗದಂತಿವೆ.

ಈ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆ ಹುಟ್ಟುಹಾಕಿದೆ.

ಮುಖ್ಯಾಂಶಗಳು
- ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ
- ಕೆಪಿಎಸ್‌ಸಿ ಧೋರಣೆಗೆ ಖಂಡನೆ
- ವರದಿ ಕೇಳಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಉದಾ–1 (ಪ್ರಶ್ನೆ ಪತ್ರಿಕೆ–2)
ಇಂಗ್ಲಿಷ್ ಪ್ರಶ್ನೆ: Which of the following statements are 'incorrect' about the state Finance Commission?
ಕನ್ನಡದಲ್ಲಿ ಪ್ರಶ್ನೆ: 'ರಾಜ್ಯ ಹಣಕಾಸು ಆಯೋಗಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು 'ಸರಿ'ಯಾಗಿದೆ/ವೆ?'

(ಇಂಗ್ಲಿಷ್‌ನಲ್ಲಿ ತಪ್ಪು ಹೇಳಿಕೆಗಳು ಯಾವುವು ಎಂದು ಕೇಳಿದ್ದರೆ, ಕನ್ನಡದಲ್ಲಿ ಸರಿ ಹೇಳಿಕೆಗಳು ಯಾವುವು ಎಂದು ಕೇಳಲಾಗಿದೆ)

ಉದಾ–2 (ಪ್ರಶ್ನೆ ಪತ್ರಿಕೆ–2)
ಪ್ರಶ್ನೆ: 'ದೊಡ್ಡ ಗಾತ್ರದ ಹೆಬ್ಬಕಕ್ಕೆ (GIB) ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?'
ಉತ್ತರದ ಮೊದಲ (ಎ) ಆಯ್ಕೆ ಕನ್ನಡ: 'ಇದು ಅತ್ಯಂತ ವೇಗವಾಗಿ ಹಾರಾಡುವ ಪಕ್ಷಿಗಳಲ್ಲಿ ಒಂದಾಗಿದೆ'
ಇಂಗ್ಲಿಷ್: It is one of the heaviest flying birds

(ಇಂಗ್ಲಿಷ್‌ನಲ್ಲಿ ಅತ್ಯಂತ ಭಾರದ ಪಕ್ಷಿಗಳಲ್ಲಿ ಒಂದು ಎಂದು ಹೇಳಿದ್ದರೆ, ಕನ್ನಡಕ್ಕೆ ಅನುವಾದ ಮಾಡುವಾಗ ವೇಗವಾಗಿ ಹಾರಾಡುವ ಪಕ್ಷಿ ಎಂದು ಉಲ್ಲೇಖಿಸಲಾಗಿದೆ)

ಉದಾ–3 (ಪ್ರಶ್ನೆ ಪತ್ರಿಕೆ–1)
ಇಂಗ್ಲಿಷ್ ಪ್ರಶ್ನೆ: Consider the scenario of a State assembly with a total seat of 100.
Year of General Election to state assembly
ಕನ್ನಡ ಪ್ರಶ್ನೆ: ಒಟ್ಟು 100 ಸ್ಥಾನವನ್ನು ಹೊಂದಿರುವ ಒಂದು ರಾಜ್ಯಸಭೆಯ ಸವಿವರವಾದ ವರ್ಣನೆಯನ್ನು ಪರಿಗಣಿಸಿ.
ರಾಜ್ಯಸಭೆಯ ಸಾರ್ವತ್ರಿಕ ಚುನಾವಣೆಯ ವರ್ಷ

(ಇಲ್ಲಿ state assembly ಪದಗಳನ್ನು ರಾಜ್ಯಸಭೆ ಎಂದು ಕನ್ನಡದಲ್ಲಿ ಬರೆಯಲಾಗಿದೆ. ಇದನ್ನು ರಾಜ್ಯ ವಿಧಾನಸಭೆ ಎಂದು ಬರೆಯಬೇಕಿತ್ತು)

ಉದಾ –4 (ಪ್ರಶ್ನೆ ಪತ್ರಿಕೆ–1)
ಇಂಗ್ಲಿಷ್ ಪ್ರಶ್ನೆ: Which of the following statements is/are correct with reference to the Permanent Lok Adalat?
A. The Permanent Lok Adalat were set up after the Lok Adalat Act 2002

10ನೇ ಪುಟ ನೋಡಿ

> ಪರಪ್ಪನ ಅಗ್ರಹಾರದಲ್ಲಿ ಜಾಗ ಖಾಲಿಯಾಗಿದೆ. ಅಲ್ಲಿಗೆ ಕೆಪಿಎಸ್‌ಸಿ ಅಧಿಕಾರಿಗಳನ್ನು, ಪ್ರಶ್ನೆಪತ್ರಿಕೆ ಅನುವಾದ ಮಾಡಿದವರನ್ನು ಕಳುಹಿಸಬೇಕು
> **ರಾಜೇಂದ್ರ ಚೆನ್ನಿ**
> ವಿಮರ್ಶಕ (ಫೇಸ್‌ಬುಕ್‌ನಲ್ಲಿ)

ಬೀದಿ ನಾಯಿಗಳಿಂದ ದಾಳಿ: ವೃದ್ಧೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗಮ್ಮನಗುಡಿ ವೃತ್ತದ ಬಳಿಯಿರುವ ವಾಯುಸೇನೆಯ ಏಳನೇ ವಸತಿ ಕ್ಯಾಂಪ್ ಆವರಣದಲ್ಲಿ ಬುಧವಾರ ಬೆಳಿಗ್ಗೆ ವಾಯುವಿಹಾರ ನಡೆಸುತ್ತಿದ್ದ ವೃದ್ಧೆಯೊಬ್ಬರ ಮೇಲೆ 10ಕ್ಕೂ ಹೆಚ್ಚು ಬೀದಿನಾಯಿಗಳು ದಾಳಿ ನಡೆಸಿ, ತೀವ್ರವಾಗಿ ಗಾಯಗೊಳಿಸಿದ್ದರಿಂದ ಅವರು ಮೃತಪಟ್ಟಿದ್ದಾರೆ.

ಬಿಹಾರದ ರಾಜ್‌ದುಲಾರಿ ಸಿನ್ಹಾ (76) ಮೃತಪಟ್ಟವರು. ಇವರು ನಿವೃತ್ತ ಶಿಕ್ಷಕಿ.

ರಾಜ್‌ದುಲಾರಿ ತಮ್ಮ ಅಳಿಯ, ಯೋಧ ಅಮಿತ್‌ಕುಮಾರ್ ಅವರ ಜತೆಗೆ ವಾಯು ಸೇನೆಯ ಏಳನೇ ವಸತಿ ಕ್ಯಾಂಪ್‌ನ ವಸತಿಗೃಹದಲ್ಲಿ ನೆಲಸಿದ್ದರು. ಬುಧವಾರ ಬೆಳಿಗ್ಗೆ 6.30ರ ಸುಮಾರಿಗೆ ವಸತಿಗೃಹದ ಎದುರೇ ವಾಯುವಿಹಾರ ನಡೆಸುತ್ತಿದ್ದರು.



ರಾಜ್‌ದುಲಾರಿ

'ಅದೇ ಕ್ಯಾಂಪ್ ಆವರಣದಲ್ಲಿದ್ದ ಬೀದಿ ನಾಯಿಗಳು ಏಕಾಏಕಿ ದಾಳಿ ನಡೆಸಿವೆ. ಕಾಲು ಹಾಗೂ ಮುಖಕ್ಕೆ ಗಾಯಗೊಳಿಸಿ ಮಾಂಸವನ್ನು ಕಿತ್ತು ತಿಂದಿವೆ. ವೃದ್ಧೆಯನ್ನು ಸ್ವಲ್ಪ ದೂರಕ್ಕೆ ಎಳೆದೊಯ್ದಿದ್ದವು. ಕ್ಯಾಂಪಸ್‌ನಲ್ಲಿ ನೆಲಸಿದ್ದ, ಅದೇ ಮಾರ್ಗದಲ್ಲಿ ವಾಯುವಿಹಾರಕ್ಕೆ ಬರುತ್ತಿದ್ದ ಹೇಮಂತ್ ಕುಮಾರ್ ಅವರು ರಕ್ತದ ಮಡುವಿನಲ್ಲಿ ಬಿದ್ದಿದ್ದ ವೃದ್ಧೆಯನ್ನು ರಕ್ಷಿಸಿ ಅಳಿಯನಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. 'ರಾಮಯ್ಯ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ವೃದ್ಧೆ ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.

2ನೇ ಪುಟ ನೋಡಿ

ಮೀಸಲು ನಿಗದಿಗೆ ಆಕ್ಷೇಪ: ನೋಟಿಸ್

ಬೆಂಗಳೂರು: ಮಡಿಕೇರಿ ನಗರಸಭೆ, ಶ್ರೀರಂಗಪಟ್ಟಣ ಪುರಸಭೆ ಸೇರಿದಂತೆ ಕೆಲವು ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ನಿಗದಿಪಡಿಸಿರುವ ಮೀಸಲಾತಿಯನ್ನು ಆಕ್ಷೇಪಿಸಲಾದ ಅರ್ಜಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಪಿಎಂಎಸ್‌ಎಸ್‌ವೈ ಯೋಜನೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ: ಸಿಟಿ ಸ್ಕ್ಯಾನ್ ಸೇರಿ ವಿವಿಧ ಪರೀಕ್ಷೆಗಳಿಗೆ ಸಮಸ್ಯೆ


ಪ್ರಯೋಗಾಲಯ ಸ್ಥಗಿತ: ರೋಗಿಗಳ ಪರದಾಟ

• ವರುಣ ಹೆಗಡೆ

ಬೆಂಗಳೂರು: ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯ (ಪಿಎಂಎಸ್‌ಎಸ್‌ವೈ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಪ್ರಯೋಗಾಲಯವು ಹಲವು ದಿನಗಳಿಂದ ಸ್ಥಗಿತಗೊಂಡಿದೆ. ಇದರಿಂದಾಗಿ ಸಿಟಿ ಸ್ಕ್ಯಾನ್, ಎಕ್ಸ್‌-ರೇ ಸೇರಿದಂತೆ ವಿವಿಧ ಪರೀಕ್ಷೆಗಳಿಗೆ ರೋಗಿಗಳು ಪರದಾಟ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಈ ಆಸ್ಪತ್ರೆಯು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯನಿರ್ವಹಿಸುತ್ತಿದೆ. 203 ಹಾಸಿಗೆಗಳೊಂದಿಗೆ ಅತ್ಯಾಧುನಿಕ ಸೌಲಭ್ಯ ಹೊಂದಿರುವ ಆಸ್ಪತ್ರೆಯಲ್ಲಿ, ಹೃದಯ ವಿಜ್ಞಾನ, ನರ ವಿಜ್ಞಾನ, ಪ್ಲಾಸ್ಟಿಕ್ ಸರ್ಜರಿ ಸೇರಿ ವಿವಿಧ ವಿಭಾಗಗಳಿವೆ. ಪ್ರತಿನಿತ್ಯ 500ರಿಂದ 800 ಹೊರರೋಗಿಗಳು ಆಸ್ಪತ್ರೆಗೆ ಭೇಟಿ ನೀಡುತ್ತಾರೆ.

ಈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬರುವವರಲ್ಲಿ ಹೆಚ್ಚಿನವರು ಒಂದಲ್ಲ ಒಂದು ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ಆದರೆ, ಅಲ್ಲಿನ ಪ್ರಯೋಗಾಲಯ ನಿರ್ವಹಣೆ ಮಾಡುತ್ತಿದ್ದ ಸಂಸ್ಥೆಯ ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದರಿಂದ ಪ್ರಯೋಗಾಲಯವನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ರೋಗಿಗಳಿಗೆ ಪರೀಕ್ಷೆ ಮಾಡಿಸಿಕೊಳ್ಳುವುದು ಸಮಸ್ಯೆಯಾಗಿದ್ದು, ಚಿಕಿತ್ಸೆಯೂ ವಿಳಂಬ ಆಗುತ್ತಿದೆ. ಸರ್ಕಾರಿ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ)ಕಾರ್ಯನಿರ್ವಹಿಸುತ್ತಿದ್ದ ಈ ಪ್ರಯೋಗಾಲಯವನ್ನು, ಮ್ಯಾಟ್ರಿಕ್ಸ್ ಇಮೇಜಿಂಗ್ ಸಲ್ಯೂಷನ್ಸ್ ಇಂಡಿಯಾ ಸಂಸ್ಥೆಯು ನಿರ್ವಹಣೆ ಮಾಡುತ್ತಿತ್ತು. ವಾರದ ಎಲ್ಲ ದಿನ 24 ಗಂಟೆಯೂ ಕಾರ್ಯನಿರ್ವಹಿಸುತ್ತಿದ್ದ ಈ ಪ್ರಯೋಗಾಲಯದಲ್ಲಿ, ಸಿಟಿ ಸ್ಕ್ಯಾನ್, ಎಂಆರ್‌ಐ, ಎಕ್ಸ್‌-ರೇ, ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್, ಮೂತ್ರ ಹಾಗೂ ರಕ್ತದ ಮಾದರಿ ಪರೀಕ್ಷೆ ಸೇರಿ ವಿವಿಧ ಪರೀಕ್ಷೆಗಳನ್ನು ರಿಯಾಯಿತಿ ದರದಲ್ಲಿ ನಡೆಸಲಾಗುತ್ತಿತ್ತು.



ಪಿಎಂಎಸ್‌ಎಸ್‌ವೈ ಆಸ್ಪತ್ರೆ ಪ್ರಯೋಗಾಲಯ ಸ್ಥಗಿತಗೊಂಡಿದೆ

> **ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದರಿಂದ ಪ್ರಯೋಗಾಲಯ ಸ್ಥಗಿತವಾಗಿದ್ದು, ಟೆಂಡರ್ ಪ್ರಕ್ರಿಯೆ ನಡೆಸಲಾಗುವುದು**
> **ಡಾ. ದಿವ್ಯಪ್ರಕಾಶ್ ಎಂ.**
> ಪಿಎಂಎಸ್‌ಎಸ್‌ವೈ ವಿಶೇಷಾಧಿಕಾರಿ

ಹೊರಗಡೆ ಪರೀಕ್ಷೆಗೆ ಸೂಚನೆ: ಆಸ್ಪತ್ರೆಯಲ್ಲಿ ಪ್ರಯೋಗಾಲಯ ಸ್ಥಗಿತವಾಗಿರುವುದರಿಂದ ಹೊರಗಡೆ ಪರೀಕ್ಷೆ ಮಾಡಿಸಿಕೊಂಡು ಬರುವಂತೆ ರೋಗಿಗಳಿಗೆ ವೈದ್ಯರು ಸೂಚಿಸುತ್ತಿದ್ದಾರೆ. ಬಿಎಂಸಿಆರ್‌ಐ ಆಸ್ಪತ್ರೆಗಳ ಸಂಕೀರ್ಣದಲ್ಲಿರುವ ಪಿಎಂಎಸ್‌ಎಸ್‌ವೈ ಕಟ್ಟಡದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಯತೀಂದ್ರ ಸಿದ್ದರಾಮಯ್ಯ ಅವರ ಸಹ ಮಾಲೀಕತ್ವದ ಮ್ಯಾಟ್ರಿಕ್ಸ್ ಇಮೇಜಿಂಗ್ ಸಲ್ಯೂಷನ್ಸ್ ಇಂಡಿಯಾ ಪ್ರಯೋಗಾಲಯವನ್ನು 2016ರಲ್ಲಿ ಆರಂಭಿಸಲಾಗಿತ್ತು. ಅದಕ್ಕೆ ವಿರೋಧ ವ್ಯಕ್ತವಾದ್ದರಿಂದ ಯತೀಂದ್ರ ಅವರು ಕಂಪನಿಯಿಂದ ಹೊರ ನಡೆದಿದ್ದರು. ಆ ವೇಳೆ ವಿರೋಧಗಳ ಮಧ್ಯೆಯೂ ಪಿಎಂಎಸ್‌ಎಸ್‌ವೈ ಆಸ್ಪತ್ರೆಯು ಮ್ಯಾಟ್ರಿಕ್ಸ್ ಸಂಸ್ಥೆಯೊಂದಿಗಿನ ತನ್ನ ಒಡಂಬಡಿಕೆ ಮುಂದುವರಿಸಿತ್ತು.

‘ತಂದೆಗೆ ಹೃದಯ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ಬರಲಾಗಿತ್ತು. ವೈದ್ಯರು ಸಿಟಿ ಸ್ಕ್ಯಾನ್ ಮಾಡಿಸಲು ಸೂಚಿಸಿದ್ದಾರೆ. ಆಸ್ಪತ್ರೆಯ ಪ್ರಯೋಗಾಲಯ ಸ್ಥಗಿತದಿಂದ ಪರೀಕ್ಷೆ ಮಾಡಿಸುವುದು ಸಮಸ್ಯೆಯಾಗಿದ್ದು, ಖಾಸಗಿ ಪ್ರಯೋಗಾಲಯಕ್ಕೆ ತೆರಳಬೇಕಾಗಿದೆ’ ಎಂದು ಚಾಮರಾಜಪೇಟೆ ನಿವಾಸಿಯೊಬ್ಬರು ತಿಳಿಸಿದರು.

ಇನ್ಫೊಸಿಸ್ ಪ್ರಯೋಗಾಲಯದಲ್ಲಿ ದಟ್ಟಣೆ

ಪಿಎಂಎಸ್‌ಎಸ್‌ವೈನ ಪ್ರಯೋಗಾಲಯ ಸ್ಥಗಿತದಿಂದ ಬಿಎಂಸಿಆರ್‌ಐ ಆಸ್ಪತ್ರೆಗಳ ಸಂಕೀರ್ಣದಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯ ಇನ್ಫೊಸಿಸ್ ಪ್ರಯೋಗಾಲಯದಲ್ಲಿ ರೋಗಿಗಳ ದಟ್ಟಣೆ ಹೆಚ್ಚಿದೆ.

ಮೂರು ಮಹಡಿಗಳ ಈ ಪ್ರಯೋಗಾಲಯದಲ್ಲಿ ರಕ್ತ ಹಾಗೂ ಮೂತ್ರ ಸೇರಿ ವಿವಿಧ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಈ ಪ್ರಯೋಗಾಲಯಕ್ಕೆ ವಿಕ್ಟೋರಿಯಾ ಆಸ್ಪತ್ರೆಯ ರೋಗಿಗಳ ಜತೆಗೆ ವಾಣಿವಿಲಾಸ, ಟ್ರಾಮಾ ಕೇರ್ ಕೇಂದ್ರ, ನೆಫ್ರೊ-ಯೂರಾಲಜಿ ಸಂಸ್ಥೆ ಸೇರಿ ಸುತ್ತಮುತ್ತಲಿನ ಆಸ್ಪತ್ರೆಗಳ ರೋಗಿಗಳೂ ಬರುತ್ತಾರೆ. ಈಗ ಪಿಎಂಎಸ್‌ಎಸ್‌ವೈ ಆಸ್ಪತ್ರೆಯ ರೋಗಿಗಳೂ ಬರುತ್ತಿರುವುದರಿಂದ ಪರೀಕ್ಷೆಗೆ ಸರದಿಯಲ್ಲಿ ದಿನಗಟ್ಟಲೇ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ವರದಿಯೂ ವಿಳಂಬವಾಗುತ್ತಿದೆ.

‘ಪಿಎಂಎಸ್‌ಎಸ್‌ವೈ ಆಸ್ಪತ್ರೆಯು ಮ್ಯಾಟ್ರಿಕ್ಸ್ ಇಮೇಜಿಂಗ್ ಸಲ್ಯೂಷನ್ಸ್ ಇಂಡಿಯಾ ಜೊತೆಗೆ ಏಳು ವರ್ಷಗಳಿಗೆ ಒಡಂಬಡಿಕೆ ಮಾಡಿಕೊಂಡಿತ್ತು. ನಿಯಮಾನುಸಾರ ಏಳು ವರ್ಷಕ್ಕಿಂತ ಹೆಚ್ಚು ಅವಧಿಗೆ ನಿರ್ವಹಣಾ ಗುತ್ತಿಗೆ ನೀಡಲು ಅವಕಾಶವಿಲ್ಲ. ಅಲ್ಲದೆ, ರಾಷ್ಟ್ರೀಯ ವೈದ್ಯಕೀಯ ಪರಿಷತ್ತು (ಎನ್‌ಎಂಸಿ) ನಿಯಮದ ಪ್ರಕಾರ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪಿಪಿಪಿ ಮಾದರಿ ಪ್ರಯೋಗಾಲಯ ತೆರೆಯಲು ಖಾಸಗಿಯವರಿಗೆ ಅವಕಾಶ ನೀಡಬಾರದೆಂದು ವೈದ್ಯಕೀಯ ವಿದ್ಯಾರ್ಥಿಗಳು ಆಕ್ಷೇಪಿಸಿದ್ದಾರೆ.

ಹೀಗಾಗಿ, ಆಸ್ಪತ್ರೆಯಿಂದಲೇ ಪ್ರಯೋಗಾಲಯ ನಡೆಸುವ ಕುರಿತು ಚರ್ಚೆ ನಡೆಯುತ್ತಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವೈದ್ಯರೊಬ್ಬರು ತಿಳಿಸಿದರು.



ಇನ್ಫೊಸಿಸ್ ಪ್ರಯೋಗಾಲಯದಲ್ಲಿ ರೋಗಿಗಳ ದಟ್ಟಣೆ ಉಂಟಾಗಿರುವುದು

ಘಟಪ್ರಭಾ ಪ್ರವಾಹ: ಶೀಘ್ರ ಸಭೆ

ಬೆಂಗಳೂರು: ‘ಘಟಪ್ರಭಾ ನದಿಯ ಪ್ರವಾಹದಿಂದ ಪ್ರತಿವರ್ಷ ಉಂಟಾಗುತ್ತಿರುವ ಹಾನಿಯ ಕುರಿತು ನೀರಾವರಿ, ಕಂದಾಯ ಮತ್ತು ಲೋಕೋಪಯೋಗಿ ಸಚಿವರ ಜೊತೆ ಶೀಘ್ರದಲ್ಲಿ ಸಭೆ ನಡೆಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಧೋಳ ತಾಲ್ಲೂಕಿನ ರೈತರ ನಿಯೋಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಆಸ್ತಿ ತೆರಿಗೆ ಸುಸ್ತಿದಾರರ ಪಟ್ಟಿ ಪ್ರಕಟ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿರುವ ತಲಾ 50 ಆಸ್ತಿ ಮಾಲೀಕರ ಹೆಸರನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ದಂಡ ಹಾಗೂ ಬಡ್ಡಿ ಇಲ್ಲದೆ ಪಾವತಿಸುವ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗಿದೆ. ಫೆಬ್ರುವರಿಯಲ್ಲಿ ಜಾರಿಯಾಗಿದ್ದ ಒಟಿಎಸ್ ಯೋಜನೆ ಜುಲೈ 31ರಂದು ಕೊನೆಗೊಂಡಿತ್ತು.



ವಿಸ್ತರಣೆಯಾಗಿ ಒಂದು ತಿಂಗಳಾದರೂ ಆಸ್ತಿ ಸಂಗ್ರಹದಲ್ಲಿ ಹೆಚ್ಚಳ ಕಂಡು ಬಂದಿಲ್ಲ. ಹೀಗಾಗಿ, ತೆರಿಗೆ ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರ ಹೆಸರನ್ನು ಸಾರ್ವಜನಿಕಗೊಳಿಸಲಾಗಿದೆ.

ಬಿಬಿಎಂಪಿಯ ಪ್ರತಿ ವಲಯದಲ್ಲೂ ಅತಿಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿ ಕೊಂಡಿರುವ ತಲಾ 50 ಆಸ್ತಿ ಮಾಲೀಕರ ಹೆಸರನ್ನು ಪಾಲಿಕೆಯ ವೆಬ್‌ಸೈಟ್ https://bbmptax.karnataka.gov.in/documents/DefaulterslistZones1.pdf ಪ್ರಕಟಿಸ ಲಾಗಿದೆ. ಅಲ್ಲದೆ, ಪುನರ್ ವಿಮರ್ಶೆ ಮಾಡಿದ ನಂತರ ಅತಿಹೆಚ್ಚು ಬಾಕಿ ಉಳಿಸಿಕೊಂಡಿರುವ ತೆರಿಗೆದಾರರ ಮಾಹಿತಿಯನ್ನೂ ಪ್ರಕಟಿಸಲಾಗಿದೆ.

2024ರ ಆಗಸ್ಟ್ 1ರಂತೆ 3,04,810 ಆಸ್ತಿಗಳಿಂದ ₹831.53 ಕೋಟಿ ತೆರಿಗೆ ಹಿಂಬಾಕಿ ಇದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಬೀದಿ ನಾಯಿಗಳಿಂದ ದಾಳಿ: ವೃದ್ಧೆ ಸಾವು

ಒಂದನೇ ಪುಟದಿಂದ...

ಸ್ಥಳೀಯರ ಆಕ್ರೋಶ: ಬೀದಿ ನಾಯಿಗಳ ಹಾವಳಿ ಮಿತಿಮೀರಿದ್ದು ನಾಯಿಗಳ ಹಾವಳಿ ನಿಯಂತ್ರಿಸಲು ಬಿಬಿಎಂಪಿ ಅಧಿಕಾರಿಗಳು, ಸಿಬ್ಬಂದಿ ವಿಫಲವಾಗಿದ್ದಾರೆ ಎಂದು ಸ್ಥಳೀಯರು ಆರೋಪಿಸಿದರು. ಗಂಗಮ್ಮನಗುಡಿ ವೃತ್ತ, ಎಂ.ಎಸ್. ಪಾಳ್ಯ ರಸ್ತೆ, ಜಾಲಹಳ್ಳಿ ಕ್ರಾಸ್, ಎಸ್.ಎಂ. ರಸ್ತೆ, ಪೈಪ್‌ಲೈನ್ ರಸ್ತೆ, ದಾಸರಹಳ್ಳಿ, ಹೆಸರುಘಟ್ಟ ಭಾಗದಲ್ಲಿ ಬೀದಿ ನಾಯಿಗಳ ಹಾವಳಿ ತೀವ್ರವಾಗಿದೆ ಎಂದು ಸ್ಥಳೀಯರು ಹೇಳಿದರು. ಮಾಂಸದಂಗಡಿಯವರು ಹಾಗೂ ಹೋಟೆಲ್‌ನವರು ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುತ್ತಿಲ್ಲ. ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ಅದನ್ನು ತಿನ್ನುವ ನಾಯಿಗಳು ಮಕ್ಕಳು ಹಾಗೂ ವೃದ್ಧರ ಮೇಲೆ ದಾಳಿ ನಡೆಸುತ್ತಿವೆ ಎಂದು ಸ್ಥಳೀಯರು ದೂರಿದರು.

‘ರಾಜ್ಯಪಾಲರ ನಡೆ ಖಂಡನೀಯ’

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರ ನಡೆ ಖಂಡನೀಯ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘ ಹೇಳಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಸುರೇಶ್ ಎಂ. ಲಾತೂರ್, ಪ್ರಧಾನ ಕಾರ್ಯದರ್ಶಿ ಗಂಗಪ್ಪ ಕೆ., ಖಜಾಂಚಿ ಕೆ.ಜಿ. ಶಿವಣ್ಣ, ‘ರಾಜ್ಯಪಾಲರು ಕಾನೂನು, ನಿಯಮಗಳನ್ನು ಗಾಳಿಗೆ ತೂರಿ, ಚುನಾಯಿತ ಸರ್ಕಾರವನ್ನು ಅಸ್ಥಿರಗೊಳಿಸುತ್ತಿದ್ದಾರೆ. ಹಿಂದುಳಿದ ವರ್ಗಗಳ ನಾಯಕ ಸಿದ್ದರಾಮಯ್ಯ ಅವರ ವರ್ಚಸ್ಸು, ಜನಪ್ರಿಯತೆ ಸಹಿಸದೆ ಪಟ್ಟಭದ್ರ ಹಿತಾಸಕ್ತಿಗಳು ಅವರನ್ನು ಅಧಿಕಾರದಿಂದ ಕೆಳಕ್ಕಿಳಿಸಲು ಸಂಚು ನಡೆಸಿವೆ’ ಎಂದು ಆರೋಪಿಸಿದರು.

‘ಸಂವಿಧಾನ ಮತ್ತು ಒಕ್ಕೂಟ ತತ್ವದ ವಿರೋಧಿಯಾಗಿರುವ ರಾಜ್ಯಪಾಲರನ್ನು ಕೂಡಲೇ ವಾಪಸ್ ಕರೆಸಿಕೊಳ್ಳಬೇಕು. ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿರುವ ಸರ್ಕಾರಗಳನ್ನು ಬುಡ ಮೇಲು ಮಾಡಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಇದು ಅಸಂವಿಧಾನಿಕ’ ಎಂದರು.

ಗುತ್ತಿಗೆದಾರರಿಂದ ಮತ್ತೆ ಹೋರಾಟ?

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಂಡ ಕಾಮಗಾರಿಗಳಿಗೆ ಶೇ 25ರಷ್ಟು ಬಿಲ್ ಪಾವತಿಸಲು ಕ್ರಮ ಕೈಗೊಳ್ಳದ್ದರಿಂದ ಮತ್ತೆ ಹೋರಾಟಕ್ಕೆ ಸಜ್ಜಾಗಲು ಬಿಬಿಎಂಪಿ ಗುತ್ತಿಗೆದಾರರ ಸಂಘ ನಿರ್ಧರಿಸಿದೆ.

‘ಸರ್ಕಾರದ ಅನುದಾನ ಹಾಗೂ ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗಳಿಗೆ ಪಾವತಿಸಿರುವ ಬಿಲ್ ಮೊತ್ತದಲ್ಲಿ ಶೇ25ರಷ್ಟು ಮೊತ್ತವನ್ನು ಹಿಡಿದುಕೊಳ್ಳಲಾಗಿದೆ. ಈ ಮೊತ್ತ ಪಾವತಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಆದರೆ ಅವರ ಆಶ್ವಾಸನೆ ಇನ್ನೂ ಈಡೇರಿಲ್ಲ. ಹೀಗಾಗಿ, ಸಂಘದ ಪದಾಧಿಕಾರಿಗಳ ಸಭೆಯನ್ನು ಶುಕ್ರವಾರ ಕರೆಯಲಾಗಿದ್ದು, ಅಂದು ಹೋರಾಟದ ಕುರಿತು ನಿರ್ಧರಿಸಲಾಗುತ್ತದೆ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ.ನಂದಕುಮಾರ್ ಅವರು ತಿಳಿಸಿದ್ದಾರೆ.

ಅನುಮಾನ, ಅಪನಂಬಿಕೆ ಬೇಡ: ಸಮುದಾಯದ ಮುಖಂಡರಿಗೆ ಸಿದ್ದರಾಮಯ್ಯ ಸ್ಪಷ್ಟ ಭರವಸೆ

ಒಳಮೀಸಲಾತಿ ನೀಡಲು ಬದ್ಧ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಸಮುದಾಯಕ್ಕೆ ಒಳಮೀಸಲಾತಿ ನೀಡಲು ನಾನು ಬದ್ಧನಾಗಿದ್ದೇನೆ. ಇದರ ಬಗ್ಗೆ ಯಾವುದೇ ಅನುಮಾನ, ಅಪನಂಬಿಕೆ ಬೇಡ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.


ಸಚಿವರಾದ ಕೆ.ಎಚ್.ಮುನಿಯಪ್ಪ, ಆರ್.ಬಿ.ತಿಮ್ಮಾಪುರ, ಮಾಜಿ ಸಚಿವ ಎಚ್.ಆಂಜನೇಯ ಮತ್ತು ಕಾಂಗ್ರೆಸ್ ಮುಖಂಡ ಎಲ್.ಹನುಮಂತಯ್ಯ ಮತ್ತು ಇತರರನ್ನು ಒಳಗೊಂಡ ನಿಯೋಗದ ಜತೆ ಬುಧವಾರ ಚರ್ಚೆ ನಡೆಸಿ ಮಾತನಾಡಿದರು.

'ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ಕಾನೂನು ತಜ್ಞರು ಮತ್ತು ದಲಿತ ಸಮುದಾಯದ ನಾಯಕರ ಜತೆ ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ. ಒಳ ಮೀಸಲಾತಿಯನ್ನು ದಲಿತ ಸಮುದಾಯ ಒಮ್ಮತದಿಂದ ಒಪ್ಪಿಕೊಂಡು ಅನುಷ್ಠಾನಕ್ಕೆ ಬೆಂಬಲ ನೀಡಿರುವುದು ಸಂತೋಷದ ವಿಷಯ. ಒಳಮೀಸಲಾತಿ ಜಾರಿಗೆ ಬದ್ಧನಾಗಿದ್ದೇನೆ' ಎಂದು ಭರವಸೆ ನೀಡಿದರು.

'ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಕೆನೆಪದರದ ವಿಚಾರ ಪ್ರಸ್ತಾಪವಾಗಿರುವುದು ಕೆಲವರಲ್ಲಿ ಗೊಂದಲ ಉಂಟು ಮಾಡಿದೆ. ನ್ಯಾಯಾಲಯದ ತೀರ್ಪಿನ ವಿಶ್ಲೇಷಣೆಗೆ ನಾನು ಹೋಗುವುದಿಲ್ಲ. ನಾನು ಅರ್ಥ ಮಾಡಿಕೊಂಡಂತೆ ಒಳ ಮೀಸಲಾತಿ ಜಾರಿಗೊಳಿಸಲು ಕೆನೆ ಪದರದ ವಿಚಾರ ಅಡ್ಡಿಯಾಗಲಾರದು. ಕೆನೆಪದರದ ಬಗ್ಗೆ ದಲಿತ ಸಮುದಾಯದ ನಿಲುವೇ ನನ್ನ ನಿಲುವೂ ಆಗಿದೆ' ಎಂದರು.

'ನಾನು, ನಮ್ಮ ಪಕ್ಷ ಮತ್ತು ನಮ್ಮ ಸರ್ಕಾರಕ್ಕೆ ಸಾಮಾಜಿಕ ನ್ಯಾಯದ ಪರವಾದ ಖಚಿತ ಮತ್ತು ದೃಢ ನಿಲುವು ಇದೆ. ಇದರಲ್ಲಿ ಗೊಂದಲ ಇಲ್ಲವೇ ಇಲ್ಲ. ಮೀಸಲಾತಿಯ ಸೌಲಭ್ಯದ ನ್ಯಾಯಯುತ ಹಂಚಿಕೆಗೆ ಒಳ ಮೀಸಲಾತಿ ಅಗತ್ಯ ಎನ್ನುವುದು ಇತ್ತೀಚಿನ ದಿನಗಳಲ್ಲಿ ಎಲ್ಲರಿಗೂ ಅರಿವಾಗಿದೆ. ಸುಪ್ರೀಂ ಕೋರ್ಟ್ ತೀರ್ಪು ಕೂಡಾ ಇದೇ ಅಭಿಪ್ರಾಯವನ್ನು ಹೊಂದಿದೆ' ಎಂದರು.

'ಬಿಜೆಪಿ ನಾಯಕರು ಅನಗತ್ಯ ಊಹಾಪೋಹಗಳ ಮೂಲಕ ಒಳಮೀಸಲಾತಿ ವಿಷಯವನ್ನು ಮುಂದಿಟ್ಟುಕೊಂಡು ನಮ್ಮ ಸರ್ಕಾರದ ವಿರುದ್ಧ ದಲಿತರನ್ನು ಎತ್ತಿಕಟ್ಟುವ ಕುಟಿಲ ಪ್ರಯತ್ನ ನಡೆಸುತ್ತಿದ್ದಾರೆ. ಸಾಮಾಜಿಕ ನ್ಯಾಯದ ವಿರೋಧಿಗಳಾದ ಬಿಜೆಪಿ ನಾಯಕರ ಕುಟಿಲತನವನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ದಲಿತ ಸಮುದಾಯಕ್ಕೆ ಇದೆ' ಎಂದು ಸಿದ್ದರಾಮಯ್ಯ ಹೇಳಿದರು.



ಸಚಿವರಾದ ಕೆ.ಎಚ್.ಮುನಿಯಪ್ಪ, ಆರ್.ಬಿ.ತಿಮ್ಮಾಪುರ, ಮಾಜಿ ಸಚಿವ ಎಚ್. ಆಂಜನೇಯ, ಮಾಜಿ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಅವರ ನೇತೃತ್ವದ ದಲಿತ ಶಾಸಕರು ಮತ್ತು ಮುಖಂಡರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿಯಾಗಿ ಒಳ ಮೀಸಲಾತಿ ಜಾರಿ ಸಂಬಂಧ ಚರ್ಚೆ ನಡೆಸಿತು

'ಒಳ ಮೀಸಲಾತಿ: ಪರಿಶಿಷ್ಟರಲ್ಲಿ ಒಮ್ಮತ ಯತ್ನ'

ಬೆಂಗಳೂರು: ಎಲ್ಲ ಪರಿಶಿಷ್ಟ ಸಮುದಾಯಗಳನ್ನು ಒಂದೇ ಸೂರಿನಡಿ ತಂದು ಒಳ ಮೀಸಲಾತಿ ಜಾರಿಗೊಳಿಸುವಂತೆ ಒಮ್ಮತದಿಂದ ರಾಜ್ಯ ಸರ್ಕಾರದ ಮುಂದೆ ಹಕ್ಕೊತ್ತಾಯ ಮಂಡಿಸಲು ಕಾಂಗ್ರೆಸ್ ಶಾಸಕ ಪಿ.ಎಂ. ನರೇಂದ್ರಸ್ವಾಮಿ ನೇತೃತ್ವದ 'ಪರಿಶಿಷ್ಟ ಜಾತಿ ಒಳಮೀಸಲಾತಿ ಅನುಷ್ಠಾನ ಸಮಿತಿ' ಯತ್ನ ಮುಂದುವರಿಸಿದೆ.

ಪರಿಶಿಷ್ಟರಲ್ಲಿ ಅತಿಹಿಂದುಳಿದವರನ್ನು ಗುರುತಿಸಿ ಒಳಮೀಸಲಾತಿ ನೀಡುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಎತ್ತಿಹಿಡಿದು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪಿನ ಕಾರಣ ಸಮುದಾಯದ ಪ್ರಮುಖರನ್ನು ಒಗ್ಗೂಡಿಸಲು ಸಮಿತಿ ಸಭೆಗಳನ್ನು ನಡೆಸುತ್ತಿದೆ.



ಮುಂದಿನ ಸಭೆಯಲ್ಲಿ ಸಮಾನ ಮನಸ್ಕರ ಜೊತೆ ಚರ್ಚಿಸಿ, ಬಳಿಕ ಸಿ.ಎಂ ಭೇಟಿ ಮಾಡಿ ಕಾಲಮಿತಿಯಲ್ಲಿ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಲು ನಿರ್ಧರಿಸಿದ್ದೇವೆ

ಪಿ.ಎಂ. ನರೇಂದ್ರಸ್ವಾಮಿ, ಪರಿಶಿಷ್ಟ ಜಾತಿ ಒಳಮೀಸಲಾತಿ ಅನುಷ್ಠಾನ ಸಮಿತಿ

ಪರಿಶಿಷ್ಟ ಸಮುದಾಯದ ಸ್ವಾಮೀಜಿಗಳು ಮತ್ತು ವಿವಿಧ ಸಂಘಟನೆಗಳ ಪ್ರಮುಖರ ಜೊತೆ ಶಾಸಕರ ಭವನದಲ್ಲಿ ನರೇಂದ್ರಸ್ವಾಮಿ ಅವರು ಬುಧವಾರ ಚರ್ಚೆ ನಡೆಸಿದರು. ಒಳ ಮೀಸಲಾತಿ ಜಾರಿಗೆ ಅಡ್ಡಿಯಾಗಿರುವ ಸಮುದಾಯಗಳ ನಡುವಿನ ಆಂತರಿಕ ತಿಕ್ಕಾಟವನ್ನು ಮಾತುಕತೆ–ಸಮಾಲೋಚನೆ ಮೂಲಕ ಪರಿಹರಿಸಿಕೊಳ್ಳುವ ತುರ್ತು ಅಗತ್ಯದ ಬಗ್ಗೆ ಸಭೆಯಲ್ಲಿ ವಿಚಾರ ವಿನಿಮಯ ನಡೆಯಿತು.

ರಾಜ್ಯದಲ್ಲಿ ಪರಿಶಿಷ್ಟರಲ್ಲಿ ಒಳ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ವರದಿ ನೀಡಿದೆ. ಆದರೆ, ರಾಜಕೀಯವೂ ಸೇರಿದಂತೆ ನಾನಾ ಕಾರಣಗಳಿಗೆ ಈ ವರದಿ ಬಹಿರಂಗ ಆಗಿಲ್ಲ. ವರದಿಯಲ್ಲಿ ಒಳ ಮೀಸಲಾತಿ ವರ್ಗೀಕರಣದ ಪ್ರಸ್ತಾವ ಇದ್ದರೂ ಹೆಚ್ಚಳಗೊಂಡ ಮೀಸಲಾತಿ ಪ್ರಮಾಣ, ಜನಸಂಖ್ಯೆ, ಸಮುದಾಯಗಳ ಸದ್ಯದ ಸ್ಥಿತಿಗತಿಯನ್ನು ಪರಿಗಣಿಸಿ, ಎಲ್ಲ ಭಿನ್ನಾಭಿಪ್ರಾಯಗಳಿಗೆ ಸೌಹಾರ್ದಯುತ ಚರ್ಚೆಯ ಮೂಲಕ ಪರಿಹಾರ ಕಂಡು ಕೊಳ್ಳಬೇಕು. ನಂತರ ಒಳ ಮೀಸಲಾತಿ ಜಾರಿಗೆ ಸರ್ಕಾರದ ಮೇಲೆ ಒತ್ತಡ ಹೇರಲು ಸಭೆಯಲ್ಲಿದ್ದ ಪ್ರಮುಖರು ಅಭಿಪ್ರಾಯ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ ನರೇಂದ್ರಸ್ವಾಮಿ, 'ಸುಪ್ರೀಂ ಕೋರ್ಟ್ ತೀರ್ಪು ಬಳಿಕ ಮೊದಲ ಸಭೆ ನಡೆಸಿದ್ದೇವೆ. ಇಂದಿನ ಸಭೆಗೆ ಶಾಸಕರು, ಸ್ವಾಮೀಜಿಗಳನ್ನು ಆಹ್ವಾನಿಸಿದ್ದೆವು. ರುದ್ರಪ್ಪ ಲಮಾಣಿ, ಶಿವರಾಜ ತಂಗಡಗಿಯವರು ಅನಿವಾರ್ಯ ಕಾರಣಗಳಿಂದ ಹಾಜರಾಗಲಾಗದು ಎಂದು ತಿಳಿಸಿದ್ದರು. ಒಳ ಮೀಸಲಾತಿ ಜಾರಿಗೆ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಬೇಕಾದ ಹೆಜ್ಜೆಗಳ ಬಗ್ಗೆ ಕೆಲವು ಮಹತ್ವದ ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ' ಎಂದರು.

ಸುದ್ದಿ 2 ನಿಮಿಷ

ಸಾರಿಗೆ ನಿಗಮಗಳನ್ನು ಮುಚ್ಚುವ ಸ್ಥಿತಿಗೆ ತಂದಿದ್ದ ಬಿಜೆಪಿ –ಸಚಿವ

ಬೆಂಗಳೂರು: 'ಬಿಜೆಪಿ ಆಡಳಿತದಲ್ಲಿ ಸಾರಿಗೆ ನಿಗಮಗಳನ್ನು ಮುಚ್ಚುವ ಸ್ಥಿತಿಗೆ ತರಲಾಗಿತ್ತು. ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ನಿಗಮಗಳು ಸುಲಲಿತವಾಗಿ ನಡೆಯುತ್ತಿವೆ. ಇದರ ಅರಿವಿಲ್ಲದೇ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅಪ್ರಬುದ್ಧ ಹೇಳಿಕೆ ನೀಡುತ್ತಿದ್ದಾರೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಟೀಕಿಸಿದ್ದಾರೆ.

'ಶಕ್ತಿ ಯೋಜನೆಯಡಿ ಸರ್ಕಾರ ಕೆಎಸ್ಆರ್‌ಟಿಸಿಗೆ ₹4,500 ಕೋಟಿ ನೀಡಬೇಕಿದೆ. ವೇತನ ಪಾವತಿಗೂ ಹಣವಿಲ್ಲದೇ 3-4 ತಿಂಗಳಲ್ಲಿ ಮುಚ್ಚಬೇಕಾಗುತ್ತದೆ' ಎಂಬ ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರೆ.

'ಶಕ್ತಿ ಯೋಜನೆಯಡಿ ಪ್ರತಿ ತಿಂಗಳು ನಿಗಮಗಳಿಗೆ ಹಣ ಪಾವತಿಸಲಾಗುತ್ತಿದೆ. ನಾಲ್ಕು ಸಾರಿಗೆಗಳಿಗೆ ₹1,467 ಕೋಟಿ ಬಾಕಿ ನೀಡಬೇಕಿದೆ. ಕೆಎಸ್ಆರ್‌ಟಿಸಿ ಒಂದಕ್ಕೇ ₹4,500 ಕೋಟಿ ಬಾಕಿ ಇದೆ ವಿಜಯೇಂದ್ರ ತಪ್ಪು ಮಾಹಿತಿ ನೀಡಿದ್ದಾರೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಸಿ.ಎಂ. ಆಗಿದ್ದಾಗ ಸಾರಿಗೆ ನಿಗಮಗಳು ₹5,900 ಕೋಟಿ ನಷ್ಟದಲ್ಲಿದ್ದವು. ನಿಗಮಗಳನ್ನು ಮುಚ್ಚಿಬಿಡಿ ಎಂದು ಹೇಳಿ ಹೋಗಿದ್ದರು ಎಂದು ತಿಳಿಸಿದ್ದಾರೆ.'ಈಗ ಕಳೆದೊಂದು ವರ್ಷದಲ್ಲಿ 3,000 ಬಸ್‌ಗಳು ಸೇರ್ಪಡೆ ಆಗಿವೆ. 9,000 ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಿದ್ದು, 6,500 ಹುದ್ದೆಗಳ ಭರ್ತಿಗೆ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದೂ ವಿವರಿಸಿದ್ದಾರೆ.



ಕಾಮೆಡ್–ಕೆ: ಮೂರನೇ ಸುತ್ತಿನ ಕೌನ್ಸೆಲಿಂಗ್ ಮುಂದೂಡಿಕೆ

ಬೆಂಗಳೂರು: ವಿದ್ಯಾರ್ಥಿಗಳು, ಪೋಷಕರ ಒತ್ತಡಕ್ಕೆ ಮಣಿದ ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) 3ನೇ ಸುತ್ತಿನ ಕೌನ್ಸೆಲಿಂಗ್ ಮುಂದೂಡಿದೆ.

ಕಾಮೆಡ್-ಕೆ ಆ.26ರಿಂದ 30ರವರೆಗೆ ಮೂರನೇ ಸುತ್ತಿನ ಕೌನ್ಸೆಲಿಂಗ್ ನಿಗದಿಪಡಿಸಿತ್ತು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸೆ.1ರಂದು ಮೊದಲ ಸುತ್ತಿನ ಸೀಟು ಹಂಚಿಕೆ ಮಾಡುತ್ತಿದ್ದು, ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಮುಂದೂಡುವಂತೆ ಒತ್ತಾಯ ಮಾಡಿದ್ದರು.

ಪರಿಷ್ಕೃತ ವೇಳಾಪಟ್ಟಿಯಂತೆ ಮೊದಲ ಎರಡು ಸುತ್ತಿನಲ್ಲಿ ಹಂಚಿಕೆಯಾಗಿದ್ದ ಸೀಟುಗಳ ರದ್ದುಪಡಿಸಿಕೊಳ್ಳಲು ಸೆ. 1ರಿಂದ 3ರವರೆಗೆ, ಆಯ್ಕೆಗಳಲ್ಲಿನ ತಿದ್ದುಪಡಿಗೆ ಸೆ. 4ರಿಂದ 6ರವರೆಗೆ, ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸಲು ಸೆ. 9ರವರೆಗೆ, ಕಾಲೇಜುಗಳಿಗೆ ಪ್ರವೇಶ ಪಡೆಯಲು ಸೆ. 14ರವರೆಗೆ ಸಮಯ ನೀಡಲಾಗಿದೆ. ಆ ನಂತರ ಮೂರನೇ ಸುತ್ತು ಆರಂಭಿಸಲಾಗುತ್ತದೆ.

'ಅಹಿಂದ' ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ₹26 ಸಾವಿರ ಕೋಟಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವ ರಾಜ್ಯ ಸರ್ಕಾರದ ನಡೆ ಖಂಡಿಸಿ ಕರ್ನಾಟಕ ಅಹಿಂದ ಸಂಘಟನೆಗಳ ಒಕ್ಕೂಟದ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು 'ಕಾಂಗ್ರೆಸ್ ಹಠಾವೋ, ದಲಿತ್ ಬಚಾವೋ', 'ನಿಮ್ಮ ಗ್ಯಾರಂಟಿಗೆ ನಮ್ಮ ಹಣ ಏಕೆ?', 'ದಲಿತ ವಿರೋಧಿ ಸಿದ್ದರಾಮಯ್ಯ, ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ' ಎಂಬ ಫಲಕ ಪ್ರದರ್ಶಿಸಿದರು.

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರು, 'ಎಸ್‌ಸಿಎಸ್‌ಪಿ, ಟಿಸಿಪಿಯ ಅನುದಾನದಲ್ಲಿ ಈವರೆಗೆ ₹2.56 ಲಕ್ಷ ಕೋಟಿ ಅನುದಾನವನ್ನು ಹಿಂದಿನ ಸರ್ಕಾರಗಳು ಅನ್ಯ ಉದ್ದೇಶಕ್ಕೆ ಬಳಸಿವೆ ಎಂದು ಮುಖ್ಯಮಂತ್ರಿ ಹೇಳಿದ್ದರು. ಈಗ ಅವರ ನೇತೃತ್ವದ ಸರ್ಕಾರವೇ ₹26 ಸಾವಿರ ಕೋಟಿ ವರ್ಗಾವಣೆ ಮಾಡುತ್ತಿದೆ. ಇದು, ಯಾವುದಕ್ಕೆ ಬಳಕೆಯಾಗಿದೆ ಎಂದು ಶ್ವೇತಪತ್ರ ಹೊರಡಿಸಬೇಕು. ಈ ₹3 ಲಕ್ಷ ಕೋಟಿ ಅನುದಾನದಲ್ಲಿ ದಲಿತರಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಬೇಕು' ಎಂದು ಆಗ್ರಹಿಸಿದರು.

'ಕ್ರಾಂಗೆಸ್‌ಗೆ ದಲಿತರ ಏಳಿಗೆ ಬೇಕಾಗಿಲ್ಲ. ನಮ್ಮ ಮತ ಮಾತ್ರ ಬೇಕಾಗಿದೆ. ಆದ್ದರಿಂದ, ನಾವು ನಮ್ಮ ಮತಶಕ್ತಿಯ ಮೂಲಕ ಹೋರಾಡ ಬೇಕಿದೆ. ಪ್ರಜಾತಾಂತ್ರಿಕವಾಗಿ ಈ ಸರ್ಕಾರ ಕಿತ್ತೊಗೆಯಬೇಕು. ನಮ್ಮ ಹಿತಾಸಕ್ತಿ ರಕ್ಷಣೆ ಮತ್ತು ಪ್ರತ್ಯೇಕ ರಾಜಕೀಯ ಅಸ್ಮಿತೆಗಾಗಿ ರಾಜಕೀಯ ಪಕ್ಷ ಕಟ್ಟಬೇಕಿದೆ' ಎಂದರು.

ಒಕ್ಕೂಟದ ಹರಿರಾಮ್, ಹೈಕೋರ್ಟ್ ವಕೀಲ ಬಾಲನ್, ಎಎಪಿ ಮುಖಂಡ ಮೋಹನ್ ದಾಸರಿ ಇದ್ದರು.

'ಅಹಿಂದ ಪರಿಕಲ್ಪನೆ ಕಾಂಗ್ರೆಸ್‌ನದ್ದಲ್ಲ'

'ಅಹಿಂದ ಕಾಂಗ್ರೆಸ್‌ನ ಪರಿಕಲ್ಪನೆ ಅಲ್ಲ, ಇದು ದಲಿತ ಚಳವಳಿಯ ಪರಿಕಲ್ಪನೆ. ಅದನ್ನು ಬಳಸಿಕೊಂಡು ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಅಧಿಕಾರ ಅನುಭವಿಸುವ ಮೂಲಕ ದಲಿತರಿಗೆ ಅನ್ಯಾಯ ಮಾಡುತ್ತಿದ್ದಾರೆ' ಎಂದು ಕೋಟಿಗಾನಹಳ್ಳಿ ರಾಮಯ್ಯ ಆರೋಪಿಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿಕೆ

'ಎನ್‌ಪಿಎಸ್ ರದ್ದತಿ ಮುಂದಿನ ಗುರಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಹೊಸ ಪಿಂಚಣಿ ವ್ಯವಸ್ಥೆ (ಎನ್.ಪಿ.ಎಸ್) ರದ್ದುಪಡಿಸಿ ಹಳೆ ಪಿಂಚಣಿ ವ್ಯವಸ್ಥೆ (ಒ.ಪಿ.ಎಸ್) ಜಾರಿಗೊಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘ ಹೋರಾಟ ಮುಂದುವರಿಸಲಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ತಿಳಿಸಿದರು.

ಇಲ್ಲಿನ ಬಂಟರ ಭವನದಲ್ಲಿ ಬುಧವಾರ ನಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

'ಏಳನೇ ವೇತನ ಆಯೋಗದ ಶಿಫಾರಸುಗಳ ಜಾರಿ ಹಾಗೂ ಆರೋಗ್ಯ ಸೌಲಭ್ಯ ಒದಗಿಸುವುಕ್ಕೆ ಸಂಬಂಧಿಸಿದಂತೆ ಸಂಘ ಮುಂದಿಟ್ಟ ಬೇಡಿಕೆಗಳನ್ನು ಸರ್ಕಾರ ಈಡೇರಿಸಿದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ನೌಕರರು ಆಭಾರಿಯಾಗಿದ್ದೇವೆ. ಹೊಸ ಪಿಂಚಣಿ ವ್ಯವಸ್ಥೆ ನಾಲ್ಕೈದು ತಿಂಗಳಲ್ಲಿ ರದ್ದಾಗುವ ನಿರೀಕ್ಷೆ ಇದೆ. ಒಂದು ವೇಳೆ ಇದು ಸಾಧ್ಯವಾಗದೇ ಇದ್ದರೆ ಎಲ್ಲರೂ ಒಗ್ಗೂಡಿ ಹಳೆ ಪಿಂಚಣಿ ವ್ಯವಸ್ಥೆ ಜಾರಿಗೆ ಪಟ್ಟು ಹಿಡಿಯಲಾಗುವುದು' ಎಂದು ಅವರು ಹೇಳಿದರು.

'ಹೊಸ ಪಿಂಚಣಿ ವ್ಯವಸ್ಥೆಗೆ ವ್ಯಕ್ತವಾದ ವಿರೋಧ ಪರಿಗಣಿಸಿದ ರಾಜ್ಯ ಸರ್ಕಾರ, ಅಧ್ಯಯನಕ್ಕೆ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿ ಶೀಘ್ರದಲ್ಲೇ ಸರ್ಕಾರಕ್ಕೆ ವರದಿ ನೀಡುವ ಸಾಧ್ಯತೆ ಇದೆ. ಕಾಂಗ್ರೆಸ್ ಆಡಳಿತದ ಅವಧಿ ಇನ್ನೂ ನಾಲ್ಕು ವರ್ಷ ಇರುವುದರಿಂದ ಪಿಂಚಣಿ ಸಮಸ್ಯೆಗೆ ಪರಿಹಾರ ಸಿಗುವ ಭರವಸೆ ಇದೆ. ಕೇಂದ್ರ ಸರ್ಕಾರಿ ನೌಕರರಿಗೆ ಸಮಾನವಾದ ವೇತನ ಶ್ರೇಣಿಯನ್ನು ರಾಜ್ಯ ಸರ್ಕಾರಿ ನೌಕರರಿಗೂ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.



ದಾವಣಗೆರೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘ ಬುಧವಾರ ಆಯೋಜಿಸಿದ್ದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್ ಷಡಾಕ್ಷರಿ ಮಾತನಾಡಿದರು –ಪ್ರಜಾವಾಣಿ ಚಿತ್ರ

'ಅಕ್ಟೋಬರ್ ಅಂತ್ಯಕ್ಕೆ ಚುನಾವಣೆ'

ರಾಜ್ಯ ಸರ್ಕಾರಿ ನೌಕರರ ಸಂಘದ ನೂತನ ಪದಾಧಿಕಾರಿಗಳ ಚುನಾವಣೆಯನ್ನು ಅಕ್ಟೋಬರ್ ಕೊನೆಯ ವಾರ ನಡೆಸಲು ರಾಜ್ಯ ಕಾರ್ಯಕಾರಿಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

'ಸಂಘದ ಈಗಿನ ಪದಾಧಿಕಾರಿಗಳ ಅವಧಿ ಆಗಸ್ಟ್ 8ಕ್ಕೆ ಮುಕ್ತಾಯವಾಗಿದೆ. ಸೆಪ್ಟೆಂಬರ್‌ನಲ್ಲಿ ಚುನಾವಣೆ ನಡೆಸಲು ತೀರ್ಮಾನಿಸಲಾಗಿತ್ತು. ದಸರಾ ರಜೆಯ ಕಾರಣಕ್ಕೆ ಶಿಕ್ಷಕರಿಗೆ ತೊಂದರೆ ಆಗಬಹುದು. ಇದರಿಂದ ಸಮಯ ಬದಲಾವಣೆ ಮಾಡಲಾಗಿದೆ. ಅಕ್ಟೋಬರ್‌ನಲ್ಲಿ ನಿರ್ದೇಶಕ ಸ್ಥಾನಗಳಿಗೆ, ನವೆಂಬರ್‌ನಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಘಟಕ್ಕೆ, ಆ ಬಳಿಕ ರಾಜ್ಯ ಘಟಕಕ್ಕೆ ಚುನಾವಣೆ ನಡೆಸಲಾಗುತ್ತದೆ. ಶೀಘ್ರದಲ್ಲೇ ಅಧಿಸೂಚನೆ ಪ್ರಕಟಿಸಲಾಗುತ್ತದೆ' ಎಂದು ಷಡಾಕ್ಷರಿ ಹೇಳಿದರು.

ನಿಧನವಾರ್ತೆ

ಕೇಶವಮೂರ್ತಿ



ನವದೆಹಲಿ: ಇಲ್ಲಿನ ಕೇಂದ್ರ ವಾರ್ತಾ ಶಾಖೆಯಲ್ಲಿ (ಪಿಐಬಿ) ನಿರ್ದೇಶಕ ರಾಗಿದ್ದ ಕರ್ನಾಟಕದ ಡಾ.ಎಚ್.ಆರ್. ಕೇಶವಮೂರ್ತಿ (59) ಮೈಸೂರಿನಲ್ಲಿ ಬುಧವಾರ ನಿಧನರಾದರು.

1995ರ ತಂಡದ ಭಾರತೀಯ ಸಮಾಚಾರ ಸೇವಾ ಅಧಿಕಾರಿಯಾಗಿದ್ದ ಅವರು ಕೆಲ ದಿನಗಳಿಂದ ಅನಾರೋಗ್ಯ ಪೀಡಿತರಾಗಿದ್ದರು. ಅವರಿಗೆ ಪತ್ನಿ, ಪುತ್ರಿ, ಪುತ್ರ ಇದ್ದಾರೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ನಗರಾಭಿವೃದ್ಧಿ ಸಚಿವಾಲಯ, ಕೃಷಿ ಸಚಿವಾಲಯ, ದೂರ ಸಂಪರ್ಕ ಸಚಿವಾಲಯ ಹಾಗೂ ಅರುಣಾಚಲ ಪ್ರದೇಶದ ಇಟಾ ನಗರದಲ್ಲಿ ಹಲವು ವರ್ಷ ಕಾಲ ಸೇವೆ ಸಲ್ಲಿಸಿದ್ದರು.

ಮೇಕೆದಾಟು–ಮಧ್ಯಸ್ಥಿಕೆ ಇಲ್ಲ: ಕೇಂದ್ರ

ಒಂದನೇ ಪುಟದಿಂದ...

ಮೇಕೆದಾಟು ವಿವಾದದ ವಿಷಯದಲ್ಲಿ ತಮಿಳುನಾಡಿನ ಮನವೊಲಿಸಲು ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ಹಾಗೂ ಜಲಶಕ್ತಿ ಸಚಿವರಿಗೆ ಈಚೆಗೆ ಮನವಿ ಮಾಡಿದ್ದರು. ಕಾವೇರಿ ಜಲವಿವಾದ ಬಗೆಹರಿಸಲು ಸಂಧಾನ ನಡೆಸಲು ಕೇಂದ್ರ ಸರ್ಕಾರ ಮುಂದಾಗಿದೆಯೇ ಎಂದು ಪ್ರಶ್ನಿಸಿ ತಮಿಳುನಾಡು ಸಂಸದ ಡಾ.ಡಿ.ರವಿಕುಮಾರ್ ಅವರು ಜಲಶಕ್ತಿ ಸಚಿವರಿಗೆ ಪತ್ರ ಬರೆದಿದ್ದರು. ಈ ಬಗ್ಗೆ ಕಾವೇರಿ ಪ್ರಾಧಿಕಾರವೇ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಸಚಿವರು ಪ್ರತಿಕ್ರಿಯಿಸಿದ್ದರು.

ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಉದ್ದೇಶದಿಂದ ಸಮಗ್ರ ಯೋಜನಾ ವರದಿ ತಯಾರಿಸಲು ಕೇಂದ್ರ ಜಲ ಆಯೋಗವು 2018ರ ಅಕ್ಟೋಬರ್‌ನಲ್ಲಿ ಒಪ್ಪಿಗೆ ನೀಡಿತ್ತು. ಆದರೆ, ಡಿಪಿಆರ್‌ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದಲೇ ಒಪ್ಪಿಗೆ ಪಡೆಯಬೇಕು ಎಂದು ಸೂಚಿಸಿತ್ತು. ಡಿಪಿಆರ್ ಅನ್ನು ಜಲ ಆಯೋಗಕ್ಕೆ ಕರ್ನಾಟಕ ಸರ್ಕಾರ 2019ರ ಜನವರಿಯಲ್ಲಿ ಸಲ್ಲಿಸಿತ್ತು. ಯೋಜನೆ ವಿರೋಧಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ 2022ರ ಜುಲೈನಲ್ಲಿ, 'ಡಿಪಿಆರ್ ಕುರಿತು ಕಾವೇರಿ ಪ್ರಾಧಿಕಾರ ಚರ್ಚೆ ನಡೆಸಬಹುದು. ಆದರೆ, ಈ ಪ್ರಸ್ತಾವನೆ ಆಧಾರದಲ್ಲಿ ಅಧಿಕೃತವಾಗಿ ಯಾವುದೇ ಅಭಿಪ್ರಾಯಕ್ಕೆ ಬರುವಂತಿಲ್ಲ' ಎಂದು ನಿರ್ದೇಶನ ನೀಡಿತ್ತು. ಹೀಗಾಗಿ, ಪ್ರಾಧಿಕಾರವು ಇದರ ಬಗ್ಗೆ ಚರ್ಚೆಯನ್ನೇ ನಡೆಸಿರಲಿಲ್ಲ. ಯೋಜನಾ ವರದಿಗೆ ಪ್ರಾಧಿಕಾರ ಒಪ್ಪಿಗೆ ನೀಡಬೇಕು ಎಂದು ಕರ್ನಾಟಕ ಸರ್ಕಾರ ಒತ್ತಡ ಹೇರಿತ್ತು.

ಈ ವರ್ಷದ ಫೆಬ್ರುವರಿ 1ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಯೋಜನೆಯ ಕುರಿತು ವಿಸ್ತೃತ ಚರ್ಚೆ ನಡೆಸಿ ಡಿಪಿಆರ್ ಅನ್ನು ಜಲ ಆಯೋಗಕ್ಕೆ ಮರಳಿಸಲು ತೀರ್ಮಾನಿಸಲಾಗಿತ್ತು. ಈ ಯೋಜನೆಯ ಕಾರ್ಯಸಾಧ್ಯತೆ, ವಿವಿಧ ತಾಂತ್ರಿಕ ಹಾಗೂ ಆರ್ಥಿಕ ಅಂಶಗಳ ಬಗ್ಗೆ ಜಲ ಆಯೋಗ ಪರಿಶೀಲನೆ ನಡೆಸಬೇಕು ಎಂದು ಪ್ರಾಧಿಕಾರ ಅಭಿಪ್ರಾಯಪಟ್ಟಿತ್ತು.

ಅಂಕಿ ಅಂಶಗಳು

₹9 ಸಾವಿರ ಕೋಟಿ
ಮೇಕೆದಾಟು ಯೋಜನೆಯ ವೆಚ್ಚ

4.75 ಟಿಎಂಸಿ ಅಡಿ
ಬೆಂಗಳೂರಿಗೆ ಹೆಚ್ಚುವರಿ ಕುಡಿಯುವ ನೀರು ಒದಗಿಸುವ ಉದ್ದೇಶ

400 ಮೆಗಾವಾಟ್
ವಿದ್ಯುತ್ ಉತ್ಪಾದನೆ ಗುರಿ

99 ಮೀಟರ್
ಅಣೆಕಟ್ಟೆಯ ಎತ್ತರ

'ರಾಜ್ಯಗಳೇ ವಿವಾದ ಬಗೆಹರಿಸಿಕೊಳ್ಳಲಿ'

'ಮೇಕೆದಾಟು ಯೋಜನೆಯ ವಿವಾದ ಸುಪ್ರೀಂ ಕೋರ್ಟ್‌ನಲ್ಲಿದೆ. ಇಂತಹ ಸನ್ನಿವೇಶದಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಸಮನ್ವಯದಿಂದ ಮಾತುಕತೆ ನಡೆಸಿ ವಿವಾದ ಬಗೆಹರಿಸಿಕೊಳ್ಳಬೇಕು. ತಮಿಳುನಾಡು ಸರ್ಕಾರದ ಮನವೊಲಿಸುವ ಕೆಲಸವನ್ನು ಕರ್ನಾಟಕ ಸರ್ಕಾರ ಮಾಡಬೇಕು. ಮುಂದಿನ ಹಂತದಲ್ಲಿ ತಾಂತ್ರಿಕ ಅಂಶಗಳನ್ನು ಪರಿಶೀಲಿಸಿ ಯೋಜನೆಗೆ ಅನುಮೋದನೆ ನೀಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಲಿದೆ' ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸ್ಪಷ್ಟಪಡಿಸಿದರು.

'ಕುಡಿಯುವ ನೀರಿನ ಈ ಯೋಜನೆಗೆ 5 ಸಾವಿರ ಹೆಕ್ಟೇರ್ ಅರಣ್ಯ ಬಳಕೆಯಾಗುತ್ತಿದೆ. ಇದಕ್ಕೆ ಕೇಂದ್ರ ಪರಿಸರ ಸಚಿವಾಲಯದ ಒಪ್ಪಿಗೆ ಪಡೆಯಬೇಕಿದೆ' ಎಂದರು.

ಐಎಎಸ್ ವರ್ಗಾವಣೆ

ಬೆಂಗಳೂರು: ಹುದ್ದೆ ನಿರೀಕ್ಷಣೆಯಲ್ಲಿದ್ದ ಜಿ. ಸತ್ಯವತಿ ಅವರನ್ನು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಆರೋಗ್ಯ ಇಲಾಖೆಯ ಆಯುಕ್ತರನ್ನಾಗಿ ಕೆ.ಬಿ. ಶಿವಕುಮಾರ್ ಅವರನ್ನು ವರ್ಗಾವಣೆ ಮಾಡಿ, ರಾಜ್ಯ ವಿಕೋಪ ನಿರ್ವಹಣಾ ಪ್ರಾಧಿಕಾರದ ಆಯುಕ್ತ ಹುದ್ದೆ ಹೆಚ್ಚುವರಿಯಾಗಿ ನೀಡಲಾಗಿದೆ.

ವಿ. ರಾಮ್ ಪ್ರಸಾತ್ ಮನೋಹರ್–ಅಧ್ಯಕ್ಷ, ಬೆಂಗಳೂರು ಜಲಮಂಡಳಿ. ಡಿ.ಎಸ್. ರಮೇಶ್–ನಿರ್ದೇಶಕ, ತೋಟಗಾರಿಕಾ ಇಲಾಖೆ. ಎಂ.ಆರ್. ರವಿ ಕುಮಾರ್–ಆಯುಕ್ತ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಆಯುಕ್ತಾಲಯ. ಎಂ.ಎಸ್. ಅರ್ಚನಾ–ಪಶ್ಚಿಮ ವಲಯ ಆಯುಕ್ತೆ, ಬಿಬಿಎಂಪಿ. ಎಸ್. ನವೀನ್ ಕುಮಾರ್ ರಾಜು – ಕಾರ್ಯನಿರ್ವಾಹಕ ನಿರ್ದೇಶಕ, ರಾಜ್ಯ ಖನಿಜ ನಿಗಮ. ಗರಿಮಾ ಪನ್ವಾರ್–ನಿರ್ದೇಶಕಿ, ಡಿಜಿಟಲ್ ಆರೋಗ್ಯ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಪಾಟೀಲ್ ಭುವನೇಶ್ ದೇವದಾಸ್– ಸಿಇಒ, ಜಿಲ್ಲಾ ಪಂಚಾಯತಿ, ಕೋಲಾರ. ಸದಾಶಿವ ಪ್ರಭು ಬಿ.– ನಿರ್ದೇಶಕ, ಬಿಎಂಟಿಸಿ (ಭದ್ರತೆ, ಜಾಗೃತಿ). ಲಾವಿಶ್ ಒರ್ಡಿಯಾ–ಸಿಇಒ, ಜಿಲ್ಲಾ ಪಂಚಾಯತಿ, ಯಾದಗಿರಿ.

ಆಸ್ತಿ ಗಳಿಕೆ: ಡಿಕೆಶಿ ವಿರುದ್ಧದ ಆರೋಪ

ಒಂದನೇ ಪುಟದಿಂದ...

ರಾಜ್ಯ ಸರ್ಕಾರದ ಸಂಪುಟದ ನಿರ್ಣಯ ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಈ ಅರ್ಜಿಯಲ್ಲಿ, 'ತನಿಖೆಗೆ ನೀಡಲಾಗಿರುವ ಅನುಮತಿ ಹಿಂಪಡೆದಿರುವುದು ತಪ್ಪು. ಅನುಮತಿ ಹಿಂಪಡೆದಿರುವುದರಿಂದ ತನಿಖೆಗೆ ಯಾವುದೇ ತೊಂದರೆ ಇಲ್ಲ' ಎಂಬುದು ಸಿಬಿಐ ಪ್ರತಿಪಾದನೆ.

ಒಂದು ವೇಳೆ ಶಿವಕುಮಾರ್ ಮನವಿಗೆ ವಿರುದ್ಧವಾದ ತೀರ್ಪು ಬಂದರೆ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು. ಸಿಬಿಐ ವಾದವನ್ನು ತಳ್ಳಿ ಹಾಕಿದರೆ ಆಗ ಸಿಬಿಐ ತನ್ನ ನಿರ್ಧಾರ ಕೈಗೊಳ್ಳಲಿದೆ.

'ಒಂದು ವೇಳೆ ಇದರಲ್ಲಿ ಭಿನ್ನ ತೀರ್ಪು ಪ್ರಕಟವಾದರೆ ಏನು' ಎಂಬ ಜಿಜ್ಞಾಸೆ ನ್ಯಾಯಾಂಗದ ವಲಯದಲ್ಲಿ ಕುತೂಹಲ ಕೆರಳಿಸಿದೆ. 'ಒಂದು ವೇಳೆ ಭಿನ್ನ ತೀರ್ಪು ಹೊರಬಂದರೆ ಈ ತೀರ್ಪನ್ನು ಏಕಸದಸ್ಯ ನ್ಯಾಯಪೀಠ ಮರು ವಿಚಾರಣೆ ನಡೆಸಲಿದೆ' ಎನ್ನುತ್ತಾರೆ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ.

ಸಿಎಂ ವಿರುದ್ಧದ 'ಮುಡಾ' ಪ್ರಕರಣ

ಒಂದನೇ ಪುಟದಿಂದ...

'ಒಂದು ವೇಳೆ ಸಿದ್ದರಾಮಯ್ಯ ಅವರ ಅರ್ಜಿ ತಿರಸ್ಕೃತಗೊಂಡರೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಅಥವಾ ಇಲ್ಲೇ ರಿಟ್ ಅಪೀಲು ಸಲ್ಲಿಸುವುದಕ್ಕೂ ಅವಕಾಶವಿದೆ. ಅದೇ ರೀತಿ ನ್ಯಾಯಪೀಠವು ರಾಜ್ಯಪಾಲರಿಗೆ, ನಿಮ್ಮ ಆದೇಶವನ್ನು ಮರು ಪರಿಶೀಲಿಸಿ ಎಂದು ನಿರ್ದೇಶಿಸಲೂ ಸಾಧ್ಯತೆ ಇದೆ' ಎಂಬುದು ಹೈಕೋರ್ಟ್‌ನ ಹಿರಿಯ ವಕೀಲರ ಅಭಿಪ್ರಾಯ. ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಪರ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದ್ದರು. ಪ್ರತಿವಾದಿಗಳಾದ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪರ, ಕೇಂದ್ರ ಸರ್ಕಾರದ ಸಾಲಿಸಿಟರ್ ಜನರಲ್ ಎಸ್.ತುಷಾರ್ ಮೆಹ್ತಾ, ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಫಿರ್ಯಾದುದಾರರಾದ ಎಸ್.ಪಿ.ಪ್ರದೀಪ್ ಕುಮಾರ್ ಪರ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ ಮತ್ತು ಎಂ.ಎಚ್.ಪ್ರಕಾಶ್, ಸ್ನೇಹಪ್ರಿಯ ಕೃಷ್ಣ ಪರ ಹಿರಿಯ ವಕೀಲರಾದ ಲಕ್ಷ್ಮಿ ಅಯ್ಯಂಗಾರ್, ಕೆ.ಜಿ. ರಾಘವನ್, ಸಿ.ವಿ.ನಾಗೇಶ್ ಮತ್ತು ವಸಂತ ಕುಮಾರ್, ಟಿ.ಜೆ.ಅಬ್ರಹಾಂ ಪರ ಆರ್.ಆರ್.ರಂಗನಾಥ ರೆಡ್ಡಿ ಹಾಜರಿದ್ದರು.



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ

ಕನಿಷ್ಠ ವೇತನಕ್ಕೆ ಆಗ್ರಹ, ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳಲ್ಲಿ ಕಸ ವಿಲೇವಾರಿ ಮಾಡುವ ವಾಹನ ಚಾಲಕರು ಮತ್ತು ಸಹಾಯಕಿಯರಿಗೆ ತಿಂಗಳಿಗೆ ಕನಿಷ್ಠ ₹26 ಸಾವಿರ ವೇತನ ನಿಗದಿಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಗ್ರಾಮ ಪಂಚಾಯಿತಿಯ ಒಂದು ವಾಹನಕ್ಕೆ ಒಬ್ಬರು ಚಾಲಕರನ್ನು ಮಾತ್ರ ನೇಮಿಸಿಕೊಳ್ಳಬೇಕು. ಕೆಲಸದ ಸಂದರ್ಭದಲ್ಲಿ ಮರಣ ಹೊಂದಿದಲ್ಲಿ, ಅಂತಹ ಚಾಲಕರ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡಬೇಕು. ಪ್ರತಿ ತಿಂಗಳ 5ನೇ ದಿನಾಂಕದೊಳಗೆ ವೇತನ ನೀಡಬೇಕು. ಪಂಚಾಯಿತಿ ಮೂಲಕ ನೇರವಾಗಿ ಸಿಬ್ಬಂದಿ ಖಾತೆಗೆ ವೇತನ ಜಮೆ ಮಾಡಬೇಕು. ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸಂಕಷ್ಟ ಭತ್ಯ ನೀಡಬೇಕು' ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

'ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಗುರುತಿನ ಚೀಟಿ ವಿತರಿಸಬೇಕು. ಮಹಿಳಾ ಸಿಬ್ಬಂದಿಗೆ ಆರು ತಿಂಗಳ ಹೆರಿಗೆ ರಜೆ ನೀಡಬೇಕು. ತರಬೇತಿ ಪಡೆದ ಎಲ್ಲ ಸ್ವಚ್ಛ ವಾಹಿನಿಯ ಚಾಲಕರಿಗೆ ವಾಹನ ಚಾಲನೆಗೆ ಅವಕಾಶ ನೀಡಬೇಕು. ಕಸ ವಿಲೇವಾರಿ ತರಬೇತಿ ಪಡೆದವರಿಗೆ ಕೆಲಸ ನೀಡಬೇಕು' ಎಂದು ಒತ್ತಾಯಿಸಿದರು. ಸಂಘದ ರಾಜ್ಯ ಸಂಚಾಲಕರಾದ ಎಂ.ಬಿ. ನಾಡಗೌಡ, ಡಿ.ಎಂ. ಮಲಿಯಪ್ಪ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಗ್ರಾಮ ಪಂಚಾಯಿತಿ ವಾಹನ ಚಾಲಕರು ಹಾಗೂ ನೂರಾರು ಮಹಿಳಾ ಸಿಬ್ಬಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

'ಕಾಂಗ್ರೆಸ್ ಸರ್ಕಾರದಿಂದ ದ್ವೇಷದ ರಾಜಕಾರಣ'

ಯತ್ನಾಳ ಬೆಂಬಲಕ್ಕೆ ನಿಂತ ಬಿಜೆಪಿ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಸಿದ್ದಸಿರಿ ಸಕ್ಕರೆ ಕಾರ್ಖಾನೆಯ ಮರು ಆರಂಭಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರ ತಡೆಯೊಡ್ಡುವ ಮೂಲಕ ದ್ವೇಷ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಆವರಣದಲ್ಲಿ ಆರಂಭಿಸಿದ ಪ್ರತಿಭಟನೆಗೆ ಬಿಜೆಪಿಯ ಇತರ ನಾಯಕರೂ ಕೈಜೋಡಿಸಿದರು.

ಸೇಡಿನ ರಾಜಕೀಯ ಬಿಟ್ಟು ಅನುಮತಿ ನೀಡದೇ ಇದ್ದರೆ ಸರ್ಕಾರದ ವಿರುದ್ಧ ಹೋರಾಟ ನಡೆಸುವುದಾಗಿಯೂ ಅವರು ಎಚ್ಚರಿಕೆ ನೀಡಿದರು.

ವಿರೋಧಪಕ್ಷದ ನಾಯಕ ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಸಂಸದ ಬಸವರಾಜ ಬೊಮ್ಮಾಯಿ, ಶಾಸಕರಾದ ಸಿ.ಟಿ.ರವಿ, ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಎನ್. ರವಿಕುಮಾರ್ ಬುಧವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು 'ಎಕ್ಸ್' ಮೂಲಕ ಯತ್ನಾಳ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

'ಸಕ್ಕರೆ ಕಾರ್ಖಾನೆ ಆರಂಭಕ್ಕೆ ಹೈಕೋರ್ಟ್ ಆದೇಶ ನೀಡಿದೆ. ಆದರೆ, ಎನ್‌ಒಸಿ ನೀಡದೇ ಮಾಲಿನ್ಯ ನಿಯಂತ್ರಣ ಮಂಡಳಿ ಮೂಲಕ ರಾಜ್ಯ ಸರ್ಕಾರ ಸೇಡಿನ ರಾಜಕೀಯ ಮಾಡುತ್ತಿದೆ' ಎಂದು ಆರೋಪಿಸಿದ ಬಸನಗೌಡ ಪಾಟೀಲ ಯತ್ನಾಳ, ಎನ್‌ಒಸಿಗಾಗಿ ಮಂಗಳವಾರ ಸಂಜೆ ಮಂಡಳಿಯಲ್ಲಿ ಧರಣಿ ಸ್ವರೂಪದ ಪ್ರತಿಭಟನೆ' ಆರಂಭಿಸಿದರು.

ಬುಧವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡ ಆರ್.ಅಶೋಕ, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಮೇಲಿನಿಂದ ಫೋನ್ ಕರೆ ಬಂದಿದ್ದು, ಯತ್ನಾಳ ಅವರಿಗೆ ತೊಂದರೆ ಕೊಡಲು ಸೂಚಿಸಲಾಗಿದೆ. ಮಂಡಳಿ ಅಧ್ಯಕ್ಷರು ಸ್ಥಳಕ್ಕೆ ಬಾರದೇ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ. ಹೈಕೋರ್ಟ್ ಆದೇಶವನ್ನು ಜಾರಿ ಮಾಡುವುದಿಲ್ಲ ಎಂಬುದನ್ನು ಲಿಖಿತವಾಗಿ ಕೊಡಲಿ ಎಂದು ಆಗ್ರಹಿಸಿದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಶಾಸಕ ಯತ್ನಾಳ ಅವರನ್ನು ರಾಜಕೀಯವಾಗಿ ಮುಗಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯು ಅವರ ಸಕ್ಕರೆ ಕಾರ್ಖಾನೆಗೆ ಅನುಮತಿ ನೀಡುತ್ತಿಲ್ಲ. ಯತ್ನಾಳ ಅವರು ಕಾನೂನು ಪ್ರಕಾರವೇ ಕಾರ್ಖಾನೆ ಆರಂಭಿಸಿದ್ದಾರೆ. ಕಳೆದ ವರ್ಷ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ಅವಕಾಶ ಕೊಡಲಿಲ್ಲ. ಯತ್ನಾಳ ಅವರು ಕೋರ್ಟ್ ಮೆಟ್ಟಿಲು ಹತ್ತಿದಾಗ, ನಾಲ್ಕು ವಾರದೊಳಗೆ ಪುನರಾರಂಭಕ್ಕೆ ಆದೇಶ ಕೊಟ್ಟಿತ್ತು. ತಾಂತ್ರಿಕ ನೆಪ ಒಡ್ಡಿ ಎನ್‌ಒಸಿ ಕೊಡುತ್ತಿಲ್ಲ ಎಂದು ದೂರಿದರು.



ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಪ್ರತಿಭಟನೆಗೆ ಬಿಜೆಪಿ ನಾಯಕರು ಜತೆಗೂಡಿದರು

ಯತ್ನಾಳ ಒತ್ತಡ ತಂತ್ರ ಸರಿಯಲ್ಲ: ಖಂಡ್ರೆ

'ಸಿದ್ದಸಿರಿ ಸೌಹಾರ್ದ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕಾರ್ಯಾಚರಣೆ ಸಮ್ಮತಿ ಪತ್ರ ನೀಡುವಂತೆ ಹೈಕೋರ್ಟ್ ತೀರ್ಪನ್ನು ಪರಿಶೀಲಿಸಿ, ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು. ಆದರೆ, ಬಸನಗೌಡ ಪಾಟೀಲ ಯತ್ನಾಳ ಅವರು ಒತ್ತಡ ಹೇರುವುದು ಸರಿಯಲ್ಲ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.



ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಸಿದ್ದಸಿರಿ ಕಾರ್ಖಾನೆ ಈ ಹಿಂದೆ ಅನುಮತಿ ಇಲ್ಲದೇ ಬಾಯ್ಲರ್ ಸ್ಥಾಪನೆ ಮಾಡಿತ್ತು. ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ ಹಂತದಲ್ಲಿದ್ದರೂ ನಿಯಮ ಉಲ್ಲಂಘಿಸಿ ಲಕ್ಷಾಂತರ ಟನ್ ಕಬ್ಬು ಅರೆದು, ತ್ಯಾಜ್ಯವನ್ನು ಹೊರಬಿಡಲಾಗುತ್ತಿತ್ತು. ಹೀಗಾಗಿ ಮಂಡಳಿ ಕ್ರಮ ತೆಗೆದುಕೊಂಡಿತ್ತು ಎಂದು ವಿವರಿಸಿದರು. ಎಥನಾಲ್ ಕಾರ್ಖಾನೆ ಪೂರ್ವಾನುಮತಿ ಇಲ್ಲದೆ ತನ್ನ ಸಾಮರ್ಥ್ಯ ವಿಸ್ತರಣೆ ಮಾಡಿ ಕಾನೂನು ಬಾಹಿರವಾಗಿ ಕಾರ್ಯಾಚರಣೆ ನಡೆಸಿರುವ ಕಾರಣ ಕೇಂದ್ರ ಪರಿಸರ ಇಲಾಖೆಯೇ ₹1.58 ಕೋಟಿ ದಂಡ ವಿಧಿಸಿತ್ತು. ದಂಡ ಕಟ್ಟಿದ ಬಳಿಕವೂ ಘಟಕ ಸ್ಥಾಪನೆಗೆ ಅನುಮೋದನೆ ಪಡೆಯದೇ ಮತ್ತೆ ಕಾರ್ಯಾಚರಣೆ ಮಾಡಿದ್ದರಿಂದ ಅದರ ವಿರುದ್ಧ ಕ್ರಮ ಕೈಗೊಂಡಿದ್ದರಲ್ಲಿ ತಪ್ಪೇನು? ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶವಾಗಲೀ, ದ್ವೇಷವಾಗಲಿ ಇಲ್ಲ ಎಂದು ಖಂಡ್ರೆ ಸ್ಪಷ್ಟಪಡಿಸಿದರು. ನ್ಯಾಯಾಲಯ ನಾಲ್ಕು ವಾರ ಕಾಲಾವಕಾಶ ನೀಡಿರುವಾಗ ಯತ್ನಾಳ ಅವರು ಒಂದೇ ದಿನದಲ್ಲಿ ಅನುಮತಿ ಪತ್ರ ನೀಡಬೇಕು ಎಂದು ಪ್ರತಿಭಟನೆ ನಡೆಸುವುದು ಸರಿಯಲ್ಲ. ಅಧಿಕಾರಿಗಳಿಗೆ ಕೆಲಸ ಮಾಡಲು ಅವಕಾಶ ನೀಡಬೇಕು ಎಂದು ಖಂಡ್ರೆ ತಿಳಿಸಿದರು.

ಸಮಗ್ರ ಟೌನ್‌ಶಿಪ್‌ಗೆ ಮರುಜೀವ

ಬಿಡದಿ, ಸೋಲೂರು, ನಂದಗುಡಿಯಲ್ಲಿ 3 ಟೌನ್‌ಶಿಪ್ ನಿರ್ಮಾಣಕ್ಕೆ ಚಿಂತನೆ

• ನವೀನ್ ಮಿನೇಜಸ್

ಮುಖ್ಯಾಂಶಗಳು

- ಭೂಸ್ವಾಧೀನ ಪ್ರಕ್ರಿಯೆಗೆ ಅಧಿಕಾರಿಗಳ ನೇಮಕ
- ಆರ್ಥಿಕ ಇಲಾಖೆಯಿಂದ ಸಮ್ಮತಿ ಬಾಕಿ
- ಸಾಲಪಡೆಯಲು ಆರ್ಥಿಕ ಸಂಸ್ಥೆಗಳೊಂದಿಗೆ ಮಾತುಕತೆ

ಬೆಂಗಳೂರು: ನಗರದ ಹೊರವಲಯದ ಬಿಡದಿ, ಸೋಲೂರು, ನಂದಗುಡಿಯಲ್ಲಿ ಮೂರು ಸಮಗ್ರ ಟೌನ್‌ಶಿಪ್ ನಿರ್ಮಿಸುವ ಯೋಜನೆಯನ್ನು ಪುನಃ ಕೈಗೆತ್ತಿಕೊಳ್ಳಲು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಮುಂದಾಗಿದೆ.

ಎರಡು ದಶಕಗಳ ಹಿಂದಿನ ಪ್ರಸ್ತಾವಕ್ಕೆ ಇದೀಗ ಮರುಜೀವ ನೀಡಿರುವ ಬಿಎಂಆರ್‌ಡಿಎ, ಪ್ರಾಯೋಗಿಕವಾಗಿ ಬಿಡದಿಯಲ್ಲಿ ಮೊದಲನೆ ಟೌನ್‌ಶಿಪ್ ನಿರ್ಮಿಸಲು ನಿರ್ಧರಿಸಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೂಚನೆಯಂತೆ ಯೋಜನೆಗೆ ಚಾಲನೆ ನೀಡಲಾಗಿದ್ದು, ಮಾಗಡಿ ಸಮೀಪದ ಸೋಲೂರು ಮತ್ತು ಹೊಸಕೋಟೆ ಸಮೀಪದ ನಂದಗುಡಿಯಲ್ಲಿ ಎರಡನೇ ಹಂತದಲ್ಲಿ ಸಮಗ್ರ ಟೌನ್‌ಶಿಪ್‌ಗಳು ನಿರ್ಮಾಣವಾಗಲಿವೆ.

ಈ ಮೂರು ಟೌನ್‌ಶಿಪ್‌ಗಳ ವಲಯಗಳಿಗೆ ‘ನಮ್ಮ ಮೆಟ್ರೊ’ ಸಂಪರ್ಕ ಕಲ್ಪಿಸುವ ಬಗ್ಗೆ ಕಾರ್ಯಸಾಧ್ಯತಾ ಅಧ್ಯಯನ ನಡೆಸುವಂತೆ ಬಿಎಂಆರ್‌ಸಿಎಲ್‌ಗೆ ಬಿಎಂಆರ್‌ಡಿಎ ಪತ್ರ ಬರೆದಿದೆ. ಬೆಂಗಳೂರು ಜಲಮಂಡಳಿಗೂ ಪತ್ರ ಬರೆಯಲಾಗಿದ್ದು, ಕುಡಿಯುವ ನೀರಿನ ಪೂರೈಕೆಗೆ ಮೂಲಸೌಕರ್ಯ ಒದಗಿಸುವಂತೆ ಕೋರಲಾಗಿದೆ.

ಟೌನ್‌ಶಿಪ್ ನಿರ್ಮಾಣಕ್ಕೆ ಹಲವು ಪ್ರಕ್ರಿಯೆಗಳು ನಡೆಯಬೇಕಾಗಿವೆ. ಮೊದಲನೆಯದಾಗಿ, ರಾಜ್ಯ ಸರ್ಕಾರ ಬೃಹತ್ ಭೂಸ್ವಾಧೀನಕ್ಕೆ ಅಧಿಸೂಚನೆ



ಹೊರಡಿಸಲು ಸಮ್ಮತಿಸಬೇಕು. ಇದಾದ ನಂತರ, ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಬೇಕು. ಬೆಂಗಳೂರು ನಗರ ಜಿಲ್ಲಾಡಳಿತವು ಸಾಮಾಜಿಕ ಪರಿಣಾಮದ ಮೌಲ್ಯ ಮಾಪನ ಅಧ್ಯಯನ ನಡೆಸಬೇಕಿದೆ.

‘ಸ್ಯಾಟಲೈಟ್ ಟೌನ್ ವರ್ತುಲ ರಸ್ತೆಗೆ (ಎಸ್‌ಟಿಆರ್‌ಆರ್) ಸಂಪರ್ಕ ಸಾಧಿಸುವ ಮೂರೂ ಪ್ರದೇಶಗಳ ಬಗ್ಗೆ ನಾವು ಗಮನಹರಿಸಿದ್ದೇವೆ. ನಾಲ್ಕು ಹೆದ್ದಾರಿ ಗಳನ್ನು ಸುತ್ತಮುತ್ತ ಹೊಂದಿರುವ ಬಿಡದಿ ಟೌನ್‌ಶಿಪ್ ಪ್ರಥಮವಾಗಿ ಆರಂಭವಾಗಲಿದೆ. ಲಾಜಿಸ್ಟಿಕ್ ಪಾರ್ಕ್, ಡೇಟಾ ಸೆಂಟರ್ ಸೇರಿದಂತೆ ಅತಿ-ಎತ್ತರದ ವಸತಿ ಸಂಕೀರ್ಣಗಳನ್ನು ಒಳಗೊಂಡ ಮಿಶ್ರ ವಾಣಿಜ್ಯ ಚಟುವಟಿಕೆಗಳ ಸಮಗ್ರ ಟೌನ್‌ಶಿಪ್‌ನ ನಿರ್ಮಾಣಕ್ಕೆ ಯೋಜನೆ ರೂಪಿಸುತ್ತಿದ್ದೇವೆ’ ಎಂದು ಬಿಎಂಆರ್‌ಡಿಎ ಆಯುಕ್ತ ರಾಜೇಂದ್ರ ಪಿ. ಚೋಳನ್ ಅವರು ತಿಳಿಸಿದರು.

ಬೆಂಗಳೂರು – ಚೆನ್ನೈ ಎಕ್ಸ್‌ಪ್ರೆಸ್ ಹೈವೇಗೆ ಸಮೀಪವಿರುವ ನಂದಗುಡಿಯನ್ನು ಆಯ್ಕೆ ಮಾಡಲಾಗಿದೆ. ನೆಲಮಂಗಲ– ಬೆಂಗಳೂರಿಗೆ ಸಂಪರ್ಕ ಸಾಧಿಸುವ ಸೋಲೂರು ಅನ್ನು ಅಂತಿಮಗೊಳಿಸಲಾಗಿದೆ.

‘ಸರ್ಕಾರ ಈಗಾಗಲೇ ಮೂವರು ಭೂಸ್ವಾಧೀನ ಅಧಿಕಾರಿಗಳನ್ನು ನೇಮಿಸಿದೆ. ಎಂಜಿನಿಯರಿಂಗ್ ಕೋಶವನ್ನೂ ನಾವು ರಚಿಸುತ್ತಿದ್ದೇವೆ. ಆರ್ಥಿಕ ಇಲಾಖೆಯ ಸಮ್ಮತಿಗಾಗಿ ಕಾಯಲಾಗುತ್ತಿದೆ. ಅಲ್ಲದೆ, ಸಾಲ ಪಡೆಯಲು ಹಣಕಾಸು ಸಂಸ್ಥೆಗಳೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ’ ಎಂದು ಚೋಳನ್ ತಿಳಿಸಿದರು.

‘ಕಸ್ತೂರಿ ರಂಗನ್ ವರದಿ ಜನಪ್ರತಿನಿಧಿಗಳ ಸಭೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸಂಬಂಧಿಸಿದಂತೆ ಆ ವ್ಯಾಪ್ತಿಯ 10 ಜಿಲ್ಲೆಗಳ ಜನಪ್ರತಿನಿಧಿಗಳ ಅಭಿಪ್ರಾಯ ಪಡೆದು, ಮುಖ್ಯಮಂತ್ರಿ ಜೊತೆ ಚರ್ಚಿಸಿದ ಬಳಿಕ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವ ಮಂಡಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ನೇತೃತ್ವದ ಸಚಿವ ಸಂಪುಟ ಉಪಸಮಿತಿ ನಿರ್ಧರಿಸಿದೆ.

ಸಮಿತಿಯ ಸಭೆ ಬುಧವಾರ ನಡೆಯಿತು. ಸಮಿತಿಯ ಸದಸ್ಯರಾದ ಎಚ್‌.ಸಿ. ಮಹದೇವಪ್ಪ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಮಧು ಬಂಗಾರಪ್ಪ, ಮಂಕಾಳ ವೈದ್ಯ ಸಭೆಯಲ್ಲಿದ್ದರು.

ಪರಿಸರ ಸೂಕ್ಷ್ಮಪ್ರದೇಶದ ಕುರಿತಂತೆ ಕೇಂದ್ರ ಸರ್ಕಾರ ಆಗಸ್ಟ್ 2ರಂದು ಹೊರಡಿಸಿರುವ ಅಧಿಸೂಚನೆಯನ್ನು (ಕಸ್ತೂರಿ ರಂಗನ್ ಸಮಿತಿ ವರದಿ) ಯಥಾವತ್ ಒಪ್ಪಿಕೊಂಡರೆ ಪಶ್ಚಿಮ ಘಟ್ಟದಲ್ಲಿ ನೆಲೆ ಕಂಡುಕೊಂಡಿರುವ ಜನರ ಮೇಲೆ ಆಗಬಹುದಾದ ಪರಿಣಾಮ, ಸಾಧಕ –ಬಾಧಕಗಳ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು. ‘ರಾಜ್ಯದ ಪಶ್ಚಿಮ ಘಟ್ಟದಲ್ಲಿ 20,668 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವಂತೆ ಕಸ್ತೂರಿ ರಂಗನ್ ಸಮಿತಿ



ಈಶ್ವರ ಖಂಡ್ರೆ

ವರದಿ ಹೇಳಿದೆ. ಆದರೆ, ರಾಜ್ಯ ಸರ್ಕಾರ ವನ್ಯಜೀವಿಧಾಮ, ಅಭಯಾರಣ್ಯ, ಹುಲಿ ಸಂರಕ್ಷಿತ ಮೀಸಲು ಸೇರಿದಂತೆ ವಿವಿಧ ಅರಣ್ಯ ಪ್ರದೇಶಗಳಲ್ಲಿ 16,632 ಚದರ ಕಿ.ಮೀ. ಪ್ರದೇಶವು ಘೋಷಿತ ಅರಣ್ಯ, ಸಂರಕ್ಷಿತ ಪ್ರದೇಶ ಮತ್ತು ಸಂರಕ್ಷಿತ ಪ್ರದೇಶಗಳಿಗೆ ಹೊಂದಿಕೊಂಡಿರುವ ಪರಿಸರ ಸೂಕ್ಷ್ಮ ವಲಯ (ಇಎಸ್‌ಝೆಡ್) ಎಂದು ಈಗಾಗಲೇ ಘೋಷಿಸಲಾಗಿದೆ. ಅಲ್ಲದೆ, ಈ ಎಲ್ಲ ಪ್ರದೇಶಗಳು ಸಂರಕ್ಷಿತವಾಗಿವೆ. ಹೀಗಾಗಿ, ಆ ಪ್ರದೇಶಕ್ಕೆ ಸೀಮಿತಗೊಳಿಸಿ ಕಸ್ತೂರಿ ರಂಗನ್ ಸಮಿತಿಯ ಶಿಫಾರಸಿನಂತೆ ಸರ್ಕಾರದ ನಿಲುವು ವ್ಯಕ್ತಪಡಿಸಲು ಸಚಿವ ಸಂಪುಟಕ್ಕೆ ಶಿಫಾರಸು ಮಾಡಬಹುದು’ ಎಂಬ ಈಶ್ವರ ಖಂಡ್ರೆ ಅಭಿಪ್ರಾಯ ವ್ಯಕ್ತಪಡಿಸಿದರು.

‘ಪಶ್ಚಿಮ ಘಟ್ಟ ಪ್ರದೇಶದಲ್ಲಿ 1,533 ವಸತಿ ಪ್ರದೇಶಗಳಿವೆ. ಅಲ್ಲಿರುವ ಜನರ ಬದುಕಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ನಿರ್ದಿಷ್ಟ ಷರತ್ತುಗಳನ್ನು ಮುಂದಿಟ್ಟು ಕೇಂದ್ರ ಸರ್ಕಾರಕ್ಕೆ ಸೆಪ್ಟೆಂಬರ್ ಅಂತ್ಯದ ಒಳಗೆ ರಾಜ್ಯದ ನಿಲುವು ತಿಳಿಸಬೇಕಾಗಿದೆ’ ಎಂದೂ ಅವರು ಹೇಳಿದರು.

ಗ್ಯಾರಂಟಿ: ಸಮಸ್ಯೆ ನಿವಾರಣೆಗೆ ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಹಾಯವಾಣಿ (94806 83972) ಆರಂಭಿಸಲಾಗಿದೆ ಎಂದು ಬಿಬಿಎಂಪಿ ವ್ಯಾಪ್ತಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ. ಕೃಷ್ಣಪ್ಪ ತಿಳಿಸಿದರು.



ಬಿಬಿಎಂಪಿ ವ್ಯಾಪ್ತಿಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಚಿಸಿರುವ ವಿಧಾನಸಭಾ ಕ್ಷೇತ್ರವಾರು ಸಮಿತಿಗಳ ಅಧ್ಯಕ್ಷ– ಉಪಾಧ್ಯಕ್ಷರು, ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದರು.

ಸಭೆ ನಂತರ ಸುದ್ದಿಗಾರರ ಜತೆ ಮಾತನಾಡಿದ ಕೃಷ್ಣಪ್ಪ, ‘ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಆಗುತ್ತಿರುವ ತೊಂದರೆಗಳನ್ನು ಪರಿಹರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಗ್ಯಾರಂಟಿ ಯೋಜನೆ ಅನುಕೂಲ ಪಡೆಯಲು ಯಾವುದೇ ರೀತಿಯ ಸಮಸ್ಯೆಗಳನ್ನು ನಾಗರಿಕರು ಎದುರಿಸುತ್ತಿದ್ದರೆ ನಮ್ಮ ಸಹಾಯವಾಣಿಗೆ ಕರೆ ಮಾಡಿದರೆ, ಪರಿಹಾರ ನೀಡಲಾಗುತ್ತದೆ’ ಎಂದು ತಿಳಿಸಿದರು.

ಎಸ್.ಎಂ. ಕೃಷ್ಣ ಆಸ್ಪತ್ರೆಯಿಂದ ಮನೆಗೆ

ಬೆಂಗಳೂರು: ವಯೋಸಹಜ ಅನಾರೋಗ್ಯ ಸಮಸ್ಯೆ ಕಾರಣ ಹಲವು ದಿನಗಳಿಂದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಚೇತರಿಸಿಕೊಂಡಿದ್ದು, ಆಸ್ಪತ್ರೆಯಿಂದ ಮನೆಗೆ ಬುಧವಾರ ತೆರಳಿದ್ದಾರೆ.



ಡಾ. ಸತ್ಯನಾರಾಯಣ ಮೈಸೂರು ನೇತೃತ್ವದ ವೈದ್ಯರ ತಂಡವು ಅವರಿಗೆ ಚಿಕಿತ್ಸೆ ನೀಡಿದ್ದು, ಮನೆಯಲ್ಲಿ ವಿಶ್ರಾಂತಿ ಪಡೆಯುವಂತೆ ಸೂಚಿಸಿದ್ದಾರೆ.

ಶ್ವಾಸಕೋಶದ ಸೋಂಕಿನಿಂದಾಗಿ ಉಸಿರಾಟದ ಸಮಸ್ಯೆ ಎದುರಿಸಿದ್ದ ಅವರು, ಕಳೆದ ಏಪ್ರಿಲ್ 21ರಂದು ವೈದೇಹಿ ಆಸ್ಪತ್ರೆಗೆ ದಾಖಲಾಗಿದ್ದರು. ಹೆಚ್ಚಿನ ಚಿಕಿತ್ಸೆಗೆ ಏ. 29ರಂದು ಮಣಿಪಾಲ್ ಆಸ್ಪತ್ರೆಗೆ ಅವರನ್ನು ಸ್ಥಳಾಂತರಿಸಲಾಗಿತ್ತು. ನಾಲ್ಕು ತಿಂಗಳು ಒದಗಿಸಲಾದ ನಿರಂತರ ಚಿಕಿತ್ಸೆಯಿಂದ ಚೇತರಿಸಿಕೊಂಡಿದ್ದಾರೆ.

‘ಎಲ್ಲ ಕಡೆ ಸ್ವಯಂಚಾಲಿತ ಚಾಲನಾ ಪರೀಕ್ಷಾಪಥ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಗಳಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ದೇವನಹಳ್ಳಿ, ಕೋಲಾರ, ಹೊಸಪೇಟೆ, ಗದಗ, ಬಳ್ಳಾರಿ, ವಿಜಯಪುರ, ಬೀದರ್, ಯಾದಗಿರಿ, ದಾವಣಗೆರೆಯಲ್ಲಿ ₹80 ಕೋಟಿ ವೆಚ್ಚದಲ್ಲಿ ಪರೀಕ್ಷಾ ಪಥ ನಿರ್ಮಿಸಲಾಗುತ್ತಿದೆ. ತುಮಕೂರು, ಯಲಹಂಕ, ಶಿರಸಿ, ಸಕಲೇಶಪುರ, ಕೆ.ಜಿ.ಎಫ್., ಚಿಂತಾಮಣಿ, ಸಾಗರ, ಗೋಕಾಕ, ರಾಣೆಬೆನ್ನೂರು, ದಾಂಡೇಲಿ, ಭಾಲ್ಕಿ, ಬೈಲಹೊಂಗಲದಲ್ಲಿ ₹ 72.95 ಕೋಟಿ ವೆಚ್ಚದಲ್ಲಿ ಪರೀಕ್ಷಾ ಪಥ ನಿರ್ಮಾಣದ ಕಾಮಗಾರಿ ಕೈಗೊಳ್ಳಲಾಗಿದೆ. ಆರು ಕಡೆಗಳಲ್ಲಿ ಪಥ ನಿರ್ಮಿಸಲು ಈ ಬಾರಿಯ ಬಜೆಟ್‌ನಲ್ಲಿ ₹36 ಕೋಟಿ ಅನುದಾನ



ಒದಗಿಸಲಾಗಿದೆ ಎಂದರು. ಅರ್ಹತಾ ಪತ್ರ ನವೀಕರಣಕ್ಕಾಗಿ ಬರುವ ವಾಹನಗಳನ್ನು ಕಡ್ಡಾಯವಾಗಿ ಎಟಿಎಸ್ ಮೂಲಕ ತಪಾಸಣೆಗೆ ಒಳಪಡಿಸಬೇಕಾಗಿರುತ್ತದೆ. ಅದಕ್ಕಾಗಿ ಜಮೀನು ಲಭ್ಯ ಇರುವ 13 ಕಡೆಗಳಲ್ಲಿ ಡಿಬಿಎಫ್‌ಒಟಿ ಮಾದರಿಯಲ್ಲಿ, 19 ಕಡೆಗಳಲ್ಲಿ ಬಿಒಒ ಮಾದರಿಯಲ್ಲಿ ಸ್ವಯಂಚಾಲಿತ ವಾಹನ ಪರೀಕ್ಷಾ ಕೇಂದ್ರ ಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು.

ರಾಜಸ್ವ ಸಂಗ್ರಹಿಸಿ: ಆರ್ಥಿಕ ವರ್ಷದ ನಾಲ್ಕು ತಿಂಗಳಲ್ಲಿ ₹ 4325 ಕೋಟಿ ರಾಜಸ್ವ ಸಂಗ್ರಹಿಸಬೇಕಿದ್ದು, ₹ 3,534 ಕೋಟಿ (ಶೇ 81.71) ಸಂಗ್ರಹವಾಗಿದೆ. 2024–25ನೇ ಸಾಲಿನಲ್ಲಿ ಒಟ್ಟು ₹12,975.58 ಕೋಟಿ ಸಂಗ್ರಹಿಸುವ ಗುರಿ ನೀಡಲಾಗಿದೆ. ಶೇ 100ರಷ್ಟು ಸಂಗ್ರಹ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಜುಲೈ 31ರವರೆಗೆ 1,39,460 ಪ್ರಕರಣಗಳನ್ನು ದಾಖಲಿಸಬೇಕಿತ್ತು. 1,21,943 ಪ್ರಕರಣಗಳು ದಾಖಲಾಗಿವೆ. ಹೊಸದಾಗಿ 85 ಮೋಟಾರು ವಾಹನ ನಿರೀಕ್ಷಕರನ್ನು ನೇಮಕ ಮಾಡಲಾಗಿದೆ. ರಸ್ತೆ ಸುರಕ್ಷತಾ ನಿಧಿಯಿಂದ ಹೊಸ ವಾಹನಗಳನ್ನು ಖರೀದಿಸಲಾಗುತ್ತಿದೆ. ಇದೆಲ್ಲವನ್ನು ಬಳಸಿಕೊಂಡು ರಾಜಸ್ವ ಸಂಗ್ರಹದ ಗುರಿ ತಲುಪಬೇಕು ಎಂದು ಸೂಚನೆ ನೀಡಿದರು. ಬಾಕಿ ಇರುವ ತೆರಿಗೆ ವಸೂಲಿ ಮಾಡಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತೆರಿಗೆ ಸುಸ್ತಿದಾರರ ವಿರುದ್ಧ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಲು ಕ್ರಮ ವಹಿಸಬೇಕು, ಬಾಕಿ ಇರುವ 6,77,348 ಪ್ರಕರಣಗಳನ್ನು ವಿಲೇವಾರಿ ಮಾಡಲು ಕ್ರಮ ವಹಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸೆಪ್ಟೆಂಬರ್ 10ರ ನಂತರ ಕಡ್ಡಾಯವಾಗಿ ಎಲ್ಲ ಖಾಸಗಿ ಸೇವಾ (ಪಿಎಸ್‌ವಿ) ವಾಹನಗಳಿಗೆ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿಡಿ) ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ನಗರದಲ್ಲಿ ಇಂದು

ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109ನೇ ಜಯಂತಿ: ಸಾನ್ನಿಧ್ಯ: ಬಸವ ಮರುಳಸಿದ್ಧ ಸ್ವಾಮೀಜಿ, ಉದ್ಘಾಟನೆ: ಈಶ್ವರ ಬಿ. ಖಂಡ್ರೆ, ಅಧ್ಯಕ್ಷತೆ: ಸಿ. ಸೋಮಶೇಖರ್, ಅತಿಥಿಗಳು: ತೇಜಸ್ವಿ ಸೂರ್ಯ, ಎಲ್. ರೇವಣಸಿದ್ಧಯ್ಯ, ಸಂದೀಪ್ ಪಾಟೀಲ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಶಿವರಾತ್ರೀಶ್ವರ ವೃತ್ತ, 8ನೇ ಬಡಾವಣೆ ಜಯನಗರ, ಬೆಳಿಗ್ಗೆ 10

ಪ್ರತಿಭಾ ಪುರಸ್ಕಾರ, ಸನ್ಮಾನ ಸಮಾರಂಭ: ಉದ್ಘಾಟನೆ: ಪುಟ್ಟಣ್ಣ, ಪ್ರತಿಭಾ ಪುರಸ್ಕಾರ: ಕೆ.ಎ. ದಯಾನಂದ್, ಅತಿಥಿಗಳು: ಎಂ. ಕೃಷ್ಣೇಗೌಡ, ಅಧ್ಯಕ್ಷತೆ: ನಾಗಣ್ಣ ಜಿ., ಅಭಿನಂದಿತರು: ಆನಂದರಾಜ್ ಎ., ಆಯೋಜನೆ: ಬೆಂಗಳೂರು ದಕ್ಷಿಣ ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ, ಸ್ಥಳ: ಎನ್‌ಎಂಕೆಆರ್‌ವಿ ಪದವಿ ಪೂರ್ವ ಕಾಲೇಜು, ಜಯನಗರ, ಬೆಳಿಗ್ಗೆ 10

‘ಸ್ಥಳೀಯ ಆಡಳಿತದಲ್ಲಿ ತಂತ್ರಜ್ಞಾನ ಅಳವಡಿಸಿಕೊಂಡು ಅಂತರ ತಗ್ಗಿಸುವುದು’ ಕುರಿತ ಉಪನ್ಯಾಸ: ಶಂಕರ ಪ್ರಸಾದ್, ಪಿ.ಜಿ. ದಿವಾಕರ್, ಅನ್ಶುಮನ್ ಬೆಹೆರಾ, ಆಯೋಜನೆ ಮತ್ತು ಸ್ಥಳ: ಎನ್‌ಐಎಎಸ್, ಡೆಮಾಕ್ರಸಿ ಫೋರಂ, ಬೆಳಿಗ್ಗೆ 10


ಪ್ರೊ.ಎಲ್.ಎಸ್. ಶೇಷಗಿರಿರಾವ್ ಶತಮಾನೋತ್ಸವ ಉಪನ್ಯಾಸ ಮಾಸದ ಮಾತು–7: ‘ಎಲ್‌ಎಸ್‌ಎಸ್ ಸಂಸ್ಕೃತಿ ಚಿಂತನೆ’ ಉಪನ್ಯಾಸ: ಪೂರ್ಣಿಮಾ ಎಸ್., ಅಧ್ಯಕ್ಷತೆ: ಉಮಾ ನಾಗೇಶ್, ಅತಿಥಿಗಳು: ನಾ. ಶ್ರೀಧರ್, ರಾ.ನಂ. ಚಂದ್ರಶೇಖರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಕನ್ನಡ ಗೆಳೆಯರ ಬಳಗ, ಸ್ಥಳ: ಸೇಂಟ್ ಮಾರ್ಟಿನ್ ಪ್ರೌಢಶಾಲೆ, ಕೆ.ಪಿ. ಅಗ್ರಹಾರ, ಬೆಳಿಗ್ಗೆ 11

ಕಲಾವಿತಂಸ–2024 ‘ಶಾಸಾ ಸ್ವರೂಪಂ’ ನೃತ್ಯ ರೂಪಕ ಪ್ರದರ್ಶನ: ಅತಿಥಿಗಳು: ನಂಡೂರಿ ಶ್ರೀನಿವಾಸ್, ಮೋಹನ ಆಳ್ವ, ಕೆ. ಚಂದ್ರಶೇಖರ ನಾವಡ, ಕಮಲಾ ಭಟ್, ಶುಭಾ ಧನಂಜಯ್, ಸೀತಾ ಗುರುಪ್ರಸಾದ್, ಶೈಲೇಶ್‌ಖುಈ ಶ್ರೀವತ್ಸ, ಚಾರುಮತಿ ಶ್ರೀಕಾಂತ್, ಆಯೋಜನೆ: ಚಿಗುರು ನೃತ್ಯಾಲಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಪ್ರವಾಸ್ 4.0: ಅತಿಥಿಗಳು: ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ, ದಯಾಶಂಕರ್ ಸಿಂಗ್, ಎನ್.ಎ. ಹ್ಯಾರಿಸ್, ಆಯೋಜನೆ: ಬಿಒಸಿಐ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ತುಮಕೂರು ರಸ್ತೆ, ಸಂಜೆ 4

‘ಕಳತಾವೂರ್ ಮಳಾವ್–01, ಸಜ್ಜನರ ಸಲ್ಲಾಪ–01’: ಅತಿಥಿಗಳು: ಹಂ.ಪ. ನಾಗರಾಜಯ್ಯ, ಬಿ.ಟಿ. ಲಲಿತಾ ನಾಯಕ್, ಎನ್.ಆರ್. ನಾಯಕ್, ಅಧ್ಯಕ್ಷತೆ: ಎ.ಆರ್. ಗೋವಿಂದಸ್ವಾಮಿ, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ರಾಮಕೃಷ್ಣ ಹೆಗಡೆ ಜನ್ಮದಿನಾಚರಣೆ, ‘ಕಾಯಕಶ್ರೀ’ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಸಿ.ಎಂ. ಇಬ್ರಾಹಿಂ, ಉದ್ಘಾಟನೆ: ಜೈ ಪ್ರಕಾಶ್ ಬಂಧು, ಪ್ರಾಸ್ತಾವಿಕ ನುಡಿ: ಎಂ.ಪಿ. ನಾಡಗೌಡ, ಅತಿಥಿಗಳು: ಲೀಲಾದೇವಿ ಆರ್. ಪ್ರಸಾದ್, ಬಿ. ಸೋಮಶೇಖರ್, ಅನುಜ್ ಜಿ. ಶರ್ಮ, ಪಿ.ಎಸ್. ಪ್ರಕಾಶ್, ಆರ್.ವಿ. ಹರೀಶ್, ರಾಬಿನ್ ಮ್ಯಾಥ್ಯೂ, ಕೋಮದನ್, ಆಯೋಜನೆ: ಜನತಾ ಪಕ್ಷ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30



ರಾಮಕೃಷ್ಣ ಹೆಗಡೆ–98: ನುಡಿ ನಮನ: ಗುರುರಾಜ ಕರಜಗಿ, ಬಸವರಾಜ ಹೊರಟ್ಟಿ, ಬಿ.ಆರ್. ಪಾಟೀಲ, ಬಸವರಾಜ ರಾಯರೆಡ್ಡಿ, ಆರ್.ವಿ. ದೇಶಪಾಂಡೆ, ಬಿ.ಎಲ್. ಶಂಕರ್, ಟಿ.ಎನ್. ಸೀತಾರಾಂ, ಆರ್.ವಿ. ಹರೀಶ್, ಮಂಟೇಸ್ವಾಮಿ ಕಾವ್ಯ ಪ್ರಯೋಗ ನಿಜವರಿತು ನುಡಿವವ ‘ಶರಣ’: ನಿರ್ದೇಶನ: ಶ್ರೀಪಾದ ಭಟ್, ಪ್ರಸ್ತುತಿ: ನಿರ್ದಿಗಂತ, ಆಯೋಜನೆ: ರಾಷ್ಟ್ರೀಯ ನವ ನಿರ್ಮಾಣ ವೇದಿಕೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಸಮಾಜ ಸೇವಕರಿಗೆ, ಸಾಹಿತಿಗಳಿಗೆ, ದಕ್ಷ ಪ್ರತಿಭಾವಂತ ಅಧಿಕಾರಿಗಳು, ವೈದ್ಯಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಆರೂಢ ಭಾರತೀ ಸ್ವಾಮೀಜಿ, ಉದ್ಘಾಟನೆ: ಸಿ. ಸೋಮಶೇಖರ್, ಮಹೇಶ ಜೋಶಿ, ಪಿ.ಸಿ. ಮೋಹನ್, ಆಯೋಜನೆ: ಸಂದೇಶ್ ಯುವ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಸಂಗೀತ ಕಛೇರಿ: ಗಾಯನ: ವಿಕ್ಕು ವಿನಾಯಕರಾಮ್, ಖಂಜಿರಾ: ಸೆಲ್ವಗಣೇಶ್ ವಿನಾಯಕರಾಮ್, ಘಟ: ಉಮಾಶಂಕರ್ ವಿನಾಯಕರಾಮ್, ಮೃದಂಗ: ರಾಮಕೃಷ್ಣನ್ ಎನ್., ಮೋರ್ಸಿಂಗ್: ಎ. ಗಣೇಶನ್, ಆಯೋಜನೆ: ಸ್ಪಿಕ್‌ಮೆಕೆ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ, ಸಂಜೆ 6

‘ಕುಮಾರವ್ಯಾಸನ ಅರ್ಜುನ ಊರ್ವಶಿ ಪ್ರಸಂಗ’ದ ಕುರಿತ ಉಪನ್ಯಾಸ: ತಮಿಳ್ ಸೆಲ್ವಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ. nagaradalli_indu@prajavani.co.in

ಎತ್ತಿನಹೊಳೆ ಪ್ರಾಯೋಗಿಕ ನೀರು ಹರಿಸುವಿಕೆಗೆ ಚಾಲನೆ ನೀಡಿದ ಡಿಸಿಎಂ

2027ರ ವೇಳೆಗೆ ಯೋಜನೆ ಪೂರ್ಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಐದು ಚೆಕ್‌ಡ್ಯಾಂಗೆ ಚಾಲನೆ
- ಏಳು ಜಿಲ್ಲೆಗೆ ನೀರು
- ವಾಣಿವಿಲಾಸ ಸಾಗರಕ್ಕೆ ತಾತ್ಕಾಲಿಕವಾಗಿ ನೀರು

ಸಕಲೇಶಪುರ (ಹಾಸನ): 'ಎತ್ತಿನಹೊಳೆ ಯೋಜನೆಯಡಿ ಒಟ್ಟು 8 ವಿಯರ್ (ಚೆಕ್‌ಡ್ಯಾಂ)ಗಳಲ್ಲಿ 5 ವಿಯರ್‌ಗಳಿಗೆ ಚಾಲನೆ ನೀಡಲಾಗಿದೆ. 1,500 ಕ್ಯುಸೆಕ್ ನೀರನ್ನು ಮೇಲಕ್ಕೆ ಎತ್ತಲಾಗಿದೆ. ನೀರು ಕಡಿಮೆ ಆಗುವ ಮೊದಲು ಶುಭದಿನ ನೋಡಿ ಮುಖ್ಯಮಂತ್ರಿಯಿಂದ ಚಾಲನೆ ಮಾಡಿಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಾಲ್ಲೂಕಿನ ಕೆಸವನಹಳ್ಳಿಯ ಕುಂಬರಡಿ ಕಾಫಿ ಎಸ್ಟೇಟ್ ಬಳಿ ಎತ್ತಿನಹೊಳೆ ಯೋಜನೆಯ ಪರೀಕ್ಷಾರ್ಥ ನೀರು ಹರಿಸುವಿಕೆಗೆ ಬುಧವಾರ ಚಾಲನೆ ನೀಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿ, '2024ರ ಜುಲೈ ಅಂತ್ಯದವರೆಗೆ ₹16,152 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದ್ದು, 2027ರ ಮಾರ್ಚ್ 31ರ ವೇಳೆಗೆ ಯೋಜನೆಯನ್ನು ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ' ಎಂದು ತಿಳಿಸಿದರು.

'ಯೋಜನೆಯಿಂದ 24.01 ಟಿಎಂಸಿ ಅಡಿ ನೀರನ್ನು 7 ಜಿಲ್ಲೆಗಳಿಗೆ ಕುಡಿಯಲು ಪೂರೈಸಲಾಗುವುದು. ಬರಪೀಡಿತ 29 ತಾಲ್ಲೂಕಿನ 38 ಪಟ್ಟಣ ಹಾಗೂ 6,657 ಗ್ರಾಮಗಳ ಸುಮಾರು 75.59 ಲಕ್ಷ ಜನ ಮತ್ತು ಜಾನುವಾರುಗಳಿಗೆ 14.056 ಟಿಎಂಸಿ ಅಡಿ ನೀರನ್ನು ಒದಗಿಸಲಾಗುವುದು. 527 ಕೆರೆಗಳಿಗೆ 9.953 ಟಿಎಂಸಿ ಅಡಿ ನೀರನ್ನು ಹರಿಸುವುದು ಮುಖ್ಯ ಉದ್ದೇಶ' ಎಂದರು.

'₹23,251 ಕೋಟಿ ವೆಚ್ಚದ ಯೋಜನೆಯ ಮೊದಲನೇ ಹಂತದಲ್ಲಿ, ಏತ ಮತ್ತು ವಿದ್ಯುತ್ ಪೂರೈಕೆ ಕಾಮಗಾರಿಗಳಲ್ಲಿ ಅಚಡಣೆ ಉದ್ಭವಿಸಿದ್ದರಿಂದ ವಿಳಂಬವಾಗಿತ್ತು' ಎಂದರು.

'ಕಾಲುವೆ ಒಟ್ಟು 252.87 ಕಿ.ಮೀ ಉದ್ದವಿದ್ದು, ಆ ಪೈಕಿ 164 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. ಈ ಮಧ್ಯೆ 42 ಕಿ.ಮೀ. ನಂತರ ಅರಣ್ಯ ಮತ್ತು ಭೂಸ್ವಾಧೀನ ಸಮಸ್ಯೆಯಿಂದಾಗಿ ಕಾಮಗಾರಿ ಪೂರ್ಣಗೊಂಡಿಲ್ಲ. ಹೀಗಾಗಿ 32.50 ಕಿ.ಮೀ. ನಂತರ ನೀರನ್ನು ವೇದಾ ವ್ಯಾಲಿ ಮೂಲಕ 132.50 ಕಿ.ಮೀ ದೂರದ ವಾಣಿವಿಲಾಸ ಸಾಗರಕ್ಕೆ ತಾತ್ಕಾಲಿಕವಾಗಿ ಹರಿಸುವ ಉದ್ದೇಶವಿದೆ' ಎಂದು ಮಾಹಿತಿ ನೀಡಿದರು.

'ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಜೂನ್ 1ರಿಂದ ಆಗಸ್ಟ್ 20ರವರೆಗೆ ಒಟ್ಟು 13.34 ಟಿಎಂಸಿ ಅಡಿ ನೀರಿನ ಹರಿವು ದಾಖಲಾಗಿದೆ' ಎಂದು ತಿಳಿಸಿದರು.

ಸ್ಟೆಮ್ ಚಾಲೆಂಜ್: ವಿಜೇತರ ಘೋಷಣೆ



ರಾಷ್ಟ್ರೀಯ ಸ್ಟೆಮ್ ಚಾಲೆಂಜ್‌ನ ವಿಜೇತರಿಗೆ ಬಹುಮಾನ ವಿತರಿಸಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಶೈಕ್ಷಣಿಕ ಉಪಕ್ರಮದಲ್ಲಿ ಒಂದಾದ ರಾಷ್ಟ್ರೀಯ ಸ್ಟೆಮ್ ಚಾಲೆಂಜ್‌ನ ವಿಜೇತರನ್ನು ನಗರದಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಸ್ಪರ್ಧೆಯ 'ಗ್ರ್ಯಾಂಡ್ ಫಿನಾಲೆ'ಯಲ್ಲಿ ಘೋಷಿಸಲಾಯಿತು.

ಪ್ರತಿಭೆ ಮತ್ತು ನಾವೀನ್ಯ ಪ್ರದರ್ಶಿಸುವ ಈ ಸ್ಪರ್ಧೆಯ ನಾಲ್ಕನೇ ಆವೃತ್ತಿಯಲ್ಲಿ 20 ರಾಜ್ಯಗಳ 2,000ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಟೆಮ್ ಕಲಿಕೆಯು ಶಾಲಾ ಮಕ್ಕಳಲ್ಲಿ ಶಿಕ್ಷಣವನ್ನು ಉತ್ತೇಜಿಸುವ ಕಾರ್ಯಕ್ರಮವಾಗಿದ್ದು, ಸಾಮಾಜಿಕ ಉದ್ಯಮ ಬ್ರಿಲಿಯೊ ಸಹಯೋಗದೊಂದಿಗೆ ಸ್ಪರ್ಧೆ ಆಯೋಜಿಸಲಾಗಿತ್ತು.

ವಿಜ್ಞಾನ ಮತ್ತು ಗಣಿತ ಮಾದರಿ ಸ್ಪರ್ಧೆಗಳು, ತಂತ್ರಜ್ಞಾನ ರಸಪ್ರಶ್ನೆಗಳು ಮತ್ತು ಎಂಜಿನಿಯರಿಂಗ್ ಟಿಂಕರಿಂಗ್ ಸೇರಿದಂತೆ ವರ್ಷಪೂರ್ತಿ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ) ಚಟುವಟಿಕೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿದೆ. ಅಂತಿಮ ಹಂತದಲ್ಲಿ 12 ರಾಜ್ಯಗಳಿಂದ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು 25 ಶಿಕ್ಷಕರು ಪಾಲ್ಗೊಂಡಿದ್ದರು.

ಮಹಾರಾಷ್ಟ್ರ, ಜಾರ್ಖಂಡ್, ಕರ್ನಾಟಕ, ದೆಹಲಿ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ತೆಲಂಗಾಣ, ರಾಜಸ್ಥಾನ, ಒಡಿಶಾ, ಪಂಜಾಬ್ ಮತ್ತು ಗೋವಾದ ಅಗ್ರ 27 ತಂಡಗಳು ರಾಷ್ಟ್ರೀಯ ಫೈನಲ್‌ಗೆ ಪ್ರವೇಶ ಪಡೆದಿದ್ದವು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ ವಿಜೇತರಿಗೆ ಬಹುಮಾನ ವಿತರಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ಬಿ.ಬಿ. ಕಾವೇರಿ, ರಾಷ್ಟ್ರೀಯ ಶಿಕ್ಷಣ ಪ್ರತಿಷ್ಠಾನದ ಶಾಲೆಗಳ ಟ್ರಸ್ಟಿ-ಕಾರ್ಯದರ್ಶಿ ಐಶ್ವರ್ಯಾ ಡಿಕೆಎಸ್ ಹೆಗ್ಡೆ, ಜವಾಹರಲಾಲ್ ನೆಹರೂ ತಾರಾಲಯದ ನಿರ್ದೇಶಕ ಬಿ.ಆರ್. ಗುರುಪ್ರಸಾದ್, ಸ್ಟೆಮ್ ಕಲಿಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶುತೋಷ್ ಪಂಡಿತ್, ಬ್ರಿಲಿಯೊ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಿವ ಪೆರುಬೊಟ್ಲಾ, ಮುಖಂಡರಾದ ಕುಸುಮಾ ಎಚ್, ಬ್ರಿಲಿಯೊ ಸುಸ್ಥಿರತೆಯ ಜಾಗತಿಕ ಮುಖ್ಯಸ್ಥ ಅಭಿಷೇಕ್ ರಂಜನ್ ಭಾಗವಹಿಸಿದ್ದರು.

ಸಿಇಟಿ ಕ್ರೀಡಾ ಕೋಟಾ: 40 ವಿದ್ಯಾರ್ಥಿಗಳು ಅರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರಸಕ್ತ ಸಾಲಿನಲ್ಲಿ ಪ್ರವೇಶ ಪಡೆಯಲು ಕ್ರೀಡಾ ಕೋಟಾದಡಿ 40 ಅಭ್ಯರ್ಥಿಗಳು ಮಾತ್ರ ಅರ್ಹತೆ ಪಡೆದಿದ್ದಾರೆ.

2024–25ನೇ ಸಾಲಿನಲ್ಲಿ 170 ಸೀಟುಗಳು ಕ್ರೀಡಾ ಕೋಟಾಕ್ಕೆ ಮೀಸಲಾಗಿದ್ದವು. ಆದರೆ, ಇನ್ನೂ 130 ಸೀಟುಗಳು ಖಾಲಿ ಉಳಿದಿದ್ದು, ಅವುಗಳನ್ನು ಸಾಮಾನ್ಯ ಕೋಟಾದಲ್ಲಿ ಪರಿಗಣಿಸಲಾಗುತ್ತದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಹೊಸ ಕ್ರೀಡಾ ನೀತಿ ಅನ್ವಯ ಕ್ರೀಡಾ ಕೋಟಾದಲ್ಲಿ ಪ್ರವೇಶ ಬಯಸುವವರು 10ರಿಂದ 12ನೇ ತರಗತಿ ಮಧ್ಯೆ ಎರಡು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿರಬೇಕು. ಆದರೆ, 2022ರಲ್ಲಿ ಕ್ರೀಡಾಕೂಟಗಳು ನಡೆದಿರಲಿಲ್ಲ. ಬಹುತೇಕ ವಿದ್ಯಾರ್ಥಿಗಳು 10 ಮತ್ತು 12ನೆಯ ತರಗತಿಯಲ್ಲಿ ಓದಿಗೆ ಗಮನಕೊಡುವ ಕಾರಣ ಕ್ರೀಡಾಕೂಟದಲ್ಲಿ ಭಾಗಹಿಸುವುದಿಲ್ಲ.

ಮೊದಲು 26 ವಿದ್ಯಾರ್ಥಿಗಳಷ್ಟೇ ಕ್ರೀಡಾ ಕೋಟಾಕ್ಕೆ ಆಯ್ಕೆಯಾಗಿದ್ದರು. ನಿಯಮ ಪ್ರಶ್ನಿಸಿ ಕೆಲವರು ಕೋರ್ಟ್ ಮೊರೆ ಹೋಗಿದ್ದರು. ಕೋರ್ಟ್ ಆದೇಶದ ನಂತರ ಕ್ರೀಡಾ ಇಲಾಖೆ ಪರಿಷ್ಕೃತ ಪಟ್ಟಿ ಪ್ರಕಟಿಸಿದ್ದು, ಮತ್ತೆ 14 ವಿದ್ಯಾರ್ಥಿಗಳು ಅವಕಾಶ ಪಡೆದಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಕ್ರೀಡಾ ಕೋಟಾದ ಅಡಿ ಪ್ರವೇಶ ಬಯಸಿ ಮೂರು ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು.

ಪತ್ನಿಯ ಕೊಲೆ: ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀತಿಸಿ ಮದುವೆಯಾಗಿದ್ದ ಪತ್ನಿಯನ್ನು ಕೊಲೆ ಮಾಡಿದ ಆರೋಪದಡಿ ಪತಿಯನ್ನು ಕೆಂಗೇರಿ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ನವ್ಯಶ್ರೀ(28) ಕೊಲೆಯಾದವರು.

ನವ್ಯಶ್ರೀ ಅವರು ನೃತ್ಯ ತರಬೇತಿ ನೀಡುತ್ತಿದ್ದರು. ಕೊಲೆ ಆರೋಪದ ಅಡಿ ಪತಿ ಕಿರಣ್‌ನನ್ನು(31) ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕೌಟುಂಬಿಕ ಕಾರಣ ಹಾಗೂ ಪತ್ನಿಯ ಮೇಲೆ ಅನುಮಾನಗೊಂಡು ಕೊಲೆ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ನವ್ಯಶ್ರೀ ಅವರ ಸ್ನೇಹಿತೆ ಐಶ್ವರ್ಯಾ ಅವರು ದೂರು ನೀಡಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.



ಆರೋಪಿ ಕಿರಣ್ ಹಾಗೂ ಕೊಲೆಯಾದ ನವ್ಯಶ್ರೀ

'ನವ್ಯಶ್ರೀ ಹಾಗೂ ಕಿರಣ್ ಅವರು ಪ್ರೀತಿಸಿ ಮೂರು ವರ್ಷಗಳ ಹಿಂದೆ ಮದುವೆ ಆಗಿದ್ದರು. ಕ್ಯಾಬ್ ಚಾಲಕನಾಗಿದ್ದ ಕಿರಣ್, ಎಸ್‌ಎಂವಿ ಲೇಔಟ್‌ನ ಒಂದನೇ ಬ್ಲಾಕ್‌ನಲ್ಲಿ ನೆಲೆಸಿದ್ದರು. ಇತ್ತೀಚೆಗೆ ದಂಪತಿ ಮಧ್ಯೆ ಕೌಟುಂಬಿಕ ಕಾರಣಕ್ಕೆ ಮನಸ್ತಾಪ ಉಂಟಾಗಿತ್ತು. ಕಿರಣ್ ಅತಿಯಾಗಿ ಮದ್ಯ ಸೇವಿಸುತ್ತಿದ್ದರು. ದಂಪತಿ ನಿತ್ಯವೂ ಗಲಾಟೆ ನಡೆಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಮಂಗಳವಾರ ಬೆಳಿಗ್ಗೆ ಐಶ್ವರ್ಯಾಗೆ ಕರೆ ಮಾಡಿದ್ದ ನವ್ಯಶ್ರೀ, 'ಮನೆ ಹಾಗೂ ಹೊರಗೆ ನೆಮ್ಮದಿ ಇಲ್ಲ' ಎಂದು ಹೇಳಿಕೊಂಡಿದ್ದರು. ಇದರಿಂದ ಗಾಬರಿಗೊಂಡ ಐಶ್ವರ್ಯಾ ಅವರು ನವ್ಯಶ್ರೀ ಅವರ ಬಳಿಗೆ ಬಂದಿದ್ದರು. ಇಬ್ಬರೂ ಕಾರಿನಲ್ಲಿ ರಾಜರಾಜೇಶ್ವರಿ ನಗರಕ್ಕೆ ತೆರಳಿ, ಅಲ್ಲಿ ಟೀ ಸೇವಿಸಿದ್ದರು. ಸ್ನೇಹಿತ ಅನಿಲ್ ಸಹ ಸ್ಥಳಕ್ಕೆ ಬಂದಿದ್ದರು. ಮನೆಯಲ್ಲಿ ನಡೆಯುತ್ತಿದ್ದ ಗಲಾಟೆ ವಿಚಾರವನ್ನು ನವ್ಯಶ್ರೀ ಪ್ರಸ್ತಾಪಿಸಿದ್ದರು. ಪೊಲೀಸ್ ಠಾಣೆಗೆ ದೂರು ನೀಡುವಂತೆ ಸ್ನೇಹಿತ ಸಲಹೆ ನೀಡಿದ್ದರು. ನಂತರ, ನವ್ಯಶ್ರೀ ಅವರ ಮನೆಗೆ ಐಶ್ವರ್ಯಾ ಸಹ ಬಂದು ಅಲ್ಲೇ ಉಳಿದುಕೊಂಡಿದ್ದರು. ಇವರು ಬರುವುದಕ್ಕೂ ಮೊದಲೇ ಮದ್ಯ ಸೇವಿಸಿ ಮನೆಗೆ ಬಂದಿದ್ದ ಆರೋಪಿ ಗಾಢ ನಿದ್ರೆಯಲ್ಲಿದ್ದರು. ಇಬ್ಬರೂ ಪ್ರತ್ಯೇಕ ಕೊಠಡಿಯಲ್ಲಿ ಮಲಗಿದ್ದರು. ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ಕೊಠಡಿಗೆ ನುಗ್ಗಿದ ಆರೋಪಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಪತ್ನಿಯನ್ನು ಕೊಂದು ಸುಳ್ಳುಕಥೆ ಕಟ್ಟಿದ್ದ ಪತಿಯ ಸೆರೆ

ಪತ್ನಿಯನ್ನು ತೋಟಕ್ಕೆ ಕರೆದೊಯ್ದು ಕಬ್ಬಿಣದ ಸಲಾಕೆಯಿಂದ ಹೊಡೆದು ಕೊಲೆ ಮಾಡಿ ಅಪರಿಚಿತರು ಹತ್ಯೆ ಮಾಡಿದ್ದಾರೆಂದು ಕಥೆ ಸೃಷ್ಟಿಸಿದ್ದ ಪತಿಯನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಜಾಕ್‌ಸಾಬ್ ಪಾಳ್ಯ ನಿವಾಸಿ ಮೆಹಬೂಬ್ ಸಾಬ್(50) ಬಂಧಿತ. ಆಗಸ್ಟ್ 24ರಂದು ರಾತ್ರಿ ಎರಡನೇ ಪತ್ನಿ ಮಮ್ತಾಜ್(45) ಅವರನ್ನು ಕೊಲೆ ಮಾಡಿದ್ದ. ಬಳಿಕ ತಾನೇ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದ. ಅನುಮಾನಗೊಂಡ ಪೊಲೀಸರು ಆತನನ್ನೇ ವಿಚಾರಣೆಗೆ ಒಳಪಡಿಸಿದಾಗ ಕೃತ್ಯ ಬಯಲಾಗಿದೆ.

ಆರೋಪಿ ಮೆಹಬೂಬ್ ಸಾಬ್‌ಗೆ ಇಬ್ಬರು ಪತ್ನಿಯರಿದ್ದು, ಮಮ್ತಾಜ್ ಎರಡನೇ ಪತ್ನಿ. ತಮ್ಮ ತೋಟದಲ್ಲಿ ದಂಪತಿ ತರಕಾರಿ ಬೆಳೆಯುತ್ತಿದ್ದರು. ಸ್ವಂತ ಮನೆಯನ್ನು ಆರೋಪಿ ಮಾರಲು ಮುಂದಾಗಿದ್ದ. ಇದಕ್ಕೆ ಮಮ್ತಾಜ್ ವಿರೋಧ ವ್ಯಕ್ತಪಡಿಸಿದ್ದರು. ಈ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆಯುತ್ತಿತ್ತು ಎಂದು ಪೊಲೀಸರು ಹೇಳಿದರು.

ಪತ್ನಿಯಿದ್ದರೆ ಮನೆ ಮಾರಲು ಬಿಡುವುದಿಲ್ಲ ಎಂದು ಕೊಲೆಗೆ ಸಂಚು ರೂಪಿಸಿದ್ದ ಆರೋಪಿ, ಮನೆ ಸಮೀಪದ ತೋಟಕ್ಕೆ ತರಕಾರಿ ಕೊಯ್ಯಲು ಕರೆದೊಯ್ದು ಅಲ್ಲಿ ಕೊಲೆ ಮಾಡಿದ್ದ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಕೃತ್ಯ ಎಸಗಿದ ಬಳಿಕ ಆರೋಪಿ ಆ.24ರಂದು ರಾತ್ರಿ ಮಾಲೂರಿನಲ್ಲಿ ಇರುವ ಸಂಬಂಧಿಕರ ಮದುವೆ ಆರತಕ್ಷತೆಗೆ ಹೋಗಿದ್ದ. ನಂತರ ಮನೆಗೆ ಬಂದು ಪತ್ನಿ ಕಾಣಿಸುತ್ತಿಲ್ಲ ಎಂದು ಪುತ್ರಿಗೆ ತಿಳಿಸಿದ್ದ. ನಂತರ ಸ್ಥಳೀಯರ ಜೊತೆಗೆ ತೋಟಕ್ಕೆ ತೆರಳಿ ನೋಡಿದಾಗ ಪತ್ನಿಯ ಕೊಲೆ ಆಗಿದೆ ಎಂದು ಹೇಳಿ ಪೊಲೀಸರಿಗೆ ಸುಳ್ಳು ದೂರು ನೀಡಿದ್ದ.

'ಆರೋಪಿ ಮದುವೆಗೆ ಹೋಗಿದ್ದು, ಕೆಲವು ಕ್ಷಣಗಳಲ್ಲೇ ವಾಪಸ್ ಬಂದಿರುವುದು ತನಿಖೆಯಲ್ಲಿ ಗೊತ್ತಾಗಿದೆ. ಅಲ್ಲದೆ, ಘಟನೆ ಸಂದರ್ಭದಲ್ಲಿ ದಂಪತಿಯ ಮೊಬೈಲ್ ನೆಟ್‌ವರ್ಕ್ ಒಂದೇ ಕಡೆ ಇತ್ತು. ಈ ಎಲ್ಲಾ ಅಂಶಗಳಿಂದ ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ನಡೆಸಿದಾಗ ನಿಜ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಮೂವರ ಸಾವು

ಚಿಂತಾಮಣಿ: ಬೆಂಗಳೂರು-ಮದನಪಲ್ಲಿ ರಾಜ್ಯ ಹೆದ್ದಾರಿ ದಂಡುಪಾಳ್ಯ ಗೇಟ್ ಬಳಿ ಬುಧವಾರ ರಾತ್ರಿ ಟೆಂಪೊ ಮತ್ತು ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾಗಿ ಸಂಭವಿಸಿದ ಅಪಘಾತದಲ್ಲಿ ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಟೆಂಪೊದಲ್ಲಿದ್ದ ಬೆಂಗಳೂರಿನ ನಿವಾಸಿಗಳಾದ ನಾಗೇಂದ್ರ, ಕಿಶೋರ್ ಕುಮಾರ್, ಗುರುಸ್ವಾಮಿ, ಬಿಂದು, ಆದ್ಯ, ಮನುತೇಜ್, ರವಿಕುಮಾರ್, ರಮ್ಯ, ಹಿಮಶ್ರೀ, ಗುರುಸ್ವಾಮಿ, ಜಗದೀಶ್ವರಿ, ಸೋಮೇಶ್ವರರಾವ್ ಗಾಯಗೊಂಡಿದ್ದಾರೆ.

ವಿಮಾನ ನಿಲ್ದಾಣ ಸಿಬ್ಬಂದಿ ಕೊಲೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಿಬ್ಬಂದಿಯೊಬ್ಬರನ್ನು ಬುಧವಾರ ಸಂಜೆ ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆ ಮಾಡಲಾಗಿದೆ.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಪುರುವರ ಗ್ರಾಮದ ರಾಮಕೃಷ್ಣ (45) ಕೊಲೆಯಾದವರು.

ವಿಮಾನ ನಿಲ್ದಾಣದ ಟರ್ಮಿನಲ್–1ರಲ್ಲಿ ಟ್ರಾಲಿ ತಳ್ಳುವ ಕೆಲಸ ಮಾಡುತ್ತಿದ್ದರು. ಎಂಜಿಎಸ್ ಸೆಕ್ಯೂರಿಟಿ ಗಾರ್ಡ್ ಕಂಪನಿಯಿಂದ ಕೆಲಸಕ್ಕೆ ನೇಮಕಗೊಂಡಿದ್ದ ಅವರು, ಸಮೀಪದ ಶೆಟ್ಟಿಗೆರೆಯಲ್ಲಿ ವಾಸವಾಗಿದ್ದರು.

ಇದೇ ಗ್ರಾಮದ ರಮೇಶ್ ವಿಮಾನ ನಿಲ್ದಾಣದ ಶೌಚಾಲಯದಲ್ಲಿ ರಾಮಕೃಷ್ಣ ಅವರನ್ನು ಕೊಲೆ ಮಾಡಿದ್ದಾರೆ. ಕಾರಣ ತಿಳಿದು ಬಂದಿಲ್ಲ.

ತಾತ್ಕಾಲಿಕ ಪ್ರತಿಬಂಧಕಾಜ್ಞೆ ವಿಧಿಸಿದ ಸೆಷನ್ಸ್ ನ್ಯಾಯಾಲಯ

ಬೊಮ್ಮಾಯಿ ಮಾನಹಾನಿ ಸುದ್ದಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರ ಮಾನಹಾನಿ ಆಗುವಂತಹ ಯಾವುದೇ ಸುದ್ದಿ ಅಥವಾ ವರದಿಗಳನ್ನು ವಕೀಲ ಕೆ.ಎನ್. ಜಗದೀಶ್, ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳು ಪ್ರಕಟಿಸುವುದಾಗಲೀ ಅಥವಾ ಬಿತ್ತರಿಸುವುದಾಗಲೀ ಮಾಡಬಾರದು' ಎಂದು ಸೆಷನ್ಸ್ ನ್ಯಾಯಾಲಯ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಹೊರಡಿಸಿದೆ.



ಬಸವರಾಜ ಬೊಮ್ಮಾಯಿ ಅಸಲು ದಾವೆಯ ಭಾಗವಾಗಿ ಸಲ್ಲಿಸಲಾಗಿರುವ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ನಗರದ 8ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರಾದ ವಾಣಿ ಎ.ಶೆಟ್ಟಿ ಅವರು ಬುಧವಾರ ಈ ಕುರಿತಂತೆ ಆದೇಶಿಸಿದ್ದಾರೆ.

ಆದೇಶದಲ್ಲೇನಿದೆ?: 'ಪ್ರಕರಣದ ಪ್ರತಿವಾದಿಗಳು ಮತ್ತು ಅವರಿಗೆ ಸಂಬಂಧಿಸಿದ ಯಾವುದೇ ವ್ಯಕ್ತಿ ದಾವೆಯ ಮುಂದಿನ ವಿಚಾರಣೆಯವರೆಗೆ ದೂರುದಾರ ಬಸವರಾಜ ಬೊಮ್ಮಾಯಿ ಅವರಿಗೆ ಮಾನಹಾನಿಯುಂಟು ಮಾಡುವ ಯಾವುದೇ ಸುದ್ದಿಯನ್ನು ಪ್ರಸಾರ, ಪ್ರಕಟ ಮತ್ತು ಹಂಚಿಕೆ ಮಾಡಬಾರದು' ಎಂದು ನ್ಯಾಯಾಧೀಶರು ಏಕಪಕ್ಷೀಯ ತಾತ್ಕಾಲಿಕ ಪ್ರತಿಬಂಧಕಾದೇಶ ಹೊರಡಿಸಿದ್ದಾರೆ.

ಅಂತೆಯೇ, 'ಬೊಮ್ಮಾಯಿ ಅವರ ಮಾನಹಾನಿ ಆಗುವಂತಹ ಅಂಶಗಳನ್ನೊಳಗೊಂಡ ಎರಡು ಪೋಸ್ಟ್‌ಗಳನ್ನು 24 ಗಂಟೆ ಒಳಗೆ ಅಳಿಸಿಹಾಕಬೇಕು' ಎಂದು ಪ್ರಕರಣದ 48ನೇ ಪ್ರತಿವಾದಿಯಾದ 'ಎಕ್ಸ್ ಕಾರ್ಪ್'ಗೆ (ಟ್ವಿಟರ್) ನ್ಯಾಯಾಧೀಶೆ ವಾಣಿ ಅವರು ನಿರ್ದೇಶಿಸಿದ್ದಾರೆ. ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಮತ್ತು ಸಮನ್ಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಾಧೀಶರು ವಿಚಾರಣೆಯನ್ನು ಸೆಪ್ಟೆಂಬರ್ 9ಕ್ಕೆ ಮುಂದೂಡಿದ್ದಾರೆ.

'ಮಾಜಿ ಮುಖ್ಯಮಂತ್ರಿಯೂ ಆಗಿರುವ ಹಾಲಿ ಸಂಸದರೊಬ್ಬರ ಖಾಸಗಿ ಕ್ಷಣಗಳ ವಿಡಿಯೊ ತಮ್ಮ ಬಳಿ ಇದ್ದು, ಅದನ್ನು ಸದ್ಯವೇ ಬಿಡುಗಡೆ ಮಾಡುತ್ತೇನೆ' ಎಂದು ವಕೀಲ ಕೆ.ಎನ್. ಜಗದೀಶ್ ಸಾಮಾಜಿಕ ಮಾಧ್ಯಮಗಳಲ್ಲಿ ಹೇಳಿದ್ದರು.

ನಟ ದರ್ಶನ್‌ಗೆ ವಿಶೇಷ ಸೌಲಭ್ಯಗಳಿಲ್ಲ • ಸುಸ್ಥಿತಿಯಲ್ಲಿವೆ 105 ಸಿಸಿಟಿವಿ ಕ್ಯಾಮೆರಾಗಳು

ಬಳ್ಳಾರಿ ಕಾರಾಗೃಹದಲ್ಲೂ ಇಲ್ಲ ಜಾಮರ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರನ್ನು ಇರಿಸಲು ಉದ್ದೇಶಿಸಿರುವ ಬಳ್ಳಾರಿ ಕಾರಾಗೃಹದಲ್ಲಿ ಜಾಮರ್ ವ್ಯವಸ್ಥೆ ಇಲ್ಲ. ಇದನ್ನು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ಖಚಿತ ಪಡಿಸಿವೆ.

ಇದೇ ವರ್ಷ ಮಾರ್ಚ್ 12ರಂದು ವ್ಯಕ್ತಿಯೊಬ್ಬ ಕಾರಾಗೃಹದ ಆವರಣದಲ್ಲಿ ಮೊಬೈಲ್ ಫೋನ್ ಎಸೆದು ಹೋಗಿದ್ದ. ಇದರ ಬಗ್ಗೆ ಜೈಲು ಅಧಿಕಾರಿಗಳು ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಬಳ್ಳಾರಿ ಕಾರಾಗೃಹದಲ್ಲಿ 413 ಪುರುಷ ಮತ್ತು 20 ಮಹಿಳೆಯರು ಸೇರಿ 433 ಕೈದಿಗಳನ್ನು ಇರಿಸಬಹುದು. ಸದ್ಯ 380 ಕೈದಿಗಳಿದ್ದಾರೆ.



ನಟ ದರ್ಶನ್‌ಗೆ ನೋಡಲು ಬಳ್ಳಾರಿ ಕಾರಾಗೃಹದ ಎದುರು ಜಮಾಯಿಸಿದ್ದ ಅಭಿಮಾನಿಗಳು

ವಿಚಾರಣಾಧೀನ ಬಂದಿಗಳಿಗೆ 5 ಬ್ಯಾರಕ್, ಸಜಾ ಬಂಧಿಗಳಿಗೆ 3 ಬ್ಯಾರಕ್ ಮತ್ತು ಉಳಿದವು ವಿಶೇಷ ಭದ್ರತಾ ವಿಭಾಗಗಳಾಗಿವೆ.

ಭಯೋತ್ಪಾದನೆ ಮತ್ತು ವಿಶೇಷ ಪ್ರಕಣಗಳ ಆರೋಪಿಗಳನ್ನು ವಿಶೇಷ ಭದ್ರತಾ ವಿಭಾಗಗಳಲ್ಲಿ ಇರಿಸಲಾಗುತ್ತದೆ. ಬುಲೆಟ್, ಡೂಮ್, ಪಿಟಿಝೆಡ್ ಮಾದರಿಯ 105 ಸಿಸಿಟಿವಿ ಕ್ಯಾಮೆರಾಗಳಿದ್ದು, ಸುಸ್ಥಿತಿಯಲ್ಲಿವೆ ಎಂದು ಗೊತ್ತಾಗಿದೆ.

'ಬಳ್ಳಾರಿಗೆ ದರ್ಶನ್ ಕಳುಹಿಸುವ ಬಗ್ಗೆ ಉನ್ನತಾಧಿಕಾರಿಗಳಿಂದ ನಿರ್ದೇಶನ ಬಂದಿಲ್ಲ. ವಿಚಾರಣಾಧೀನ ಕೈದಿಗಳ ಬ್ಯಾರಕ್‌ನಲ್ಲೇ ದರ್ಶನ್‌ಗೆ ಇರಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ವಿ.ಜೆ ತಿಳಿಸಿದರು.

ಕೈದಿಗಳ ಮನೆಯವರಿಗೆ ಬೇಸರ

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ನಟ ದರ್ಶನ್ ಸ್ಥಳಾಂತರ ವಿಷಯ ಗೊತ್ತಾದ ಹಿನ್ನೆಲೆಯಲ್ಲಿ ಅವರನ್ನು ನೋಡಲು ನಸುಕಿನ 3 ಗಂಟೆಯಿಂದ ಬಳ್ಳಾರಿ ಕಾರಾಗೃಹದ ಸುತ್ತಮುತ್ತ ದರ್ಶನ್ ಮತ್ತು ನಟ ದಿ. ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ಜಮಾಯಿಸಿದ್ದರು. ಮಧ್ಯಾಹ್ನ 3 ಗಂಟೆಗೆ ಪೊಲೀಸರು ಎಲ್ಲರನ್ನೂ ಚದುರಿಸಿ, ಅಲ್ಲಲ್ಲಿ ಬ್ಯಾರಿಕೇಡ್ ಹಾಕಿದರು.

ಕಾರಾಗೃಹದಲ್ಲಿನ ಕೈದಿಗಳ ಭೇಟಿಗಾಗಿ ಅವರ ಸಂಬಂಧಿಕರು ಬೆಳಿಗ್ಗೆಯೇ ಬಂದಿದ್ದರು. ಆದರೆ, ಭದ್ರತಾ ವ್ಯವಸ್ಥೆ ಮತ್ತು ಇನ್ನಿತರ ಕಾರಣಗಳಿಂದ ಸಂಬಂಧಿಕರಿಗೆ ಭೇಟಿಯಾಗಲು ಅವಕಾಶ ಸಿಗಲಿಲ್ಲ. ಬೆಳಿಗ್ಗೆ 10ಕ್ಕೆ ಬಂದಿದ್ದ ಸಂಬಂಧಿಕರು, ಮಧ್ಯಾಹ್ನದವರೆಗೆ ಕಾದು ಕೂತಿದ್ದರು. ಆದರೆ, ಭೇಟಿಗೆ ಕೊನೆಗೂ ಅವಕಾಶ ಸಿಗದಾದಾಗ, ನಿರಾಸೆಯಿಂದ ಮನೆಗೆ ಮರಳಿದರು.

'ಗಾಂಜಾ, ಗುಟ್ಕಾ ಸಿಗುತ್ತವೆ ಎಂದವನ ವಿಚಾರಿಸ್ತೀವಿ'

ಬಳ್ಳಾರಿ: ಜೈಲಿನಲ್ಲಿ ಆರು ವರ್ಷ ಸೆರೆವಾಸ ಅನುಭವಿಸಿ ಈಚೆಗೆ ಬಿಡುಗಡೆಯಾಗಿದ್ದ ಜಯಸಿಂಹ ಎಂಬುವರು ಸುದ್ದಿಗಾರರಿಗೆ, 'ಜೈಲಿನಲ್ಲಿ ಗಾಂಜಾ, ಗುಟ್ಕಾ ಸೇರಿ ಎಲ್ಲ ವಸ್ತುಗಳು ದೊರೆಯುತ್ತವೆ' ಎಂದಿದ್ದರು.

ಇದರ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾ ರಾಣಿ, 'ಅಂಥ ಯಾವುದೇ ಚಟುವಟಿಕೆ ಕಾರಾಗೃಹದಲ್ಲಿ ನಡೆಯುವುದಿಲ್ಲ. ಮಾಧ್ಯಮಗಳ ಎದುರು ಹೇಳಿಕೆ ನೀಡಿದ ವ್ಯಕ್ತಿಯನ್ನು ಕರೆದು ವಿಚಾರಿಸುತ್ತೇವೆ. ಹೇಳಿಕೆ ಬಗ್ಗೆ ಅಧಿಕಾರಿಗಳಿಂದ ವಿವರಣೆ ಪಡೆಯುವೆ' ಎಂದರು.

'ಜೈಲಿನಲ್ಲಿ ಎಲ್ಲವೂ ಸಿಗುತ್ತೆ. ಇದನ್ನು ಜೈಲರ್, ವಾರ್ಡನ್‌ಗಳು ತಲುಪಿಸುತ್ತಾರೆ. ಹಣ ಪಡೆದು ಇದನ್ನು ನೀಡಲಾಗುತ್ತದೆ. ಆರು ವರ್ಷ ಜೈಲಿನಲ್ಲಿದ್ದು ನಾನು ಇದನ್ನು ಗಮನಿಸಿದ್ದೇನೆ' ಎಂದು ಜಯಸಿಂಹ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು.

ಟೀ–ಪಾರ್ಟಿ ಆಯೋಜಿಸಿದ್ದು ನಾಗ

ಒಂದನೇ ಪುಟದಿಂದ...

'ಆ.22ರಂದು ಸಂಜೆ ನಾನಿದ್ದ ಬ್ಯಾರಕ್‌ಗೆ ವ್ಯಕ್ತಿಯೊಬ್ಬ ಬಂದು, 'ನಮ್ಮ ಬಾಸ್' ನಾಗ ಬರಲು ಹೇಳಿದ್ದಾರೆ ಎಂದರು. ನಾನು ಎದ್ದು ಹೋದೆ. ಆಗ ಆವ ರಣದಲ್ಲಿ ನಾಲ್ಕು ಕುರ್ಚಿ, ಟೇಬಲ್ ವ್ಯವಸ್ಥೆ ಮಾಡಲಾಗಿತ್ತು. ಹೋಗುತ್ತಿದ್ದಂ ತೆಯೇ ನಾಗ ಪರಿಚಯಿಸಿಕೊಂಡು, ಕುಳಿತುಕೊಳ್ಳಲು ಹೇಳಿದ. ಕುಳಿತುಕೊಂಡ ಬಳಿಕ ಟೀ ಹಾಗೂ ಸಿಗರೇಟ್ ತೆಗೆದುಕೊಳ್ಳುವಂತೆ ಕೊಟ್ಟ. ಅವರೊಂದಿಗೆ ಸ್ವಲ್ಪ ಸಮಯ ಮಾತಾಡಿದ್ದೆ. ನಾನು ಯಾರಿಗೂ ಸಿಗರೇಟ್, ಟೀ ಬೇಕೆಂದು ಕೇಳಿಲ್ಲ' ಎಂಬುದಾಗಿ ದರ್ಶನ್ ವಿಚಾರಣೆ ವೇಳೆ ಹೇಳಿದ್ದಾರೆ ಎಂದು ಗೊತ್ತಾಗಿದೆ.

ಇನ್ನು ಮೊಬೈಲ್‌ನಲ್ಲಿ ರೌಡಿಶೀಟರ್ ಪುತ್ರನ ಜತೆ ವಿಡಿಯೊ ಕರೆ ಮಾಡಿರುವ ಸಂಬಂಧ ಹೇಳಿಕೆ ನೀಡಿರುವ ದರ್ಶನ್, 'ಧರ್ಮ ಯಾರೆಂಬುದು ಗೊತ್ತಿಲ್ಲ. ನನ್ನ ಕೋಣೆಗೆ ಬಂದವರು ಯಾರು? ಕರೆ ಮಾಡಿದವರು ಯಾರು ಎಂಬುದೂ ತಿಳಿದಿಲ್ಲ. ವಿಡಿಯೊ ಕರೆ ಮಾಡಿಕೊಂಡು ವ್ಯಕ್ತಿಯೊಬ್ಬ ಬಂದು ದರ್ಶನ್ ಸರ್ ಇದ್ದಾರೆಂದು ಹೇಳಿ ಮೊಬೈಲ್ ನನ್ನ ಕಡೆ ತಿರುಗಿಸಿದ. ಅತ್ತ ಯುವಕ ಹಾಯ್ ಎಂದು ಹೇಳಿದ್ದಕ್ಕೆ ಸೌಜನ್ಯದಿಂದ ಪ್ರತಿಕ್ರಿಯಿಸಿದ್ದೆ ಅಷ್ಟೇ' ಎಂದು ಹೇಳಿಕೆ ನೀಡಿದ್ದಾರೆ.

ಕಾರಾಗೃಹಗಳ ನಿಯಮ ಉಲ್ಲಂಘಿಸಿ ಮೊಬೈಲ್ ಬಳಸಿ ವಿಡಿಯೊ ಕರೆ ಮಾಡಿದ್ದ ಸತ್ಯ ಹಾಗೂ ಧರ್ಮ ಎಂಬವರನ್ನೂ ವಿಚಾರಣೆ ನಡೆಸಿದ್ದಾರೆ.

'ವಿಡಿಯೊ ಕರೆ ಮಾಡಿದ್ದ ಮೊಬೈಲ್ ಸಿಕ್ಕಿಲ್ಲ. ಆ ಮೊಬೈಲ್ ನಾಶ ಪಡಿಸಿರುವ ಸಾಧ್ಯತೆಯಿದೆ. ಯಾರ ಹೆಸರಿನ ಸಿಮ್‌ನಲ್ಲಿ ಕರೆ ಮಾಡಲಾಗಿತ್ತು ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ತನಿಖಾಧಿಕಾರಿಗಳು ಹೇಳಿದರು.

ಜೈಲು ಸಿಬ್ಬಂದಿ ಹೇಳಿಕೆ ದಾಖಲು: ರಟ್ಟಿನ ಪೆಟ್ಟಿಗೆಯಲ್ಲಿ ವಸ್ತುಗಳನಿಟ್ಟು ಸಾಗಣೆ ಮಾಡಿದ್ದ ಪ್ರಕರಣದಲ್ಲಿ ಜೈಲು ಸಿಬ್ಬಂದಿ ಕೆ.ಎಸ್.ಸುದರ್ಶನ್, ಪರಮೇಶ್ ನಾಯಕ್ ಲಮಾಣಿ, ರಾಯಮಾನೆ ಹಾಗೂ ಕೈದಿ ಮುಜೀಬ್‌ನನ್ನು ವಿಚಾರಣೆ ನಡೆಸಲಾಗಿದೆ ಎಂದು ಗೊತ್ತಾಗಿದೆ.

ಅವಧಿ ವಿಸ್ತರಣೆ: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ 17 ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು 24ನೇ ಎಸಿಎಂಎಂ ನ್ಯಾಯಾಲಯವು ಸೆಪ್ಟೆಂಬರ್ 9ರ ವರೆಗೆ ವಿಸ್ತರಿಸಿ ಆದೇಶಿಸಿದೆ.

ನ್ಯಾಯಾಂಗ ಬಂಧನದ ಅವಧಿ ಬುಧವಾರಕ್ಕೆ ಅಂತ್ಯವಾಗಿದ್ದರಿಂದ ಎಲ್ಲ ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಎದುರು ಹಾಜರು ಪಡಿಸಲಾಯಿತು.

ಆಗ ತನಿಖಾಧಿಕಾರಿಗಳ ಪರ ವಕೀಲರು, 'ದರ್ಶನ್ ಹಾಗೂ ಸಹಚರರು ಮೃತನ ಕುಟುಂಬಕ್ಕೆ ಬೆದರಿಕೆ ಹಾಕಬಹುದು. ಎಲ್ಲ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ವಿಸ್ತರಣೆ ಮಾಡಬೇಕು' ಎಂದು ಕೋರಿದರು. ನ್ಯಾಯಾಧೀಶರು ಅವಧಿ ವಿಸ್ತರಿಸಿ ಆದೇಶಿಸಿದರು.

ಇದೇ ವೇಳೆ ವಿಚಾರಣಾಧೀನ ಕೈದಿ ಪ್ರದೂಷ್, 'ತಮ್ಮ ತಂದೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ. ವಕೀಲರ ಭೇಟಿಗೂ ನನಗೆ ಅವಕಾಶ ಸಿಗುತ್ತಿಲ್ಲ. ಬೆಳಗಾವಿ ಜೈಲಿಗೆ ಸ್ಥಳಾಂತರಿಸದೆ ಇದೇ ಜೈಲಿನಲ್ಲಿ ಇರುವುದಕ್ಕೆ ಅವಕಾಶ ಮಾಡಿಕೊಡಿ' ಎಂದು ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ನ್ಯಾಯಾಧೀಶರು ಮನವಿ ತಿರಸ್ಕರಿಸಿ, ಜೈಲು ನಿಯಮಾವಳಿ ಪ್ರಕಾರ ವಕೀಲರು ಹಾಗೂ ಕೈದಿಯ ಕಡೆಯವರಿಗೆ ಭೇಟಿಗೆ ಅವಕಾಶ ಕಲ್ಪಿಸುವಂತೆ ಸೂಚಿಸಿದರು.

ವಿಐಪಿ ಬ್ಯಾರಕ್‌ಗೆ ದರ ನಿಗದಿ

ಒಂದನೇ ಪುಟದಿಂದ...

'ಪರಪ್ಪನ ಅಗ್ರಹಾರದಲ್ಲಿ ರೌಡಿಗಳಿಗೆ ಸುಲಭವಾಗಿ ಮೊಬೈಲ್ ಸಿಗುತ್ತದೆ. ದಾಳಿ ಮಾಹಿತಿ ಗೊತ್ತಾದ ತಕ್ಷಣವೇ ಭೂಮಿಯೊಳಗೆ ಬಚ್ಚಿಡುತ್ತಾರೆ. ಇದಕ್ಕಾಗಿಯೇ ಜೈಲು ಆವರಣದ ಮೈದಾನದಲ್ಲಿ ಗುಂಡಿಗಳನ್ನು ಮಾಡಿಕೊಂಡಿದ್ದಾರೆ. ಕೆಲವರು ಬಾಳೆ ದಿಂಡು ಸೀಳಿ ಅದರಲ್ಲಿ ಮೊಬೈಲ್, ಸಿಮ್ ಹಾಗೂ ಹಣವನ್ನು ಬಚ್ಚಿಡುತ್ತಾರೆ. ಜೈಲಿನ ಒಳಗೆ ಕ್ಯಾಂಟೀನ್ ಇದೆ. ಆರೋಪಿ ಜೈಲು ಸೇರಿದಾಗ ಆತನ ಬಳಿಯಿರುವ ಹಣವನ್ನು ಜೈಲು ಸಿಬ್ಬಂದಿ ಪಡೆದು ಕೂಪನ್ ನೀಡುತ್ತಾರೆ. ನಂತರ, ಆರೋಪಿಗೆ ಬೇಕಾದಾಗ ಬಿಸ್ಕತ್, ಚಿಪ್ಸ್ ಖರೀದಿಸಬಹುದು' ಎಂದು ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೈ ಸರ್ಕಾರದಲ್ಲಿ ಹಗರಣಗಳ ಸರಮಾಲೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಮತ್ತೊಂದು ಭೂಹಗರಣ ನಡೆದಿದೆ. ಬಿಜೆಪಿ ಸರ್ಕಾರವು ನೇರ ನಗದು ವರ್ಗಾವಣೆ ಮೇಲೆ ವಿಶ್ವಾಸ ಇಟ್ಟರೆ, ಕಾಂಗ್ರೆಸ್ ನಾಯಕರು 'ಡೈರೆಕ್ಟ್ ಬೆನೆಫಿಟ್ ಟು ಕಾಂಗ್ರೆಸ್' ಮೇಲೆ ನಂಬಿಕೆ ಇಟ್ಟಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ದ್ವಿವೇದಿ ಟೀಕಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಾಲ್ಮೀಕಿ ಹಗರಣ ಹಾಗೂ ಮುಡಾ ಹಗರಣದ ಬಳಿಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬಕ್ಕೆ ಸೇರಿದ ಮತ್ತೊಂದು ಹಗರಣ ಬಯಲಾಗಿದೆ. ಈ ಹಗರಣ ಬೆಳಕಿಗೆ ಬಂದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ಬಂದಿದ್ದರು. ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ತೆರಳಿದ್ದರು. ಯಾರು ಯಾರನ್ನು ರಕ್ಷಿಸಲು ಬಂದಿದ್ದರು ಎಂಬುದು ಬಹಿರಂಗವಾಗಬೇಕು. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಹಗರಣಗಳ ಸರಮಾಲೆಯೇ ನಡೆದಿದೆ' ಎಂದರು.

ಸಿದ್ದರಾಮಯ್ಯ ಪತ್ನಿ ವಿರುದ್ಧ ದೂರು ದಾಖಲು

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಡಾ ಕಡತದಲ್ಲಿದ್ದ ನೈಜ ದಾಖಲೆಗಳನ್ನು ನಾಶಪಡಿಸಿ, ಆ ಜಾಗದಲ್ಲಿ ಸುಳ್ಳು ದಾಖಲೆಗಳನ್ನು ಸೇರಿಸಿದ್ದಾರೆ' ಎಂದು ದೂರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಹಾಗೂ ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ ವಿರುದ್ಧ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಅವರು ಇಲ್ಲಿನ ಲಕ್ಷ್ಮಿಪುರಂ ಠಾಣೆಯಲ್ಲಿ ಬುಧವಾರ ದೂರು ದಾಖಲಿಸಿದ್ದಾರೆ.

'ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರ ಜಮೀನಿಗೆ ಬದಲಿ ನಿವೇಶನ ನೀಡುವಂತೆ ಪಾರ್ವತಿ ಅವರು 2014ರ ಜೂನ್ 23ರಂದು ಮುಡಾ ಆಯುಕ್ತರಿಗೆ ಬರೆದಿದ್ದಾರೆ ಎನ್ನಲಾದ ಪತ್ರವನ್ನು ಸಿದ್ದರಾಮಯ್ಯ ಜುಲೈ 26ರಂದು ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿದ್ದರು. ಅದರ ಎರಡನೇ ಪುಟದಲ್ಲಿ ಕೆಲವೆಡೆ ವೈಟ್ನರ್ ಹಾಕಿರುವ ಕುರಿತು ಅನುಮಾನ ವ್ಯಕ್ತವಾಗಿತ್ತು. ಆಗಸ್ಟ್ 26ರಂದು ಸಿದ್ದರಾಮಯ್ಯ ತಮ್ಮ 'ಎಕ್ಸ್' ಖಾತೆಯಲ್ಲಿ ವಿಡಿಯೊವೊಂದನ್ನು ಹಂಚಿಕೊಂಡಿದ್ದು, ವೈಟ್ನರ್ ಹಿಂದೆ ಏನಿತ್ತು ಎಂಬುದನ್ನು ಪ್ರದರ್ಶಿಸಿದ್ದಾರೆ. ಅದರಲ್ಲಿರುವ ಪಾರ್ವತಿ ಅವರ



ಸಹಿಗೂ, ನಾವು ಮಾಹಿತಿ ಹಕ್ಕಿನ ಅಡಿ ಪಡೆದುಕೊಂಡ ಅದೇ ಪತ್ರದಲ್ಲಿರುವ ಸಹಿಗೂ ವ್ಯತ್ಯಾಸಗಳಿವೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

'ಎರಡೂ ಪತ್ರಗಳ ಸಹಿಗಳಲ್ಲಿ ಒಟ್ಟು 9 ವ್ಯತ್ಯಾಸಗಳಿವೆ. ಎಕ್ಸ್ ಗುರುತುಗಳು, ವಿವಿಧ ಅಕ್ಷರಗಳಲ್ಲಿ ಭಿನ್ನತೆ ಕಂಡು ಬಂದಿದೆ. ನನ್ನ ಬಳಿ ಇರುವ ದಾಖಲೆ ಯಲ್ಲಿ ಎರಡನೇ ಪುಟದ ಎಡಭಾಗದಲ್ಲಿ ಟ್ಯಾಗ್ ಹಾಕಿದ್ದರೆ, ಸೃಷ್ಟಿಸಿರುವ ದಾಖಲೆಯ ಬಲಭಾಗದಲ್ಲಿ ಟ್ಯಾಗ್ ಗುರುತು ಕಾಣಿಸುತ್ತದೆ. ಮುಖ್ಯಮಂತ್ರಿ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ ಅವರ ಧ್ವನಿ ಕೇಳಿಸುತ್ತದೆ' ಎಂದಿದ್ದಾರೆ.

'ಪಾರ್ವತಿ ಅವರು ಬರೆದಿದ್ದ ಮೂಲ ಪತ್ರದಲ್ಲಿ, ವಿಜಯನಗರದಲ್ಲಿ ನಿವೇಶನ ಕೊಡಿ ಎಂದು ಕೋರಿದ್ದ ವಿಚಾರವನ್ನು ಮುಚ್ಚಿಟ್ಟು, ದೇವನೂರು ಮೂರನೇ ಹಂತದ ಬಡಾವಣೆ ಅಥವಾ ನಂತರ ಎಂಬ ಪದಗಳ ಮೇಲೆ ವೈಟ್ನರ್ ಹಾಕಲಾಗಿದೆ ಎಂಬಂತೆ ಬಿಂಬಿಸುವ ಸಲುವಾಗಿ ಎಂ. ಲಕ್ಷ್ಮಣ್ ಹಾಗೂ ಪಾರ್ವತಿ ಅವರು ಸಂಚು ರೂಪಿಸಿ ಹೊಸತಾಗಿ ಸುಳ್ಳು ಪತ್ರವನ್ನು ಸೃಷ್ಟಿಸಿದ್ದಾರೆ. ಮುಡಾದ ಕಡತದಲ್ಲಿ ಇದ್ದ ಈ ಮೂಲ ಪತ್ರವನ್ನು ನಾಶಪಡಿಸಿ, ಆ ಜಾಗದಲ್ಲಿ ಈಚೆಗೆ ಸೃಷ್ಟಿಸಿರುವ ಪತ್ರ ಇರಿಸಿ ಅದನ್ನೇ ವಿಡಿಯೊ ಮಾಡಿರುವ ಅನುಮಾನವಿದೆ. ಅದಕ್ಕೆ ಕಾರಣರಾದ ಈ ಇಬ್ಬರು ಹಾಗೂ ಅದಕ್ಕೆ ಸಹಕರಿಸಿದವರ ವಿರುದ್ಧ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಸ್ನೇಹಮಯಿ ಕೃಷ್ಣ ನಕಲಿ ದಾಖಲೆಗಳ ಸೃಷ್ಟಿಕರ್ತ'

ಮೈಸೂರು: 'ಬಿಜೆಪಿ–ಜೆಡಿಎಸ್‌ಗೆ ಸ್ನೇಹಮಯಿ ಕೃಷ್ಣ ಅವರೇ ದಾಖಲೆಗಳನ್ನು ಸೃಷ್ಟಿಸಿಕೊಡುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರ ಸಹಿ ಕುರಿತ ನಕಲಿ ದಾಖಲೆಗಳನ್ನೂ ಸೃಷ್ಟಿಸಿ ಬಿಡುಗಡೆ ಮಾಡಿದ್ದಾರೆ' ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಆರೋಪಿಸಿದರು.



ಲಕ್ಷ್ಮಣ

'ಪತ್ರಗಳ ನೈಜತೆ, ಸಹಿ ತಾಳೆಯಾಗದಿರುವುದನ್ನು ಪತ್ತೆ ಮಾಡಲು ಕೃಷ್ಣ ಅವರೇನು ಎಫ್‌ಎಸ್‌ಎಲ್ ತಜ್ಞರೇ' ಎಂದು ಲಕ್ಷ್ಮಣ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಅವರು ಜೆಡಿಎಸ್ ಮುಖಂಡರಿಗೆ ಮಾಡಿಕೊಟ್ಟಿದ್ದ ವಿಡಿಯೊವನ್ನೇ ಮುಖ್ಯಮಂತ್ರಿ ಹಂಚಿಕೊಂಡಿದ್ದಾರೆ. ಮೂಲ ಪತ್ರದಲ್ಲಿರುವುದನ್ನೇ ಹೇಳಿದ್ದಾರೆ. ನಾವು ಹೊಸತಾಗಿ ವಿಡಿಯೊ ಮಾಡಿಲ್ಲ. ಯಾವುದೇ ಬದಲಿ ಪತ್ರ ಸೃಷ್ಟಿಸಿಲ್ಲ' ಎಂದು ಸಮಜಾಯಿಷಿ ನೀಡಿದರು.

'ಭೂವಿವಾದ ಸೃಷ್ಟಿಸಿ ಜಮೀನು ಕಬಳಿಸುವುದರಲ್ಲಿ ಕೃಷ್ಣ ನಿಸ್ಸೀಮ. ಅವರ ವಿರುದ್ಧ ಮೈಸೂರು ನಗರದ ವಿವಿಧ ಠಾಣೆಗಳಲ್ಲಿ 17 ಪ್ರಕರಣ, ಗ್ರಾಮೀಣದಲ್ಲಿ 12 ಸೇರಿದಂತೆ ರಾಜ್ಯದ ವಿವಿಧೆಡೆ ಒಟ್ಟು 44 ಪ್ರಕರಣಗಳು ದಾಖಲಾಗಿವೆ. ಮೈಸೂರಿನ ಕೆ.ಆರ್. ಠಾಣೆಯ ರೌಡಿಗಳ ಪಟ್ಟಿಯಲ್ಲೂ ಅವರ ಹೆಸರಿದೆ. ಅವರ ಮನೆಗೆ ದಾಳಿ ಮಾಡಿದರೆ ಮುಡಾ ಸೀಲ್, ಛಾಪಾ ಕಾಗದಗಳು ಸಿಗುತ್ತವೆ' ಎಂದು ದೂರಿದರು.

'ಹಿರಿಯ ಪೊಲೀಸ್ ಅಧಿಕಾರಿಗಳೂ ಅವರನ್ನು ಕಂಡರೆ ಹೆದರುತ್ತಾರೆ. ಹೀಗಾಗಿ ನಾವು 15 ದಿನದ ಹಿಂದೆಯೇ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ' ಎಂದರು.

'₹100 ಕೋಟಿ ನೀಡಿದರೆ ಮುಖ್ಯಮಂತ್ರಿ ವಿರುದ್ಧದ ದೂರು ಹಿಂಪಡೆದು ಪ್ರಕರಣ ಮುಕ್ತಾಯಗೊಳಿಸುವುದಾಗಿ ಕೃಷ್ಣ ಪರವಾಗಿ ಕೆಲವರು ಬೇಡಿಕೆ ಇಟ್ಟಿದ್ದಾರೆ. ಸದ್ಯದಲ್ಲೇ ಅದರ ವಿವರಗಳನ್ನು ನೀಡುತ್ತೇನೆ' ಎಂದು ತಿಳಿಸಿದರು.

ಜಲಾನಯನ ಪ್ರದೇಶದಲ್ಲಿ ಮಳೆ • ನಾರಾಯಣಪುರ ಜಲಾಶಯದಿಂದ ಕೃಷ್ಣಾ ನದಿಗೆ ನೀರು

ಲಿಂಗಸುಗೂರು: ಶೀಲಹಳ್ಳಿ ಸೇತುವೆ ಮುಳುಗಡೆ

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಕೃಷ್ಣಾ ಕೊಳ್ಳದ ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಮಳೆ ಬೀಳುತ್ತಿರುವುದರಿಂದ ನಾರಾಯಣಪುರ ಜಲಾಶಯದಿಂದ ಹೆಚ್ಚುವರಿ ನೀರನ್ನು ಕೃಷ್ಣಾ ನದಿಗೆ ಹರಿಬಿಟ್ಟ ಪರಿಣಾಮ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ ಬುಧವಾರ ಮುಳುಗಡೆಯಾಗಿದೆ.

ನಾರಾಯಣಪುರ ಅಣೆಕಟ್ಟೆ ಸಾಮರ್ಥ್ಯ 492.252 ಮೀ ಪೈಕಿ 491.110 ಮೀ ನೀರು ಸಂಗ್ರಹ ಗೊಂಡಿದೆ. 1.78 ಲಕ್ಷ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಮುಳುಗಡೆ ಆಗುತ್ತಿರುವ ಸಂದರ್ಭದಲ್ಲೇ ಕೂಲಿಕಾರರು ಜೀವದ ಹಂಗು ತೊರೆದು ಸೇತುವೆ ದಾಟಿ ದಡಕ್ಕೆ ಬಂದಿದ್ದಾರೆ.

ಶೀಲಹಳ್ಳಿ ಸೇತುವೆ ಮುಳುಗಡೆಯಾಗಿದ್ದರಿಂದ ಹಂಚಿನಾಳ, ಯಳಗುಂದಿ, ಯರಗೋಡಿ, ಕಡದರಗಡ್ಡಿ ನಡುಗಡ್ಡೆ ಗ್ರಾಮಗಳ ಜನ 45 ಕಿ.ಮೀ ಸುತ್ತುವರಿದು ಬಾಹ್ಯ ಸಂಪರ್ಕ ಪಡೆಯುವಂತಾಗಿದೆ. ಪ್ರವಾಹ ಹೆಚ್ಚಾಗುತ್ತಿದ್ದಂತೆ ತಹಶೀಲ್ದಾರ್ ಶಂಶಾಲಂ ನಾಗಡದಿನ್ನಿ ನೇತೃತ್ವದಲ್ಲಿ ಅಧಿಕಾರಿಗಳ ತಂಡ ನಡುಗಡ್ಡೆ ಪ್ರದೇಶಗಳಿಗೆ ಭೇಟಿ ನೀಡಿ ಗ್ರಾಮಸ್ಥರಿಗೆ ಎಚ್ಚರಿಕೆ ನೀಡಿದೆ.



ಲಿಂಗಸುಗೂರು ತಾಲ್ಲೂಕಿನಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿದ ಶೀಲಹಳ್ಳಿ ಸೇತುವೆ ಬುಧವಾರ ಮುಳುಗಡೆ ಆಗುತ್ತಿದ್ದ ಸಂದರ್ಭದಲ್ಲಿ ಕೂಲಿಕಾರರು ಪ್ರವಾಹದ ನಡುವೆಯೇ ಸೇತುವೆಯನ್ನು ದಾಟಿ ಬಂದರು

ಹುಬ್ಬಳ್ಳಿ ವರದಿ: ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಯ ವಿವಿಧೆಡೆ ಬುಧವಾರ ಮಳೆಯಾಯಿತು.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ರಾಜಾಪೂರೆ ಬ್ಯಾರೇಜಿನಿಂದ ಕೃಷ್ಣಾ ನದಿಗೆ ಮತ್ತು ಕಲ್ಲೋಳ ಬಳಿಯ ಕೃಷ್ಣಾ ಸಂಗಮ ಸ್ಥಳದಲ್ಲಿ ದೂಧಗಂಗಾ ನದಿಗೆ ನೀರು ಹರಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಉಪವಿಭಾಗ ವ್ಯಾಪ್ತಿಯಲ್ಲಿ ದೂಧಗಂಗಾ ಹಾಗೂ ವೇದಗಂಗಾ ನದಿಗಳ 8ಕ್ಕೂ ಹೆಚ್ಚು ಕಿರು ಸೇತುವೆಗಳು ಜಲಾವೃತಗೊಂಡಿದ್ದು, ಬುಧವಾರ ರಾಯಬಾಗ ತಾಲ್ಲೂಕಿನ ಕುಡಚಿ ಬಳಿಯೂ ಕೃಷ್ಣಾ ನದಿಯ ಬೃಹತ್ ಸೇತುವೆ ಮುಳುಗಡೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆ ಬುಧವಾರವೂ ಮಳೆಯ ಅಬ್ಬರ ಮುಂದುವರೆದಿದೆ. ತಾಲ್ಲೂಕಿನ ಕದ್ರಾ ಜಲಾಶಯದಿಂದ ಯಾವುದೇ ಕ್ಷಣ ನೀರನ್ನು ಹೊರಬಿಡಬಹುದು. ಕಾಳಿ ನದಿಪಾತ್ರದ ಪ್ರದೇಶದ ಜನರು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಗೊಳ್ಳಬೇಕು ಎಂದು ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿ) ಪ್ರಕಟಣೆ ತಿಳಿಸಿದೆ.

ಮಡಿಕೇರಿ ವರದಿ: ಕೊಡಗಿನ ಹಲವೆಡೆ ಬುಧವಾರ ಸಾಧಾರಣ ಮಳೆ ಯಾಗಿದೆ. ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಮಡಿಕೇರಿ, ಭಾಗಮಂಡಲ, ಪೊನ್ನಂಪೇಟೆಯಲ್ಲಿ ತಲಾ 3 ಸೆಂ.ಮೀನಷ್ಟು ಮಳೆ ಸುರಿದಿದೆ.

ಭಾರಿ ಮಳೆ ಮುಂದುವರಿಕೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರವೂ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಆರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಹಾಗೂ ರಾಮನಗರ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಬೆಳಗಾವಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಒಂದೆರಡು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.


ಕರಾವಳಿ ಭಾಗದಲ್ಲಿ ಸೆಪ್ಟೆಂಬರ್ 3ರವರೆಗೂ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಒಳನಾಡಿನ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ತಿಳಿಸಿದೆ.

ಶುಕ್ರವಾರ ರಾಜ್ಯದ ಹಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಐದು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಏಳು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ದಸರಾ ಪಾಸ್: ₹2.63 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಮೈಸೂರು: 'ಕಳೆದ ವರ್ಷ ಮೈಸೂರು ದಸರಾ ಸಂದರ್ಭದಲ್ಲಿ ವಿವಿಧ ಪಾಸ್‌ಗಳ ಹಂಚಿಕೆಯಲ್ಲಿ ಸರ್ಕಾರಕ್ಕೆ ನಷ್ಟ ಮತ್ತು ಜನಸಾಮಾನ್ಯರಿಗೆ ವಂಚನೆಯಾಗಿದೆ. ಆರ್‌ಟಿಐ ಮೂಲಕ ದೊರೆತ ಮಾಹಿತಿಯ ಪ್ರಕಾರ, ಒಟ್ಟು 21,086 ಟಿಕೆಟ್‌ಗಳು ಮಾರಾಟವಾಗದೇ ಉಳಿದಿದ್ದು, ₹2.63 ಕೋಟಿ ನಷ್ಟವಾಗಿದೆ' ಎಂದು ವಾಯ್ಸ್ ಆಫ್ ಪೀಪಲ್ ಸಂಸ್ಥೆ ಅಧ್ಯಕ್ಷ ಎ.ವಸಂತರಾವ್ ಚೌಹಾಣ್ ಆರೋಪಿಸಿದರು.



ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಪಾಸ್‌ಗಳನ್ನು ಆನ್‌ಲೈನ್ ಮೂಲಕ ಮಾತ್ರವೇ ಮಾರಾಟ ಮಾಡಲಾಗುವುದು. ಆಫ್‌ಲೈನ್‌ನಲ್ಲಿ ಖರೀದಿಗೆ ಅವಕಾಶವಿಲ್ಲ ಎಂದು ಅಂದಿನ ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ತಿಳಿಸಿದ್ದರು. ಆದರೆ ಆನ್‌ಲೈನ್ ಮಾರಾಟ ಶುರುವಾದ ಕೆಲವೇ ನಿಮಿಷಗಳಲ್ಲಿ ಸರ್ವರ್ ಸಮಸ್ಯೆ ಎಂದು ತೋರಿಸಿ, ಬಳಿಕ ಸೋಲ್ಡ್ ಔಟ್ ಎನ್ನಲಾಯಿತು' ಎಂದು ದೂರಿದರು.

'ಸಾರ್ವಜನಿಕರಿಗೆ ಮಾರಾಟ ಮಾಡಲೆಂದೇ ಮೀಸಲಿಟ್ಟಿದ್ದ ಶೇ 32ರಷ್ಟು ಟಿಕೆಟ್‌ಗಳಲ್ಲಿ ಕೇವಲ ಶೇ 6 ಮಾರಾಟವಾಗಿದ್ದರೆ, ಅಧಿಕಾರಿಗಳು ಹಾಗೂ ರಾಜಕಾರಣಿಗಳಿಗೆ ಮೀಸಲಿಟ್ಟ ಶೇ 68ರಷ್ಟು ಟಿಕೆಟ್‌ಗಳಲ್ಲಿ ಶೇ 94 ವಿತರಿಸಲಾಗಿದೆ. ಈ ಕುರಿತು ರಾಜ್ಯಪಾಲರು, ಸರ್ಕಾರದ ಮುಖ್ಯ ಕಾರ್ಯದರ್ಶಿ, ಲೋಕಾಯುಕ್ತ ಹಾಗೂ ಪ್ರಾದೇಶಿಕ ಆಯುಕ್ತರಿಗೆ ದೂರು ನೀಡಿದ್ದೇವೆ. ಈ ಬಾರಿಯಾದರೂ ದಸರಾ ಟಿಕೆಟ್‌ಗಳ ಹಂಚಿಕೆಯಲ್ಲಿ ಜನರಿಗೆ ನ್ಯಾಯ ದೊರಕಬೇಕು' ಎಂದರು.

ನಾಗೇಂದ್ರ ಆಪ್ತರ ಮನೆಗಳಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಶಾಸಕ ನಾಗೇಂದ್ರ ಆಪ್ತರ ಮನೆಗಳ ಮೇಲೆ ಇ.ಡಿ ಅಧಿಕಾರಿಗಳು ಬುಧವಾರ ಬೆಳಗ್ಗೆ ಏಕಕಾಲಕ್ಕೆ ದಾಳಿ ನಡೆಸಿದರು.

'ನಗರದಲ್ಲಿ ಇರುವ ನಾಗೇಂದ್ರ ಆಪ್ತ ಕಾರ್ಯದರ್ಶಿ ವಿಜಯಕುಮಾರ್, ಸಂಬಂಧಿ ಎರ್ರಿಸ್ವಾಮಿ ಮತ್ತು ಅವರ ಸಹಾಯಕ ಈರಣ್ಣ, ಕಾಂಗ್ರೆಸ್ ಮುಖಂಡ ಅಲ್ಲಾ ಬಕಾಷ್ ಮತ್ತು ಇತರರ ಮನೆಗಳಲ್ಲಿ ಶೋಧ ನಡೆಯಿತು. ದಾಳಿ ವೇಳೆ ಯಾರನ್ನೂ ಬಂಧಿಸಿಲ್ಲ' ಎಂದು ಮೂಲಗಳು ತಿಳಿಸಿವೆ.

'ಬೆಳಿಗ್ಗೆ ಏಕಕಾಲಕ್ಕೆ ದಾಳಿ ನಡೆದಿದೆ. ಇ.ಡಿ ಅಧಿಕಾರಿಗಳಿಂದ ನಮಗೆ ಯಾವುದೇ ಮಾಹಿತಿ ಬಂದಿಲ್ಲ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು. ಬುಧವಾರ ಸಂಜೆಯವರೆಗೆ ಪರಿಶೀಲನೆ ಮುಂದುವರಿದಿತ್ತು.

ಮಂಡ್ಯ ನಗರಸಭೆ 'ಮೈತ್ರಿಪಕ್ಷ'ದ ತೆಕ್ಕೆಗೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಇಲ್ಲಿನ ನಗರಸಭೆ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯ ಅಖಾಡವನ್ನು ಪ್ರವೇಶಿಸುವ ಮೂಲಕ, ಆಡಳಿತದ ಚುಕ್ಕಾಣಿಯನ್ನು ಜೆಡಿಎಸ್ ಪಕ್ಷದ ತೆಕ್ಕೆಯಲ್ಲೇ ಉಳಿಸಿಕೊಳ್ಳುವಲ್ಲಿ ಬುಧವಾರ ಯಶಸ್ವಿಯಾದರು.

ಅಧ್ಯಕ್ಷರಾಗಿ ಜೆಡಿಎಸ್‌ನ ಎಂ.ವಿ. ಪ್ರಕಾಶ್ (ನಾಗೇಶ್) ಹಾಗೂ ಉಪಾಧ್ಯಕ್ಷರಾಗಿ ಬಿಜೆಪಿಯ ಎಂ.ಪಿ. ಅರುಣ್‌ಕುಮಾರ್ ಅವರು ತಲಾ 19 ಮತ ಪಡೆದು ಗೆದ್ದರು. 'ಮೈತ್ರಿ' ಇಲ್ಲಿಯೂ ಮುಂದುವರಿಯಿತು. ಕಾಂಗ್ರೆಸ್ ಮುಖಭಂಗ ಅನುಭವಿಸಿತು.

ಎರಡನೇ ಅವಧಿಗೂ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಹಾಗೂ ಉಪಾಧ್ಯಕ್ಷ ಸ್ಥಾನವು ಹಿಂದುಳಿದ ವರ್ಗಕ್ಕೆ (ಪ್ರವರ್ಗ-ಎ) ಮೀಸಲಾಗಿತ್ತು. ಕಾಂಗ್ರೆಸ್ 10, ಜೆಡಿಎಸ್ 18, ಬಿಜೆಪಿ 2 ಹಾಗೂ ಪಕ್ಷೇತರ ಐವರು ಸದಸ್ಯರು ಹಾಗೂ ಶಾಸಕ, ಸಂಸದ ಸೇರಿ ಒಟ್ಟು 37 ಮತಗಳಿದ್ದವು.

ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಎಚ್‌.ಎಸ್.ಮಂಜು ಹಾಗೂ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ ಜಾಕೀರ್‌ಪಾಷಾ ಅವರು ಒಂದೇ ಮತದ ಅಂತರದಲ್ಲಿ ಸೋತರು.

'ದೃಶ್ಯ' ಸಿನಿಮಾದಿಂದ ಪ್ರೇರಿತನಾಗಿ ಕೃತ್ಯ

ಪತ್ನಿ ಕೊಲೆಗೈದು ನಾಪತ್ತೆ ಕತೆ ಕಟ್ಟಿದ್ದ ಪತಿ ಬಂಧನ

ಪ್ರಜಾವಾಣಿ ವಾರ್ತೆ

ರಾಮನಗರ (ಮಾಗಡಿ): ಐದು ವರ್ಷದ ಹಿಂದೆ ಊರಾಚೆ ಪತ್ನಿಯನ್ನು ಕೊಲೆ ಮಾಡಿ ಶವ ಹೂತು ಹಾಕಿದ್ದ ಪತಿ, ಮತ್ತೆ ಶವ ಹೊರತೆಗೆದು ತನ್ನ ಜಮೀನಿಗೆ ತಂದು ಹೂತಿದ್ದ. ಸಿಕ್ಕಿ ಹಾಕಿಕೊಳ್ಳುವ ಭಯದಿಂದ ಎರಡು ವರ್ಷದ ನಂತರ ಶವ ಹೊರತೆಗೆದು ಸುಟ್ಟು ಹಾಕಿ ಸಾಕ್ಷ್ಯನಾಶ ಮಾಡಿದ್ದ. ಕನ್ನಡದ 'ದೃಶ್ಯ' ಸಿನಿಮಾದಿಂದ ಸ್ಫೂರ್ತಿ ಪಡೆದು ಕೃತ್ಯ ಎಸಗಿ ಪಾರಾಗಲು ಯತ್ನಿಸಿದ್ದ. ಮತ್ತೊಂದು ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ತನ್ನ ಕೃತ್ಯ ಬಾಬ್ಬಿಟ್ಟು ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ.

ತಾಲ್ಲೂಕಿನ ಹೂಜಗಲ್ ಗ್ರಾಮದ ಕಿರಣ್ (37) ಬಂಧಿತ ಆರೋಪಿ. ಪೂಜಾ (28) ಕೊಲೆಯಾದವರು.



ಆರೋಪಿ ಕಿರಣ್, ತನ್ನ ಜಮೀನಿನಲ್ಲಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದ್ದ ಸ್ಥಳವನ್ನು ಅಗೆದಾಗ ಸಿಕ್ಕ ಮೂಳೆ, ಹಲ್ಲು ಹಾಗೂ ತಲೆಕೂದಲನ್ನು ಮಹಜರು ಮಾಡಲಾಯಿತು. ತಹಶೀಲ್ದಾರ್ ಶರತ್‌ಕುಮಾರ್, ಮಾಗಡಿ ಇನ್‌ಸ್ಪೆಕ್ಟರ್ ಗಿರಿರಾಜ್, ಎಫ್‌ಎಸ್‌ಎಲ್ ಅಧಿಕಾರಿಗಳು ಹಾಗೂ ಪೊಲೀಸರು ಇದ್ದಾರೆ

ಹದಿನೈದು ದಿನಗಳ ಹಿಂದೆ ಗ್ರಾಮದ ಹೊರವಲಯದ ಚೀಳೂರು ಬೆಟ್ಟದಲ್ಲಿ ಉಮೇಶ್ ಎಂಬಾತ, ತನ್ನ ಪತ್ನಿ ದಿವ್ಯ ಎಂಬುವವರನ್ನು ಆಗಸ್ಟ್ 12ರಂದು ಕೊಲೆ ಮಾಡಿದ್ದ. ಅದಕ್ಕೆ ಸ್ನೇಹಿತ ಕಿರಣ್ ಸಾಥ್ ಕೊಟ್ಟಿದ್ದ. ಆತನನ್ನು ಮಾಗಡಿ ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ, ಹಿಂದಿನ ಕೃತ್ಯ ಬೆಳಕಿಗೆ ಬಂದಿದೆ.

ಶಂಕಾಸ್ಪದ ಹೇಳಿಕೆ: ದಿವ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಕಿರಣ್‌ನನ್ನು ವಿಚಾರಣೆ ನಡೆಸುವಾಗ, 'ನಿನಗೆ ಮದುವೆಯಾಗಿದೆಯೇ' ಎಂದು ಪ್ರಶ್ನಿಸಲಾಯಿತು. ಅದಕ್ಕೆ ಆತ, 'ಮದುವೆಯಾಗಿದ್ದು ಸದ್ಯ 5 ವರ್ಷದ ಮಗಳಿದ್ದಾಳೆ. ಆದರೆ, ಹತ್ತು ವರ್ಷದ ಹಿಂದೆ ಪತ್ನಿ ಬೇರೊಬ್ಬನ ಜತೆ ಓಡಿ ಹೋಗಿದ್ದಾಳೆ. ಇದುವರೆಗೆ ಸಿಕ್ಕಿಲ್ಲ. ಕಾಣೆಯಾಗಿರುವ ಕುರಿತು ದೂರು ಕೊಟ್ಟಿದ್ದೇನೆ' ಎಂದು ಹೇಳಿಕೆ ನೀಡಿದ್ದ ಎಂದು ಪೊಲೀಸರು ಹೇಳಿದರು.

ಆತನ ಹೇಳಿಕೆ ಮೇರೆಗೆ ಠಾಣೆಯಲ್ಲಿ ಪರಿಶೀಲಿಸಿದಾಗ ದೂರು ಬಂದಿಲ್ಲದಿರುವುದು ಗೊತ್ತಾಯಿತು. ಮತ್ತೆ ವಿಚಾರಿಸಿದಾಗ, 'ಐದು ವರ್ಷದ ಹಿಂದೆ ಇಬ್ಬರು ಸ್ನೇಹಿತರೊಂದಿಗೆ ಬಂದು ದೂರು ಕೊಟ್ಟಿದ್ದೇನೆ' ಎಂದಿದ್ದ. 'ಸ್ನೇಹಿತರನ್ನು ವಿಚಾರಿಸಿದಾಗ, ನಾವ್ಯಾರೂ ಬಂದೇ ಇಲ್ಲ. ಕಿರಣ್ ಸುಳ್ಳು ಹೇಳುತ್ತಿದ್ದಾನೆ' ಎಂದಿದ್ದರು.

ಅನುಮಾನದ ಮೇರೆಗೆ ಪೂಜಾ ಅವರ ತಾಯಿ ಗೌರಮ್ಮ ಅವರನ್ನು ವಿಚಾರಿಸಿದಾಗ, 'ಐದು ವರ್ಷದಿಂದ ಮಗಳು ಕಾಣುತ್ತಿಲ್ಲ. ಇವನು ಅದೇನು ಮಾಡಿದ್ದಾನೊ ಗೊತ್ತಿಲ್ಲ' ಎಂದು ಹೇಳಿದರು. ಕಿರಣ್ ಮತ್ತು ಇತರರ ಹೇಳಿಕೆ ತಾಳೆಯಾಗದಿದ್ದಾಗ, ಮತ್ತೆ ಆತನನ್ನು ವಿಚಾರಣೆ ನಡೆಸಿದಾಗ ಕೃತ್ಯ ಬಾಯಿಬಿಟ್ಟ ಎಂದು ಪೊಲೀಸರು ಹೇಳಿದರು.

ಕಲಾತ್ಮಕ ನಗರಕ್ಕಾಗಿ ಪ್ರಾಜೆಕ್ಟ್ ‘ಪರಿ’



ಯು.ಟಿ.ಆಯಿಷಾ ಫರ್ಝಾನ

ಭಾರತದಲ್ಲಿನ ಸಾರ್ವಜನಿಕ ಕಲಾ ಸ್ಥಳಗಳು ಜನಪದ ಕಲೆ ಮತ್ತು ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

ಇವು ಸಾಂಪ್ರದಾಯಿಕ ಮತ್ತು ಸಮಕಾಲೀನ ಕಲಾ ಪ್ರಕಾರಗಳನ್ನು ಪ್ರದರ್ಶಿಸುತ್ತಾ ಜನರನ್ನು ಸೆಳೆಯುತ್ತವೆ. ಹೀಗೆ ಸಾರ್ವಜನಿಕ ಸ್ಥಳಗಳನ್ನು ಕಲಾತ್ಮಕವಾಗಿ ರೂಪಿಸುವುದು ಪ್ರಾಜೆಕ್ಟ್ ಪರಿಯ ಉದ್ದೇಶ. ದೆಹಲಿಯಲ್ಲಿ ಈ ಯೋಜನೆಯ ಪ್ರಥಮ ಚಟುವಟಿಕೆಗಳು ಗರಿಗೆದರಿವೆ.

ಉದ್ದೇಶಗಳೇನು?

- ನಗರಗಳ ವಿಶಿಷ್ಟತೆ ಮತ್ತು ಸೌಂದರ್ಯದ ಮೌಲ್ಯವನ್ನು ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಸಾರ್ವಜನಿಕ ಸ್ಥಳಗಳ ಗುಣಮಟ್ಟವನ್ನು ಹೆಚ್ಚಿಸುವುದಲ್ಲದೇ ಈ ಸುಂದರ ಪರಿಸರಕ್ಕೆ ಸೇರಿದವರು ಎಂಬ ಹೆಮ್ಮೆಯ ಭಾವನೆಯನ್ನು ಜನರಲ್ಲಿ ಮೂಡಿಸುತ್ತದೆ.
- ಸಾರ್ವಜನಿಕ ಕಲೆಯು ಪ್ರವಾಸದ ಅನುಭವವನ್ನು ಉತ್ಕೃಷ್ಟಗೊಳಿಸುವುದಲ್ಲದೇ ಸಂದರ್ಶಕರು ಮತ್ತು ದಾರಿಹೋಕರಲ್ಲಿ ಶಾಶ್ವತ ನೆನಪುಗಳನ್ನು ಮೂಡಿಸುತ್ತದೆ. ಜತೆಗೆ ಚಿಂತನೆಗೆ ಹಚ್ಚುವ ಈ ಸ್ಥಳಗಳು ಸಂಸ್ಕೃತಿ ಮತ್ತು ಸಮಾಜದ ಅವಿಭಾಜ್ಯ ಅಂಗವಾಗಿವೆ.

ಪ್ರಾಜೆಕ್ಟ್ ಪರಿ

- ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ವಿಶ್ವ ಪರಂಪರೆ ಸಮಿತಿ ಸಭೆಯ 46ನೇ ಅಧಿವೇಶನದ ಸಂದರ್ಭದಲ್ಲಿ, ದೆಹಲಿಯನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯವು ಪ್ರಾಜೆಕ್ಟ್ PARI (ಭಾರತದ ಸಾರ್ವಜನಿಕ ಕಲೆ) ಉಪಕ್ರಮವನ್ನು ಪ್ರಾರಂಭಿಸಿತು.
- ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಇರುವ ಸ್ವಾಯತ್ತ ಸಂಸ್ಥೆ ಲಲಿತ ಕಲಾ ಅಕಾಡೆಮಿಯು ದೇಶದಾದ್ಯಂತ 150ಕ್ಕೂ ಹೆಚ್ಚು ದೃಶ್ಯ ಕಲಾವಿದರನ್ನು ಆಹ್ವಾನಿಸಿದೆ.
- ಪ್ರಾಜೆಕ್ಟ್ PARI ದೆಹಲಿ ನಗರದ ಸೌಂದರ್ಯ ಮತ್ತು ಸಾಂಸ್ಕೃತಿಕ ದೃಷ್ಟಿಕೋನವನ್ನು ಉನ್ನತೀಕರಿಸುವ ಗುರಿಯನ್ನು ಹೊಂದಿದೆ.



ಅನುಷ್ಠಾನಗೊಳಿಸುವ ಏಜೆನ್ಸಿಗಳು

- ಲಲಿತ್ ಕಲಾ ಅಕಾಡೆಮಿ ಮತ್ತು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಆಧುನಿಕ ವಿಷಯಗಳು ಮತ್ತು ತಂತ್ರಗಳನ್ನು ಅಳವಡಿಸಿಕೊಂಡು ಭಾರತದ ಕಲಾತ್ಮಕ ಪರಂಪರೆಯಿಂದ (ಲೋಕ ಕಲೆ/ಜನಪದ ಕಲೆ– ಲೋಕ ಸಂಸ್ಕೃತಿ/ಜನಪದ ಸಂಸ್ಕೃತಿ) ಪ್ರೇರಣೆಗೊಂಡ ಕಲೆಯನ್ನು ಪ್ರಸ್ತುತಪಡಿಸುವ ಗುರಿಯನ್ನು ಹೊಂದಿದೆ.
- ಈ ಉಪಕ್ರಮವು ಭಾರತೀಯ ಸಮಾಜದಲ್ಲಿ ಕಲೆಯ ಸ್ವಾಭಾವಿಕ ಮೌಲ್ಯವನ್ನು ಎತ್ತಿ ತೋರಿಸುತ್ತದೆ. ಸೃಜನಶೀಲತೆ ಮತ್ತು ಕಲಾತ್ಮಕ ಅಭಿವ್ಯಕ್ತಿಗೆ ರಾಷ್ಟ್ರದ ನಿರಂತರ ಬದ್ಧತೆಯನ್ನು ಪ್ರದರ್ಶಿಸುತ್ತದೆ.
- ಈ ನಿಟ್ಟಿನಲ್ಲಿ ಸಾರ್ವಜನಿಕ ಸ್ಥಳಗಳನ್ನು ಸುಂದರಗೊಳಿಸಲು ಕಲಾವಿದರು ರಾಷ್ಟ್ರದ ರಾಜಧಾನಿಯಲ್ಲಿ ವಿವಿಧ ಕಲಾತ್ಮಕ ಪ್ರಾಮುಖ್ಯವನ್ನು ಹೊಂದಿರುವ ತಾಣಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
- ನಗರ ಪ್ರದೇಶಗಳಲ್ಲಿನ ಸಾರ್ವಜನಿಕ ಕಲೆಯು ಭಾರತದ ಶ್ರೀಮಂತ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಕಲೆಯನ್ನು ಮತ್ತಷ್ಟು ಪ್ರಜಾಪ್ರಭುತ್ವಗೊಳಿಸುವ ಮೂಲಕ, ನಗರದ ಗೋಡೆಗಳು ಸರ್ವರೂ ಪ್ರವೇಶಿಸಬಹುದಾದ ಕಲಾಗ್ಯಾಲರಿಗಳಾಗಿ ರೂಪಾಂತರಗೊಳ್ಳುತ್ತವೆ.
- ಈ ವಿಧಾನವು ಕಲಾತ್ಮಕ ಅನುಭವಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡುತ್ತದೆ. ಈ ಮೂಲಕ ಸಾಂಸ್ಕೃತಿಕ ಬಿಂದುಗಳನ್ನು ಒಗ್ಗೂಡಿಸಿ, ಸಾಮಾಜಿಕ ಒಗ್ಗಟ್ಟನ್ನು ಹೆಚ್ಚಿಸುತ್ತದೆ.
- ಈ ಯೋಜನೆಯು ರಾಷ್ಟ್ರದ ಕ್ರಿಯಾತ್ಮಕ ಸಾಂಸ್ಕೃತಿಕ ರಚನೆಗೆ ತನ್ನದೇ ಆದ ಕೊಡುಗೆ ನೀಡುತ್ತದೆ.

ವೈವಿಧ್ಯಮಯ ಕಲಾ ಪ್ರಕಾರಗಳು

- ಈ ಸುಂದರೀಕರಣ ಯೋಜನೆಯಡಿ ಸಾಂಪ್ರದಾಯಿಕ ಕಲಾ ಪ್ರಕಾರಗಳು, ಶಿಲ್ಪಗಳು, ಭಿತ್ತಿಚಿತ್ರಗಳನ್ನು ರಚಿಸಲಾಗುತ್ತದೆ. ದೇಶದಾದ್ಯಂತ 150ಕ್ಕೂ ಹೆಚ್ಚು ದೃಶ್ಯ ಕಲಾವಿದರು ಗೋಡೆ ವರ್ಣಚಿತ್ರಗಳು, ಭಿತ್ತಿಚಿತ್ರಗಳು, ಶಿಲ್ಪಗಳು ಮತ್ತು ಮೂರ್ತಿಗಳು ಹಾಗೂ ಇನ್ನಿತರ ರಚನೆಗಳನ್ನು ನಿರ್ಮಿಸಲು ಒಗ್ಗೂಡಿದ್ದಾರೆ.
- ಸೃಜನಶೀಲ ಕ್ಯಾನ್ವಾಸ್‌ನಲ್ಲಿ ಫಡ್ ಪೇಂಟಿಂಗ್‌ಗಳು (ರಾಜಸ್ಥಾನ), ತಂಗ್ಕಾ ಪೇಂಟಿಂಗ್ (ಸಿಕ್ಕಿಂ/ಲಡಾಖ್), ಮಿನಿಯೇಚರ್ ಪೇಂಟಿಂಗ್ (ಹಿಮಾಚಲ ಪ್ರದೇಶ), ಗೋಂಡಾ ಆರ್ಟ್ (ಮಧ್ಯಪ್ರದೇಶ), ತಂಜಾವೂರ್ ಪೇಂಟಿಂಗ್‌ಗಳು (ತಮಿಳುನಾಡು), ಕಲಂಕರಿ (ಆಂಧ್ರ ಪ್ರದೇಶ), ಅಲ್ಪೋನಾ ಕಲೆ(ಪಶ್ಚಿಮ ಬಂಗಾಳ) ಗಳಿಂದ ಸ್ಫೂರ್ತಿ ಪಡೆದ ಕಲಾಕೃತಿಗಳು ಸೇರಿವೆ. ಜತೆಗೆ ಚೆರಿಯಾಲ್ ಚಿತ್ರಕಲೆ (ತೆಲಂಗಾಣ), ಪಿಚ್ವಾಯಿ ಚಿತ್ರಕಲೆ (ರಾಜಸ್ಥಾನ), ಲಾಂಜಿಯಾ ಸೌರಾ (ಒಡಿಶಾ), ಪಟ್ಟಚಿತ್ರ (ಪಶ್ಚಿಮ ಬಂಗಾಳ), ಬನಿ ಥಾನಿ ಚಿತ್ರಕಲೆ (ರಾಜಸ್ಥಾನ), ವಾರ್ಲಿ (ಮಹಾರಾಷ್ಟ್ರ), ಪಿಥೋರಾ ಕಲೆ (ಗುಜರಾತ್), ಐಪಾನ್ (ಉತ್ತರಾಖಂಡ), ಕೇರಳದ ಭಿತ್ತಿಚಿತ್ರಗಳು (ಕೇರಳ), ಮತ್ತು ಅಲ್ಪನಾ (ತ್ರಿಪುರ) ಕಲಾಪ್ರಕಾರಗಳು ಇದರ ಭಾಗವಾಗಲಿವೆ.

ಶಿಲ್ಪಗಳು ಮತ್ತು ಥೀಮ್‌ಗಳು

- ಪ್ರಾಜೆಕ್ಟ್ PARIಗಾಗಿ ಪ್ರಸ್ತಾಪಿಸಲಾದ ಶಿಲ್ಪಗಳು ನಿಸರ್ಗದ ಅಪೂರ್ವ ಸೃಷ್ಟಿಗಳು, ನಾಟ್ಯಶಾಸ್ತ್ರದಿಂದ ಪ್ರೇರಿತವಾದ ವಿಚಾರಗಳು, ಭಾರತದ ಆಟಿಕೆಗಳು, ಭಾರತದ ಆತಿಥ್ಯ ಸಂಸ್ಕೃತಿ, ಪುರಾತನ ಜ್ಞಾನ, ನಾಡ್ (ಪ್ರಾಚೀನ ಧ್ವನಿ), ಜೀವನದ ಸಾಮರಸ್ಯ ಮತ್ತು ಕಲ್ಪತರು (ದೈವಿಕ ವೃಕ್ಷ) ಹೀಗೆ ವ್ಯಾಪಕ ವಿಷಯವನ್ನು ಒಳಗೊಂಡಿದೆ.
- ಕೆಲವು ಕಲಾಕೃತಿಗಳು ಮತ್ತು ಶಿಲ್ಪಗಳು ವಿಶ್ವ ಪರಂಪರೆಯ ತಾಣಗಳಾದ ಭೀಮೇಟ್ಕಾ ಮತ್ತು ಭಾರತದ ಏಳು ನೈಸರ್ಗಿಕ ವಿಶ್ವ ಪರಂಪರೆಯ ತಾಣಗಳಿಂದ ಸ್ಫೂರ್ತಿ ಪಡೆದಿವೆ. ಇದು 46 ನೇ ವಿಶ್ವ ಪರಂಪರೆಯ ಸಮಿತಿ ಸಭೆಯ ಉದ್ದೇಶಗಳಿಗೆ ಸೂಕ್ತ ಹೊಂದಿಕೆಯಾಗುತ್ತವೆ.

ನಾರಿಶಕ್ತಿಯ ಒಳಗೊಳ್ಳುವಿಕೆ

- ಮಹಿಳಾ ಕಲಾವಿದರು ಪ್ರಾಜೆಕ್ಟ್ PARIಯ ಅವಿಭಾಜ್ಯ ಅಂಗವಾಗಿದ್ದು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ಇದು ಕಲಾಭಿವ್ಯಕ್ತಿಯಲ್ಲಿ ಸ್ತ್ರೀ ಪ್ರಾತಿನಿಧ್ಯದ ಪ್ರಾಮುಖ್ಯವನ್ನು ಸೂಚಿಸುತ್ತದೆ.

ಲಲಿತ ಕಲಾ ಅಕಾಡೆಮಿ

- ಲಲಿತ್ ಕಲಾ ಅಕಾಡೆಮಿ (ನ್ಯಾಷನಲ್ ಅಕಾಡೆಮಿ ಆಫ್ ಆರ್ಟ್), 5ನೇ ಆಗಸ್ಟ್ 1954ರಂದು ಶಿಕ್ಷಣ ಸಚಿವರಾಗಿದ್ದ ಮೌಲಾನಾ ಅಬುಲ್ ಕಲಾಂ ಆಜಾದ್ ಅವರಿಂದ ಉದ್ಘಾಟನೆಗೊಂಡಿತು.
- **ಸಾಂವಿಧಾನಿಕ ಉದ್ದೇಶಗಳು :** ಸಂಸ್ಥೆಯು ಅದರ ಜನರಲ್ ಕೌನ್ಸಿಲ್, ಕಾರ್ಯಕಾರಿ ಮಂಡಳಿ ಮತ್ತು ವಿವಿಧ ಸಮಿತಿಗಳ ಮೂಲಕ ಕಾರ್ಯನಿರ್ವಹಿಸುತ್ತದೆ.
- ಭಾರತ ಸರ್ಕಾರವು ಸ್ಥಾಪಿಸಿದ ಮೂರು ಅಕಾಡೆಮಿಗಳಲ್ಲಿ ಕೊನೆಯದಾಗಿರುವ ಲಲಿತ ಕಲಾ ಅಕಾಡೆಮಿಯು ದೃಶ್ಯ ಕಲೆಗಳ ಕ್ಷೇತ್ರದಲ್ಲಿನ ಚಟುವಟಿಕೆಗಳ ಮೇಲೆ ಪ್ರತ್ಯೇಕವಾಗಿ ಗಮನಹರಿಸುತ್ತದೆ. ತಮ್ಮ ಉದ್ಘಾಟನಾ ಭಾಷಣದಲ್ಲಿ, ಕಲಾಂ ಆಜಾದ್ ಅವರು ಸಮಕಾಲೀನ ಕಲಾವಿದರ ಸೃಜನಶೀಲತೆಯನ್ನು ಪೋಷಿಸುತ್ತಲೇ ಭಾರತದ ಶ್ರೀಮಂತ ಕಲಾತ್ಮಕ ಸಂಪ್ರದಾಯಗಳನ್ನು ಸಂರಕ್ಷಿಸುವಲ್ಲಿ ಅಕಾಡೆಮಿಯ ಪಾತ್ರವನ್ನು ಒತ್ತಿ ಹೇಳಿದ್ದರು.
- ಅಕಾಡೆಮಿಯು ಭಾರತದಾದ್ಯಂತ ಸಮಕಾಲೀನ, ಆಧುನಿಕ, ಜಾನಪದ ಮತ್ತು ಬುಡಕಟ್ಟು ಕಲೆಗಳ ವೈವಿಧ್ಯ ಮತ್ತು ವಿಕಸನದ ಬಗ್ಗೆಗಿನ ಹಲವು ಹೆಜ್ಜೆಗಳ ದಾಖಲೆಗಳನ್ನು ಸಂಗ್ರಹಿಸಿದೆ. ನವದೆಹಲಿಯಲ್ಲಿರುವ (ಗರ್ಹಿ) ತನ್ನ ಪ್ರಧಾನ ಕಚೇರಿಯ ಜತೆಗೆ, ಅಕಾಡೆಮಿಯು ಚೆನ್ನೈ, ಲಖನೌ, ಕೋಲ್ಕತ್ತಾ, ಭುವನೇಶ್ವರದಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಶಿಮ್ಲಾ, ಅಹಮದಾಬಾದ್, ಅಗರ್ತಲಾ ಮತ್ತು ಪಾಟ್ನಾದಲ್ಲಿ ಉಪ-ಕೇಂದ್ರಗಳನ್ನು ಹೊಂದಿದೆ. ❖

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 1950ರಲ್ಲಿ ಭಾರತದ ಒಕ್ಕೂಟವನ್ನು ಭಾಗ ಎ, ಬಿ, ಸಿ ಡಿ ಮತ್ತು ಇ ರಾಜ್ಯಗಳು ಎಂದು ವರ್ಗೀಕರಿಸಲಾಗಿತ್ತು.
ಬಿ. ಪ್ರಸ್ತುತ ದೇಶದಲ್ಲಿ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳಿವೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಬಿ

2. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 1948 ಜೂನ್, 17 ರಂದು ಎಸ್. ಕೆ. ಧಾರ್‌ಆಯೋಗವನ್ನು ನೇಮಕ ಮಾಡಲಾಯಿತು.
ಬಿ. ಡಿಸೆಂಬರ್ 1948 ರಲ್ಲಿ ಜೆ.ವಿ. ಪಿ. ಸಮಿತಿಯನ್ನು ನೇಮಕ ಮಾಡಲಾಯಿತು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 1953 ಅಕ್ಟೋಬರ್, 1ರಂದು ಫಜಲ ಆಲಿ ಆಯೋಗವನ್ನು ನೇಮಕ ಮಾಡಲಾಯಿತು.
ಬಿ. ಫಜಲ ಆಲಿ ಆಯೋಗವು 16 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳನ್ನು ರಚಿಸಬೇಕೆಂದು ಶಿಫಾರಸು ಮಾಡಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

4. ವಿಂಬಲ್ಡನ್ ಟೆನಿಸ್ ಚಾಂಪಿಯನ್ ಷಿಪ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಇದು 1877ರಲ್ಲಿ ಪ್ರಾರಂಭವಾದ ಅತ್ಯಂತ ಹಳೆಯ ಪಂದ್ಯಾವಳಿಯಾಗಿದೆ.
ಬಿ. 2024ರಲ್ಲಿ ಕಾರ್ಲೋಸ್ ಅಲ್ಕರಾಜ್ ಅವರು, ನೊವಾಕ್ ಜೊಕೊವಿಚ್ ಅವರನ್ನು ಸೋಲಿಸಿ ವಿಂಬಲ್ಡನ್ ಟೆನಿಸ್‌ನ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಒಂದು ಕ್ಯಾಲೆಂಡರ್ ವರ್ಷದಲ್ಲಿ, ಐದು ಟೆನಿಸ್ ಪಂದ್ಯಾವಳಿಗಳನ್ನು ಆಯೋಜಿಸಲಾಗುತ್ತದೆ.
ಬಿ. 2024 ರಲ್ಲಿ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಜೋಡಿಯು ಆಸ್ಟ್ರೇಲಿಯನ್ ಓಪನ್ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಬಿ

6 ಕ್ಷೇತ್ರ ಮರು ವಿಂಗಡಣೆ ಆಯೋಗ ಕಾಯ್ದೆಗಳನ್ನು ಕೆಳಗಿನ ಯಾವ ವರ್ಷಗಳಲ್ಲಿ ಅನುಷ್ಠಾನಕ್ಕೆ ತರಲಾಯಿತು?
1.1952 ರಲ್ಲಿ ಕ್ಷೇತ್ರ ಮರು ವಿಂಗಡಣೆ ಆಯೋಗ ಕಾಯ್ದೆಯನ್ನು ಜಾರಿಗೆ ತರಲಾಯಿತು.
2.1982 ರಲ್ಲಿ ಕ್ಷೇತ್ರ ಮರು ವಿಂಗಡಣೆ ಆಯೋಗ ಕಾಯ್ದೆಯನ್ನು ಜಾರಿಗೆ ತರಲಾಯಿತು.
3. ಪ್ರತಿ ಜನಗಣತಿಯ ನಂತರ ಕ್ಷೇತ್ರ ಮರು ವಿಂಗಡಣೆ ಆಯೋಗ ಕಾಯ್ದೆಯನ್ನು ಜಾರಿಗೆ ತರಲಾಗಿದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. 3 ಮಾತ್ರ
ಉತ್ತರ : ಎ

7 ಕೆಳಗಿನ ಯಾವ ತಿದ್ದುಪಡಿಯ ಅನ್ವಯ ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆಯನ್ನು 2026 ರ ವರೆಗೂ ಮುಂದೂಡಲಾಗಿದೆ?
ಎ. 81 ನೇ ತಿದ್ದುಪಡಿ ಕಾಯ್ದೆ.
ಬಿ. 82 ನೇ ತಿದ್ದುಪಡಿ ಕಾಯ್ದೆ.
ಸಿ. 83 ನೇ ತಿದ್ದುಪಡಿ ಕಾಯ್ದೆ.
ಡಿ. 84 ನೇ ತಿದ್ದುಪಡಿ ಕಾಯ್ದೆ.
ಉತ್ತರ : ಡಿ

8 ಜಲಜನಕ ಅಥವಾ ಹೈಡ್ರೋಜನ್ ಕುರಿತು ಈ ಹೇಳಿಕೆಗಳನ್ನು ಪರಿಶೀಲಿಸಿ:
ಎ. ಜಲಜನಕವು ತೂಕದ ಲೆಕ್ಕದಲ್ಲಿ ಉಳಿದ ಯಾವುದೇ ಇಂಧನಕ್ಕಿಂತ ಹೆಚ್ಚಿನ ಪ್ರಮಾಣದ ಶಕ್ತಿಯನ್ನು ಹೊಂದಿದೆ.
ಬಿ. ಅದು ಪ್ರಮಾಣದ ಲೆಕ್ಕದಲ್ಲಿ ಉಳಿದ ಯಾವುದೇ ಇಂಧನಕ್ಕಿಂತ ಹೆಚ್ಚಿನ ಪ್ರಮಾಣದ ಶಕ್ತಿಯನ್ನು ಹೊಂದಿದೆ.
ಈ ಎರಡು ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?
1.ಎ ಮಾತ್ರ
2. ಬಿ ಮಾತ್ರ
3. ಎ ಮತ್ತು ಬಿ ಎರಡೂ ಸರಿ
4. ಎ ಮತ್ತು ಬಿ ಎರಡೂ ಸರಿಯಲ್ಲ
ಉತ್ತರ: (1)

9. ಜಲಜನಕದ ವಿಧಗಳ ಬಗ್ಗೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ:
ಎ. ನೀಲಿ ಜಲಜನಕವನ್ನು ನೈಸರ್ಗಿಕ ಅನಿಲ ಅಥವಾ ಕಲ್ಲಿದ್ದಲಿನ ಅನಿಲೀಕರಣವನ್ನು ಇಂಗಾಲ ಹಿಡಿದಿಡುವ ಕಾರ್ಬನ್ ಕ್ಯಾಪ್ಚರ್ ಸ್ಟೋರೇಜ್ (ಸಿಸಿಎಸ್) ಅಥವಾ ಕಾರ್ಬನ್ ಕ್ಯಾಪ್ಚರ್ ಯೂಸ್ (ಸಿಸಿಯು) ಎಂಬ ತಂತ್ರಜ್ಞಾನಗಳನ್ನು ಬಳಸಿ, ಕಡಿಮೆ ಇಂಗಾಲ ಹೊರಸೂಸುವಿಕೆಯ ವಿಧಾನದಲ್ಲಿ ಉತ್ಪಾದಿಸಲಾಗುತ್ತದೆ.
ಬಿ. ಹಸಿರು ಜಲಜನಕವನ್ನು ನವೀಕರಿಸಬಹುದಾದ ಇಂಧನದಿಂದ ಉತ್ಪಾದಿಸಿದ ವಿದ್ಯುತ್ ಬಳಸಿ, ನೀರಿನಿಂದ ಉತ್ಪಾದಿಸಲಾಗುತ್ತದೆ.
ಈ ಎರಡು ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?
1.ಎ ಮಾತ್ರ
2. ಬಿ ಮಾತ್ರ
3. ಎ ಮತ್ತು ಬಿ ಎರಡೂ ಸರಿ
4. ಎ ಮತ್ತು ಬಿ ಎರಡೂ ಸರಿಯಲ್ಲ
ಉತ್ತರ: (3)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-2 PROSE

There's a Girl by the Tracks!

Task 1: Some sentences are given below. In each sentence the word 'compose' is used. Identify the meaning given above and write the corresponding number in the boxes.

1.Nayana sat at the desk, taking several deep breaths to compose herself ( )
2.Water is composed of hydrogen and oxygen.( )
3. A.R. Rehaman has composed music for the film Kocchadian ( )
4. The legal system is composed of people and people make legal systems. ( )
5. More than 17.6 million firms composed the business sector of our economy. ( )
6. I like the way Ravi composes photographs. ( )

Ans:-
1.Nayana sat at the desk, taking several deep breaths to compose herself (6)
2.Water is composed of hydrogen and oxygen.(1)
3. A.R. Rehaman has composed music for the film Kocchadian (4)
4. The legal system is composed of people and people make legal systems. (3)
5. More than 17.6 million firms composed the business sector of our economy. (2)
6. I like the way Ravi composes photographs. (5)

* * * * * * * * * * *

Unit-1 Poem

Grandma Climbs a Tree

Author: Ruskin Bond:- Born in Kasauli in 1934, Ruskin Bond now lives in Missouri. He wrote first novel, 'The Room on the Roof', when he was seventeen and has written more than thirty books for children. 'Grandma Climbs a Tree' shows Bond's great ability to enjoy Unusual events and actions. In his autobiography, 'Scene from Writer's Life', Bond talks about his Calcutta granny as a strange person who sat alone in the evenings playing Patience, a card game.

Understand the poem

1. The speaker in the poem does not call his grandmother 'childish', what else was she according to him? Why does he consider her to be so? {Line 1-4}

Ans: The speaker calls his grandmother a genius. He calls her so for a special ability she had at the age of sixty two. She could climb any tree high or wide in a trice.

2. Grandma had been in the habit of climbing trees for a very long period. Identify the lines that suggest this

Ans: (a) "ever since child hood she'd had this gift",
(b) "When last climbed a tree she was sixty two".

3. Look at the line 7 and 8 'She would be told.....' who do you think would tell her so?

Ans: It could be poet's father and family who might have told that climbing of trees should stop when one grew old and growing old should be gone gracefully.

4. Do you find anything odd in the reply given by the grandma? If so, why do you think it is odd? {Line 10-11}

Answer: Yes. reply given by grandma was odd. It is odd because the society demands and every one wish to comply with it by growing old gracefully. Here, grandma wishes to grow old disgracefully as she does tree climbing even better.

5. Others had feared that granny would fall from a tree one day or the other. Did this happen? Or did something else happen? {Line 15-18}

Answer: Granny did not fall as feared by family members but there was a different outcome. When family was in town, granny climbed a tree and could not climb down. She had to be rescued.

6. What had the doctor recommended? What was the reaction of the kids to this advice?

Answer: The doctor took granny's temperature and advised for bed rest of one week. Kids sighed with relief on hearing doctor's advice to granny and tucked her up in bed well.

7. Quote the lines which suggest how wholeheartedly granny enjoyed climbing a tree.

Answer:
(a) "For being happier in a tree than in a lift"
(b) "For her it was like a brief season in hell"

8. 'My dad knew his duties'. What did he think his duty was?

Answer: Poet's dad knew it is his duty to fulfill the wish of the mother. When his mother wished a tree house, he agreed and made a tree house with window and door.

9. Look at the picture given below the title. Quote the lines that might have guided the artist to draw.



Answer: "Made her a tree house with windows and a door"

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC CHEMISTRY

The d- and f-Block Elements

10. Write the electronic configuration of elements of 3d series.

Ans:

Name of elements	Symbol	Atomic number	Electronic configuration
Scandium	Sc	21	$[Ar]3d^1 4s^2$
Titanium	Ti	22	$[Ar]3d^2 4s^2$
Vandium	V	23	$[Ar]3d^3 4s^2$
Chromium	Cr	24	$[Ar]3d^5 4s^1$
Manganes e	Mn	25	$[Ar]3d^5 4s^2$
Iron	Fe	26	$[Ar]3d^6 4s^2$
Cobalt	Co	27	$[Ar]3d^7 4s^2$
Nickel	Ni	28	$[Ar]3d^8 4s^2$
Copper	Cu	29	$[Ar]3d^{10} 4s^1$
Zinc	Zn	30	$[Ar]3d^{10} 4s^2$

11. Explain the exceptional electronic configuration of d-block elements.

Ans: The electronic configuration of d-block elements is usually represented as (n-1) (d0-10) n(s1-2), where (n-1) refers to the inner d orbitals and the peripheral ns orbital. The d-block elements are located in the middle of the periodic table between metals and non-metals, and are also known as transition elements. They can find stability in half-filled or completely filled orbitals.

12. Why Zn, Cd and Hg are not regarded as transition elements?

Ans: They contain completely filled d-orbitals in the ground state as well as in their common oxidation states. So they are not considered as transition elements.

13. Why Zn, Cd and Hg are included under transition elements even though they contain completely filled d-orbitals both in ground state and common oxidation state?

Ans: Because they resemble other transition elements in some of their properties.

14. Why Cu, Ag and Au are included under transition elements even though they contain completely filled orbitals in their ground state?

Ans: Because they possess partially filled d-orbitals in the common oxidation states

$Cu^{2+} \to 3d^9$ $Ag^{2+} \to 4d^9, Au^{3+} \to 5d^8$

15. On what ground can you say that Sc (Scandium) (Z = 21) is transition element but Zn is not (Z = 30)? (NCERT Example)

Ans:Scandium (Sc, Z = 21) is considered a transition element because its ground state has incompletely filled 3d-orbitals, while zinc (Zn, Z= 30) is not because its ground state and oxidized state have completely filled 3d-orbitals:

Sc contain partially filled d-orbitals $(3d^1)$. So it is considered as transition element. Zn contain completely filled d-orbitals $(3d^{10})$ in its ground state and oxidation state. Hence it is not considered as a transition element.

16. Silver atom has completely filled d-orbitals $(4d^{10})$ in its ground state. How can you say that it is a transition element?
(NCERT Intext question)

Ans: Silver (Z = 47) can exhibit +2 oxidation state wherein it will have incompletely filled d-orbitals (4d), hence Ag is a transition element.


17. Explain the metallic character of transition elements.

Ans: Transition metals can lose valence electrons and form cations; $M \longrightarrow M^{n+} + ne^-$. Therefore all transition elements show metallic properties such as high tensile strength, ductility, malleability, high thermal and electrical conductivity and metallic lusture. They have simple cubic, hcp, ccp and bcc lattice

(Contd)

ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಹೇಳಿಕೆ

‘ಜಾರ್ಖಂಡ್ ಹಿತಕ್ಕಾಗಿ ಬಿಜೆಪಿ ಸೇರ್ಪಡೆ’



ಚಂಪೈ ಸೊರೇನ್

ರಾಂಚಿ (ಪಿಟಿಐ): ‘ಜಾರ್ಖಂಡ್‌ನ ಹಿತಾಸಕ್ತಿಗಾಗಿ ನಾನು ಬಿಜೆಪಿ ಸೇರುವ ನಿರ್ಧಾರ ತೆಗೆದುಕೊಂಡಿದ್ದೇನೆ. ಜೆಎಂಎಂ ಪಕ್ಷಕ್ಕೆ ಮತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತೇನೆ’ ಎಂದು ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದ ಚಂಪೈ ಅವರು, ತಮ್ಮ ಪುತ್ರನೊಂದಿಗೆ ಬುಧವಾರ ರಾಂಚಿಗೆ ಮರಳಿದರು. ಈ ವೇಳೆ ಅವರ ಅನೇಕ ಬೆಂಬಲಿಗರು ಅವರನ್ನು ಸ್ವಾಗತಿಸಿದರು.

ತಾವು ಬಿಜೆಪಿ ಸೇರುವ ನಿರ್ಧಾರದ ಕುರಿತು ಮಂಗಳವಾರ ಸಾಮಾಜಿಕ ಜಾಲತಾಣ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ್ದ ಚಂಪೈ, ‘ರಾಜ್ಯದ ಸಂತಾಲ್ ಪರಗಣ ಪ್ರದೇಶದಲ್ಲಿ ಬಾಂಗ್ಲಾದೇಶದಿಂದ ಭಾರಿ ಸಂಖ್ಯೆಯಲ್ಲಿ ನುಸುಳುಕೋರರು ಬರುತ್ತಿದ್ದಾರೆ. ಈ ಅತಿಕ್ರಮಣಕಾರರು ಸ್ಥಳೀಯ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಹಾನಿಯನ್ನುಂಟು ಮಾಡುತ್ತಿದ್ದಾರೆ. ಹೀಗಾಗಿ ಅಲ್ಲಿನ ಬುಡಕಟ್ಟು ಸಮುದಾಯದ ಅಸ್ಮಿತೆಯನ್ನು ಉಳಿಸಲು ನಾನು ಬಿಜೆಪಿ ಸೇರುತ್ತಿದ್ದೇನೆ’ ಎಂದಿದ್ದರು.

ಅಲ್ಲದೇ, ‘ಪಾಕುರ್ ಮತ್ತು ರಾಜಮಹಲ್ ಸೇರಿದಂತೆ ಅನೇಕ ಪ್ರದೇಶಗಳಲ್ಲಿ ನುಸುಳುಕೋರರ ಸಂಖ್ಯೆ ಸ್ಥಳೀಯ ಬುಡಕಟ್ಟು ಸಮುದಾಯದ ಜನಸಂಖ್ಯೆಗಿಂತ ಹೆಚ್ಚಾಗಿದೆ. ಬಿಜೆಪಿ ಮಾತ್ರವೇ ಈ ವಿಚಾರದಲ್ಲಿ ಗಂಭೀರವಾಗಿದೆ. ಮತಬ್ಯಾಂಕ್ ರಾಜಕಾರಣಕ್ಕಾಗಿ ಇತರ ಪಕ್ಷಗಳು ಈ ವಿಚಾರವನ್ನು ಕಡೆಗಣಿಸುತ್ತಿವೆ’ ಎಂದು ಹೇಳಿದ್ದರು.

ಆಗಸ್ಟ್ 30ರಂದು ರಾಂಚಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಚಂಪೈ ಅವರು ಅಧಿಕೃತವಾಗಿ ಬಿಜೆಪಿ ಸೇರಲಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಾಗೂ ಜಾರ್ಖಂಡ್ ವಿಧಾನಸಭೆ ಚುನಾವಣೆಯ ಬಿಜೆಪಿ ಉಸ್ತುವಾರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೊಳಗಾದಾಗ, ಚಂಪೈ ಸೊರೇನ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

‘5 ತಿಂಗಳಿನಿಂದ ಪೊಲೀಸ್ ಕಣ್ಗಾವಲಿನಲ್ಲಿ ಚಂಪೈ’

‘ಕಳೆದ ಐದು ತಿಂಗಳಿನಿಂದ ಚಂಪೈ ಸೊರೇನ್ ಅವರು ತಮ್ಮದೇ ಸರ್ಕಾರದ ಪೊಲೀಸರ ಕಣ್ಗಾವಲಿನಲ್ಲಿದ್ದಾರೆ. ಚಂಪೈ ಅವರು ಬಿಜೆಪಿಯನ್ನು ಸಂಪರ್ಕಿಸುವ ಮುನ್ನವೇ ಅವರನ್ನು ಕಣ್ಗಾವಲಿನಲ್ಲಿಡಲಾಗಿತ್ತು’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಆರೋಪಿಸಿದ್ದಾರೆ.

‘ಜಾರ್ಖಂಡ್‌ನ ವಿಶೇಷ ವಿಭಾಗದ ಇಬ್ಬರು ಎಸ್‌ಐಗಳು ದೆಹಲಿಯ ಹೋಟೆಲ್‌ನಲ್ಲಿ ಚಂಪೈ ಅವರ ಮೇಲೆ ನಿಗಾ ಇಟ್ಟಿದ್ದರು. ಆಗ ಚಂಪೈ ಅವರ ಬೆಂಬಲಿಗರು ಆ ಇಬ್ಬರು ಪೊಲೀಸರನ್ನು ಬಂಧಿಸಿ ದೆಹಲಿ ಪೊಲೀಸರಿಗೆ ಹಸ್ತಾಂತರಿಸಿದ್ದಾರೆ. ಇದು ಭಾರತೀಯ ರಾಜಕೀಯದಲ್ಲೇ ಅತ್ಯಂತ ಅಪರೂಪದ ಪ್ರಕರಣವಾಗಿದೆ’ ಎಂದರು.

‘ಸಂವಿಧಾನಕ್ಕೆ ರಕ್ಷಣೆ ನೀಡಬೇಕಿದೆ ಎಂದು ಮಾತನಾಡುವ ಕಾಂಗ್ರೆಸ್ ಮತ್ತು ಜೆಎಂಎಂ ಪಕ್ಷಗಳು ಮಾಜಿ ಮುಖ್ಯಮಂತ್ರಿ ಮತ್ತು ಸಚಿವರೊಬ್ಬರನ್ನು ಹೀಗೆ ಕಣ್ಗಾವಲಿನಲ್ಲಿ ಇಟ್ಟಿವೆ. ಇದು ವ್ಯಕ್ತಿಯೊಬ್ಬರ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಖಾಸಗಿತನದ ಉಲ್ಲಂಘನೆಯಾಗಿದೆ’ ಎಂದು ಕಿಡಿಕಾರಿದರು.

ಅಲ್ಲದೇ, ‘ಸೊರೇನ್ ಅವರನ್ನು ಹಿಂಬಾಲಿಸಲು ಸಾಂವಿಧಾನಿಕ ಹುದ್ದೆಯಲ್ಲಿರುವ ಓರ್ವ ವ್ಯಕ್ತಿ ಮತ್ತು ವಿಶೇಷ ದಳದ ಮುಖ್ಯಸ್ಥರು ತಮಗೆ ಆದೇಶಿಸಿದ್ದಾರೆ ಎಂದು ಎಸ್‌ಐಗಳು ತಿಳಿಸಿದರು. ದೆಹಲಿ ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಮಹಿಳೆಯೊಬ್ಬರು ಇಬ್ಬರು ಎಸ್‌ಐಗಳನ್ನು ಭೇಟಿ ಮಾಡುತ್ತಿದ್ದರು. ಹೀಗಾಗಿ ಚಂಪೈ ಅವರ ಮೊಬೈಲ್ ಕದ್ದಾಲಿಕೆ ಆಗಿದ್ದಿರಬಹುದು ಮತ್ತು ಅವರನ್ನು ‘ಹನಿಟ್ರ್ಯಾಪ್’ಗೆ ಸಿಲುಕಿಸುವ ಯೋಜನೆಯೂ ಇದ್ದಿರಬಹುದು’ ಎಂದು ಹಿಮಂತ ಆರೋಪಿಸಿದರು. ಈ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಚಂಪೈ, ‘ಯಾವುದೇ ಪರಿಸ್ಥಿತಿಗೂ ನಾನು ಹೆದರುವುದಿಲ್ಲ’ ಎಂದು ತಿಳಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ

ಎಂವಿಎ: ಸೀಟು ಹಂಚಿಕೆ ಕಗ್ಗಂಟು?

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಾಗಿ ಮುಂಬೈನ ಸೀಟು ಹಂಚಿಕೆಯು ಎಂವಿಎ ಮೈತ್ರಿಕೂಟಕ್ಕೆ ಕಗ್ಗಂಟಾಗುವ ಸಾಧ್ಯತೆಗಳಿವೆ. ಮುಂಬೈನಲ್ಲಿ 36 ಸ್ಥಾನಗಳು ಇವೆ.

ಶಿವಸೇನಾವು (ಉದ್ಧವ್ ಬಣ) 20ರಿಂದ 25 ಸ್ಥಾನಗಳಲ್ಲಿ ಸ್ಪರ್ಧಿಸಲು ಬಯಸಿದೆ. ಕಾಂಗ್ರೆಸ್ 15ರಿಂದ 20 ಸೀಟು ಕೇಳುತ್ತಿದೆ. ಎನ್‌ಸಿಪಿಯು-(ಶರದ್ ಬಣ) ಏಳರಿಂದ ಎಂಟು ಸ್ಥಾನಗಳ ನಿರೀಕ್ಷೆಯಲ್ಲಿದೆ. ಜೊತೆಗೆ ಸಮಾಜವಾದಿ ಸೇರಿದಂತೆ ಮೈತ್ರಿಕೂಟದ ಇತರ ಪಕ್ಷಗಳಿಗೂ ಕೆಲ ಸ್ಥಾನಗಳನ್ನು ನೀಡಬೇಕಾದ ಅನಿವಾರ್ಯ ಇದೆ.

ಕರ್ನಾಟಕ ಸರ್ಕಾರ — ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

Ph: 08194-230402 e-mail: dcf.cta@gmail.com

ಸಂಖ್ಯೆ:ಎ3/ಬಿಜಿಟಿ/ಟೆಂಡರ್/ಸಿಆರ್-01/2024-25 ದಿನಾಂಕ: 27.08.2024

ಇ-ಟೆಂಡರ್ ಪ್ರಕಟಣೆ

[ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ]

ಚಿತ್ರದುರ್ಗ ವಿಭಾಗದಲ್ಲಿವಿವಿಧ ಯೋಜನೆಗಳಡಿ 2024-25 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬೇಕಾದ "ಕೆಎಂಇಆರ್‌ಸಿ" ಯೋಜನೆಗಯಡಿ ನೆಡುತೋಪು ನಿರ್ಮಾಣಕಾಮಗಾರಿ ಕೈಗೊಳ್ಳುವ ಸಂಬಂಧಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ರೂ. 368.10 ಲಕ್ಷಗಳಲ್ಲಿ ಮೊತ್ತದ ಒಟ್ಟು 06 ಯೂನಿಟ್‌ಗಳಿಗೆ ದಿನಾಂಕ: 27.08.2024 ರಿಂದ 04.09.2024ರ ವರೆಗೆ ನಿಗಧಿಪಡಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04.09.2024ರಂದು 16:00 ಗಂಟೆಯವರೆಗೆ [ಸಂಜೆ:4.00 ಗಂಟೆ] ನಿಗಧಿಪಡಿಸಲಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 05.09.2024 ರಂದು ಸಂಜೆ 4.00 ಗಂಟೆಯ ನಂತರ ತೆರೆಯಲಾಗುತ್ತದೆ. ಒಂದು ವೇಳೆ ಸದರಿ ಟೆಂಡರ್‌ಗಳಲ್ಲಿ ಅರ್ಹ ಬಿಡ್ಡುದಾರರು ಯಾರು ಭಾಗವಹಿಸದೇ ಇದ್ದ ಪಕ್ಷದಲ್ಲಿ ಮರುಟೆಂಡರ್‌ನ್ನು 07.09.2024 ರಿಂದ 16.09.2024ರ ವರೆಗೆ ಮರುಟೆಂಡರ್ ಕರೆಯಲಾಗುವುದು. ಕಾಮಗಾರಿಗಳ ಹೆಚ್ಚಿನ ವಿವರಗಳ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

RO No. 228: DIPR/CTA/KSMCA/2024-25

ಬೆಂಗಳೂರು ನಗರ ವಿಶ್ವವಿದ್ಯಾನಿಲಯ — BENGALURU CITY UNIVERSITY

ಆಗು ನೀ ಅನಿಕೇತನ
BE BOUNDLESS

ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001.
Ph.No. 080-22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/2024-25 ದಿನಾಂಕ: 28.08.2024

ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ

2024-25ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(Through the UUCMS Online portal https://uucms.karnataka.gov.in/Login/Index)

ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ / ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:

ಅ. **ಕಲಾ ನಿಕಾಯ:**

ಎಂ.ಎ: ಕನ್ನಡ, ಇಂಗ್ಲೀಷ್, ಫ್ರೆಂಚ್, ಜರ್ಮನ್, ಸ್ಪಾನಿಷ್, ಜಪಾನೀಸ್, ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಕಾರ್ಯ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ನಗರ ಅಧ್ಯಯನ ಮತ್ತು ಯೋಜನೆ,

ಎಂ.ವಿ.ಎ: 1. ಅನಿಮೇಷನ್ ಡಿಸೈನ್ 2. ಇಂಟಿರಿಯರ್ ಡಿಸೈನ್ 3. ಅಪ್ಲೈಡ್ ಆರ್ಟ್ಸ್ 4. ಆರ್ಟ್ ಹಿಸ್ಟ್ರಿ 5. ಪೇಯಿಂಟಿಂಗ್, 6. ಪ್ರಿಂಟ್ ಮೇಕಿಂಗ್, 7. ಸ್ಕಲ್ಪಚರ್.

ಆ. **ವಿಜ್ಞಾನ ನಿಕಾಯ:**

ಎಂ.ಎಸ್ಸಿ: ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ, ಪರಿಸರ ವಿಜ್ಞಾನ, ಜೈವಿಕ ತಂತ್ರಜ್ಞಾನ, ಸೂಕ್ಷ್ಮಜೀವ ಶಾಸ್ತ್ರ, ಮನಃಶಾಸ್ತ್ರ, ಮಾನಸಿಕ ಸಮಾಲೋಚನೆ, ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಜಿ, ಇಂಟೀರಿಯರ್ ಡಿಜೈನ್ ಅಂಡ್ ಡೆಕೊರೇಷನ್, ನ್ಯೂಟ್ರಿಷನ್ ಅಂಡ್ ಡಯಾಟಿಕ್ಸ್

ಪಿಜಿ ಡಿಪ್ಲೋಮಾ – ಮನೋವೈಜ್ಞಾನಿಕ ಸಮಾಲೋಚನೆ

ಇ. **ವಾಣಿಜ್ಯ ನಿಕಾಯ:**

1. ಎಂ.ಕಾಂ. – ಮಾಸ್ಟರ್ ಆಫ್ ಕಾಮರ್ಸ್ (ಜನರಲ್)
2. ಎಂ.ಕಾಂ – ಮಾಸ್ಟರ್ ಆಫ್ ಕಾಮರ್ಸ್ (ಫೈನಾನ್ಸಿಯಲ್ ಅನಾಲಿಸಿಸ್)
3. ಎಂ.ಕಾಂ – ಮಾಸ್ಟರ್ ಆಫ್ ಕಾಮರ್ಸ್ (ಇಂಟರ್‌ನ್ಯಾಷನಲ್ ಬಿಸಿನೆಸ್)
4. ಎಂಟಿಟಿಎಂ – (ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್‌ಮೆಂಟ್)

ಪಿಜಿ ಡಿಪ್ಲೋಮಾ ಕೋರ್ಸ್‌ಗಳು

1. ಪಿಜಿಡಿ – (ಬಿಸಿನೆಸ್ ಅಡ್ಮಿನಿಸ್ಟ್ರೇಷನ್)
2. ಪಿಜಿಡಿ – (ಹ್ಯುಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್)
3. ಪಿಜಿಡಿ – (ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್)
4. ಪಿಜಿಡಿ – (ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್)
5. ಪಿಜಿಡಿ – (ಇಂಡಸ್ಟ್ರಿಯಲ್ ಅಂಡ್ ಕನ್ಸ್ಟ್ರಕ್ಷನ್ ಸೇಫ್ಟಿ ಮ್ಯಾನೇಜ್‌ಮೆಂಟ್)

ಈ. **ಶಿಕ್ಷಣ ನಿಕಾಯ: ಎಂ.ಎಡ್ (ಶಿಕ್ಷಣ)**

ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:

1. ಅರ್ಹ ಅಭ್ಯರ್ಥಿಗಳು ಸ್ನಾತಕೋತ್ತರ ಕೋರ್ಸುಗಳಿಗೆ **UUCMS Portal** ಮೂಲಕವೇ **Online** ನಲ್ಲಿ ದಿನಾಂಕ: 02.09.2024ರಿಂದ **https://uucms.karnataka.gov.in** ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ
2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
3. ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು.
4. ವಿದ್ಯಾರ್ಥಿಗಳು **ರೂ. 500/-**ಅರ್ಜಿ ಶುಲ್ಕದೊಂದಿಗೆ 3 ವಿಷಯಗಳಿಗೆ ಅರ್ಜಿ ಸಲ್ಲಿಸಲು **UUCMS Portal** ನಲ್ಲಿ ಅವಕಾಶ ಕಲ್ಪಿಸಿದೆ. ಹಾಗೂ 3 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ **ರೂ. 500/-** ಗಳನ್ನು ಪ್ರತಿ ವಿಷಯಕ್ಕೆ ಪಾವತಿಸಬೇಕಾಗಿರುತ್ತದೆ. (ಪ.ಜಾ/ಪ.ಪಂ, ಪ್ರವರ್ಗ-1 ಮತ್ತು ತೃತೀಯಲಿಂಗ ಅಭ್ಯರ್ಥಿಗಳಿಗೆ **ರೂ. 250/-** ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ **UUCMS Payment link** ಮೂಲಕ ಪಾವತಿಸಬೇಕು.
5. ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: **http://bcu.ac.in**ನ್ನು ಸಂಪರ್ಕಿಸಲು ಕೋರಿದೆ.
6. 2024-25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ಯಲ್ಲಿ ಅರ್ಜಿಗಳನ್ನು ದಿನಾಂಕ: **20.09.2024 ವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಸಲ್ಲಿಸ ಬಹುದಾಗಿದ್ದು ಆನಂತರ ದಿನಾಂಕ: 30.09.2024 ರ ವರೆಗೆ ರೂ.200/- ದಂಡ ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ.**
7. **UUCMS** ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
8. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಾವು ಅರ್ಜಿಯಲ್ಲಿ ಆಯ್ದುಕೊಂಡಿರುವ ವಿಷಯಗಳ ವಿಭಾಗದ **“ಅಧ್ಯಕ್ಷರುಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲು ಕೋರಿದೆ, ವಿಳಾಸ: ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು -560 001”** ಈ ವಿಳಾಸಕ್ಕೆ ಕಳುಹಿಸತಕ್ಕದ್ದು.
9. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು. **UUCMS Portal ಮೂಲಕ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.**
10. **ವಿಷಯ ಸೂಚನೆ:** ಯಾವುದೇ ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ 10 ವಿದ್ಯಾರ್ಥಿಗಳು ನೋಂದಣಿಯಾಗದಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯವು ಆ ಸ್ನಾಕತೋತ್ತರ ಕೋರ್ಸನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರಂಭಿಸುವುದಿಲ್ಲ.
11. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: **080-22961016/22131385** ಮಿಂಚಂಚೆ: **registrar@bcu.ac.in**

ಸಹಿ/-
ಕುಲಸಚಿವರು

ವಾಸಾಸಂಇ/ಬೆಂ.ನಗರ/1700/ಆಕಾರ್/2024-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/26096910 ಇ-ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-677/2024-25 ದಿನಾಂಕ: 28.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

ಇದೇ ದಿನಪತ್ರಿಕೆಯಲ್ಲಿ ದಿನಾಂಕ 13.08.2024 ರಂದು ಪ್ರಕಟಿಸಲಾಗಿದ್ದ ಇದೇ ಅಧಿಸೂಚನೆ ಸಂಖ್ಯೆಯ ಟೆಂಡರ್ ಅನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.inಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Item Description	Qty (Nos.)	EMD (Rs.)
1	Providing service for Transportation of Milk through Insulated Road Milk Tankers between the Mandya District Co-Operative Milk Producer's Societies Union to in and around Delhi and parts of Haryana bordering Delhi for a period of two years.	As mentioned in tender document.	70.00 Lakhs

ಟೆಂಡರ್ ಪ್ರಾರಂಭವಾಗುವ ದಿನಾಂಕ : 28.08.2024 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 04.09.2024 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 11.09.2024 ರ ಸಂಜೆ 5.00 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 12.09.2024 ರಂದು ಸಂಜೆ 5.05 ಗಂಟೆಗೆ. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ವೈದ್ಯಕೀಯ ಅಧೀಕ್ಷಕರ ಕಛೇರಿ, ಕೆ.ಸಿ. ಜನರಲ್ ಆಸ್ಪತ್ರೆ

ಮಲ್ಲೇಶ್ವರಂ, ಬೆಂಗಳೂರು - 03 ದೂರವಾಣಿ ಸಂಖ್ಯೆ: 080-23344022, 23341771
ಇ-ಮೇಲ್: kcghoffice@gmail.com

ಸಂಖ್ಯೆ:ಕೆಸಿಜಿಆ:ಆರಸ/ನೇಮಕಾತಿ/03/2024-25 ದಿನಾಂಕ:28.08.2024

ಪ್ರಕಟಣೆ

ಕೆ.ಸಿ.ಸಾರ್ವಜನಿಕ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗರಿಷ್ಠ ಮಿತಿ ಒಂದು ವರ್ಷದ ಅವಧಿಗೆ ಆರೋಗ್ಯ ರಕ್ಷಾ ಸಮಿತಿಯ ಗೌರವಧನದ ಆಧಾರದ ಮೇಲೆ ನೇರ ಸಂದರ್ಶನದ ಮೂಲಕ ನೇಮಕಾತಿಗಾಗಿ ಆಯ್ಕೆ ಮಾಡಲಾಗುತ್ತಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ಡಿ.ಎನ್.ಬಿ. ಸೆಮಿನಾರ್ ಹಾಲ್, ಡಿ.ಎನ್.ಬಿ. ಬ್ಲಾಕ್, ಕೆ.ಸಿ.ಸಾರ್ವಜನಿಕ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ದಿನಾಂಕ: **05.09.2024 ರಂದು ಬೆಳಿಗ್ಗೆ 11.00 ಗಂಟೆಗೆ** ಮೂಲ ದಾಖಲಾತಿಗಳೊಂದಿಗೆ ಹಾಜರಾಗುವುದು.

ಕ್ರ ಸಂ	ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ	ಕನಿಷ್ಠ ವಿದ್ಯಾರ್ಹತೆ, ಅನುಭವ ಹಾಗೂ ವಯೋಮಿತಿ	ಮಾಸಿಕ ಸಂಚಿತ ವೇತನ (ರೂ.)
1	ಪ್ರಯೋಗಶಾಲಾ ತಂತ್ರಜ್ಞರು	02	**ವಿದ್ಯಾರ್ಹತೆ:** 1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಪ್ರಯೋಗಶಾಲಾ ತಂತ್ರಜ್ಞತೆಯಲ್ಲಿ ಎರಡು ವರ್ಷದ ಕರ್ನಾಟಕ ವೃತ್ತಿಪರ ಶೈಕ್ಷಣಿಕ ಬೋರ್ಡ್‌ನ ಡಿಪ್ಲೋಮಾ ಹೊಂದಿರಬೇಕು ಅಥವಾ 2. ದ್ವಿತೀಯ ಪಿ.ಯು.ಸಿ. ಯಲ್ಲಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣ ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯು ನಡೆಸುವ 2 ವರ್ಷಗಳ ಪ್ರಯೋಗಶಾಲಾ ತಂತ್ರಜ್ಞರ ತರಬೇತಿ ಪಡೆದಿರಬೇಕು ಅಥವಾ 3. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗಶಾಲಾ ತಂತ್ರಜ್ಞತೆಯಲ್ಲಿ ಮೂರು ವರ್ಷದ ಡಿಪ್ಲೋಮಾದಲ್ಲಿ ಉತ್ತೀರ್ಣ ಹೊಂದಿರಬೇಕು ಅಥವಾ 4. ಬಿ.ಎಂ.ಎಲ್.ಟಿ. ತಂತ್ರಜ್ಞತೆಯಲ್ಲಿ ಉತ್ತೀರ್ಣ ಹೊಂದಿರಬೇಕು. 5. Computer Basic ತರಬೇತಿ ಹಾಗೂ ಕನ್ನಡ, ಇಂಗ್ಲೀಷ್ ಬೆರಳಚ್ಚು ಜ್ಞಾನ ಹೊಂದಿರಬೇಕು. ವಯೋಮಿತಿ: **35 ವರ್ಷ ಒಳಪಟ್ಟು,** ಕೆಲಸದ ಅವಧಿ: **ಬೆಳಿಗ್ಗೆ / ರಾತ್ರಿ ಪಾಳಿಯ ಪ್ರಕಾರ**	15,000/- ರಿಂದ 19,999/-
2.	ಕ್ಷ-ಕಿರಣ ತಂತ್ರಜ್ಞರು	01	**ವಿದ್ಯಾರ್ಹತೆ:** 1. ಮೂರು ವರ್ಷಗಳ Diploma in Imaging Technology ವಿದ್ಯಾರ್ಹತೆ ಹೊಂದಿರಬೇಕು. 2. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಅಥವಾ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. 3. Computer Basic ತರಬೇತಿ ಹಾಗೂ ಕನ್ನಡ, ಇಂಗ್ಲೀಷ್ ಬೆರಳಚ್ಚು ಜ್ಞಾನ ಹೊಂದಿರಬೇಕು. ವಯೋಮಿತಿ: **35 ವರ್ಷ ಒಳಪಟ್ಟು** ಕೆಲಸದ ಅವಧಿ: **ಬೆಳಿಗ್ಗೆ / ರಾತ್ರಿ ಪಾಳಿಯ ಪ್ರಕಾರ**	15,000/- ರಿಂದ 19,999/-
3	ನೇತ್ರ ಸಹಾಯಕರು	02	**ವಿದ್ಯಾರ್ಹತೆ:** 1. NPCB ಮಾನ್ಯತೆ ಪಡೆದಿರುವ ಆಸ್ಪತ್ರೆಯಲ್ಲಿ ಎರಡು ವರ್ಷಗಳ Diploma in Ophthalmic Assistant ವಿದ್ಯಾರ್ಹತೆ ಹೊಂದಿರಬೇಕು. 2. Computer Basic ತರಬೇತಿ ಹಾಗೂ ಕನ್ನಡ, ಇಂಗ್ಲೀಷ್ ಬೆರಳಚ್ಚು ಜ್ಞಾನ ಹೊಂದಿರಬೇಕು. ವಯೋಮಿತಿ: **35 ವರ್ಷ ಒಳಪಟ್ಟು** ಕೆಲಸದ ಅವಧಿ: **ಬೆಳಿಗ್ಗೆ / ರಾತ್ರಿ ಪಾಳಿಯ ಪ್ರಕಾರ**	15,000/- ರಿಂದ 19,999/-
4	ಫಾರ್ಮಸಿಸ್ಟ್	01	**ವಿದ್ಯಾರ್ಹತೆ:** 1. ಫಾರ್ಮಸಿಸ್ಟ್ ಕೌನ್ಸಿಲ್ ಆಫ್ ಕರ್ನಾಟಕದಿಂದ ಮಾನ್ಯತೆ ಪಡೆದಿರುವ ಕಾಲೇಜಿನಲ್ಲಿ 'ಬಿ' ಫಾರ್ಮ ಪದವಿಯಲ್ಲಿ ಉತ್ತೀರ್ಣರಾಗಿದ್ದು, ನೊಂದಣಿ ಪ್ರಮಾಣಪತ್ರವನ್ನು ಹೊಂದಿರಬೇಕು. 2. Computer Basic ತರಬೇತಿ ಹಾಗೂ ಕನ್ನಡ, ಇಂಗ್ಲೀಷ್ ಬೆರಳಚ್ಚು ಜ್ಞಾನ ಹೊಂದಿರಬೇಕು. ವಯೋಮಿತಿ: **35 ವರ್ಷ ಒಳಪಟ್ಟು** ಕೆಲಸದ ಅವಧಿ: **ಬೆಳಿಗ್ಗೆ / ರಾತ್ರಿ ಪಾಳಿಯ ಪ್ರಕಾರ**	15,000/- ರಿಂದ 19,999/-
5	ಅನುಭವಿ ಲೆಕ್ಕಪತ್ರ ಸಹಾಯಕರು	02	**ವಿದ್ಯಾರ್ಹತೆ:** 1. ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ B.com/M.com ಪದವಿ ಹೊಂದಿರಬೇಕು. 2. ಕಂಪ್ಯೂಟರ್ ಸಾಕ್ಷರತೆ ಹಾಗೂ Tally ತರಬೇತಿ ಹೊಂದಿರಬೇಕು. 3. ಕಂಪ್ಯೂಟರ್‌ನಲ್ಲಿ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಅನುಭವವಿರಬೇಕು. ವಯೋಮಿತಿ: **35 ವರ್ಷ ಒಳಪಟ್ಟು** ಕೆಲಸದ ಅವಧಿ: **ಪೂರ್ಣಾವಧಿ (ಬೆಳಿಗ್ಗೆ 9.00 ರಿಂದ ಸಂಜೆ 4.30 ರವರೆಗೆ)**	15,000/- ರಿಂದ 18,873/-
6	ಕಾನೂನು ಸಲಹೆಗಾರರು	01	**ವಿದ್ಯಾರ್ಹತೆ:** 1. ಅಂಗೀಕೃತ ವಿಶ್ವವಿದ್ಯಾಲಯದಿಂದ (ಮೂರು ಅಥವಾ ಐದು ವರ್ಷಗಳು) ಕಾನೂನು ಪದವಿ (Degree in Law) ಪಡೆದಿರಬೇಕು. 2. ಕನಿಷ್ಠ ಶೇಕಡ 40 ರಷ್ಟು ಅಂಕಗಳನ್ನು ಕಾನೂನು ಪದವಿಯಲ್ಲಿ (Degree in Law) ಗಳಿಸಿರಬೇಕು (ಮೂರು ಅಥವಾ ಐದು ವರ್ಷಗಳ ಸರಾಸರಿ). 3. ನೋಂದಣಿ ಸಂಖ್ಯೆ ಹಾಗೂ ನೋಂದಣಿ ದಿನಾಂಕವುಳ್ಳ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ರವರು ನೀಡಿದ ಮೂಲ ಗುರುತಿನ ಕಾರ್ಡ್ ಹೊಂದಿರಬೇಕು. **ಅನುಭವ:** 1. ವಕೀಲ ವೃತ್ತಿಯಲ್ಲಿ ಕನಿಷ್ಠ 05 ವರ್ಷಗಳ ಅನುಭವವಿರಬೇಕು. 2. ವಕೀಲ ವೃತ್ತಿಯ 05 ವರ್ಷ ಅನುಭವದ ಬಗ್ಗೆ ಬಾರ್ ಅಸೋಸಿಯೇಷನ್‌ನಿಂದ ಅಧ್ಯಕ್ಷರ / ಕಾರ್ಯದರ್ಶಿಯ ರವರಿಂದ ಮೂಲ ಪ್ರಮಾಣ ಪತ್ರ ಹೊಂದಿರಬೇಕು. 3. ಕಂಪ್ಯೂಟರ್‌ನಲ್ಲಿ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಅನುಭವವಿರಬೇಕು. ವಯೋಮಿತಿ: **40 ವರ್ಷ ಮೇಲ್ಪಟ್ಟು** ಕೆಲಸದ ಅವಧಿ: **ಪ್ರಕರಣಗಳ ಆಧಾರದ ಮೇಲೆ**	ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗಧಿಪಡುವ ಕಾನೂನು ಶುಲ್ಕ ಪಾವತಿ ಮೇರೆಗೆ
7	ಪ್ರೋಗ್ರಾಮರ್	01	**ವಿದ್ಯಾರ್ಹತೆ:** 1. ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ BE/B.Tech in CSE/ISE/IT or M.Tech (CS/IT) or MCA **ಅನುಭವ:** 1. IT Industry ಯಲ್ಲಿ ಸಾಫ್ಟ್‌ವೇರ್ ಪ್ರೊಗ್ರಾಮರ್ / ಡೆವಲಪರ್ ವೃತ್ತಿಯಲ್ಲಿ ಕನಿಷ್ಠ 03 ವರ್ಷಗಳ ಅನುಭವವಿರಬೇಕು. 2. HTML, Javascript, ASP.NET/Java/PHP Post graduate SQL or MySQL etc., ಅನುಭವ ಹೊಂದಿರಬೇಕು. 3. Hardware & networking ಅನುಭವ ಹೊಂದಿರಬೇಕು. ವಯೋಮಿತಿ: **35 ವರ್ಷ ಒಳಪಟ್ಟು** ಕೆಲಸದ ಅವಧಿ: **ಪೂರ್ಣಾವಧಿ (ಬೆಳಿಗ್ಗೆ 9.00 ರಿಂದ ಸಂಜೆ 4.30 ರವರೆಗೆ)**	25,000/- ರಿಂದ 30,000/-
8	ಗಣಕ ಯಂತ್ರ ಸಹಾಯಕರು	03	**ವಿದ್ಯಾರ್ಹತೆ:** 1. ಪದವಿ ಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. (2nd PUC), 2. ಕಂಪ್ಯೂಟರ್ ಸಾಕ್ಷರತಾ ತರಬೇತಿ ಪ್ರಮಾಣ ಪತ್ರವನ್ನು ಹೊಂದಿರಬೇಕು. (Ms Word, Power Point, Excell, Internet ಜ್ಞಾನ ಹೊಂದಿರಬೇಕು.) 3. ಕಂಪ್ಯೂಟರ್‌ನಲ್ಲಿ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಅನುಭವವಿರಬೇಕು. **ಅನುಭವ:** ಗಣಕಯಂತ್ರ ಸಹಾಯಕರಾಗಿ ಕನಿಷ್ಠ 2 ವರ್ಷಗಳ ಅನುಭವ ಹೊಂದಿರಬೇಕು. ವಯೋಮಿತಿ: **35 ವರ್ಷ ಒಳಪಟ್ಟು** ಕೆಲಸದ ಅವಧಿ: **ಪೂರ್ಣಾವಧಿ (ಬೆಳಿಗ್ಗೆ 9.00 ರಿಂದ ಸಂಜೆ 4.30 ರವರೆಗೆ)**	12,000/- ರಿಂದ 15,000/-

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಹಾಜರುಪಡಿಸಬೇಕಾದ ಮೂಲ ದಾಖಲಾತಿಗಳ ವಿವರ:

1) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಣ್ಣದ ಎರಡು ಭಾವಚಿತ್ರ (Colour Photo)ಹಾಜರು ಪಡಿಸುವುದು. 2) ಸರ್ಕಾರದಿಂದ ನೀಡಲಾಗಿರುವ ಭಾವಚಿತ್ರವಿರುವ ಮೂಲ ಗುರುತಿನ ಚೀಟಿ (Voter ID / Adhar Card / Passport / Pan Card / Ration card etc.) ಹಾಜರುಪಡಿಸುವುದು. 3) ಜನ್ಮ ದಿನಾಂಕವನ್ನು ತೋರಿಸುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ / ಶಾಲಾ ವರ್ಗಾವಣೆ ಪ್ರಮಾಣ ಪತ್ರ / ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative Record) ಹಾಜರುಪಡಿಸುವುದು. 4) ಪ್ರಕಟಣೆಯಲ್ಲಿ ಸಂಬಂಧಪಟ್ಟ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯ ಎಲ್ಲಾ ಮೂಲ ಅಂಕಪಟ್ಟಿಗಳು / ಪ್ರಮಾಣಪತ್ರಗಳನ್ನು ಸಂದರ್ಶನದ ಸಮಯದಲ್ಲಿ ಖಡ್ಡಾಯವಾಗಿ ಹಾಜರುಪಡಿಸಬೇಕು. 5) ಕನ್ನಡ ಮತ್ತು ಆಂಗ್ಲ ಭಾಷೆಯನ್ನು ಓದಲು ಮತ್ತು ಬರೆಯಲು ತಿಳಿದಿರಬೇಕು. 6) ಹೆಚ್ಚಿನ ಮಾಹಿತಿ ಅವಶ್ಯವಿದ್ದಲ್ಲಿ ಸಹಾಯಕ ಆಡಳಿತಾಧಿಕಾರಿಗಳು, ಆಡಳಿತ ಕಛೇರಿ, ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು ಇವರನ್ನು ಸಂಪರ್ಕಿಸುವುದು.

ಸಹಿ/- ವೈದ್ಯಕೀಯ ಅಧೀಕ್ಷಕರು,
ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/1691/2024-25

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಎ.ಆರ್.ಟಿ. ಕೇಂದ್ರ ಕೆ.ಸಿ. ಜನರಲ್ ಆಸ್ಪತ್ರೆ

ಮಲ್ಲೇಶ್ವರಂ, ಬೆಂಗಳೂರು - 560 003, ದೂರವಾಣಿ:080-234667782

ಸಂಖ್ಯೆ : ಕೆ.ಸಿ.ಜ./ಎ.ಆರ್.ಟಿ/ಸಿಬ್ಬಂದಿ/01/2023-24 ದಿನಾಂಕ:27.08.2024

ನೇರ ಸಂದರ್ಶನದ ಪ್ರಕಟಣೆ

ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು ಇಲ್ಲಿನ ಎ.ಆರ್.ಟಿ ಕೇಂದ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳು (Medical Officer) ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು **ದಿನಾಂಕ: 05.09.2024 ರಂದು ಮಧ್ಯಾಹ್ನ 12:00ಕ್ಕೆ** ನೇರ ಸಂದರ್ಶನವನ್ನು ನಿಗದಿಪಡಿಸಲಾಗಿದೆ. ಈ ಹುದ್ದೆಯ ವಿವರ ಕೆಳಕಂಡಂತಿದೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ವಿದ್ಯಾರ್ಹತೆ	ಮಾಸಿಕ ಸಂಭಾವನೆ
1	ವೈದ್ಯಾಧಿಕಾರಿಗಳು (Medical Officer)	1	MBBS, with working knowledge of computer, MS Office, Usage of Internet and electronic mail.	ರೂ. 72,000/-

1) ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರ ಮತ್ತು ಜೆರಾಕ್ಸ್ ಪ್ರತಿಯನ್ನು ಸಂದರ್ಶನದ ವೇಳೆ ಸಲ್ಲಿಸುವುದು. **2)** ಅಭ್ಯರ್ಥಿಗಳ ವಯೋಮಿತಿ 70 ವರ್ಷ ಮೀರಿರಬಾರದು. **3)** ಸಂದರ್ಶನದ ಸ್ಥಳ: ವೈದ್ಯಕೀಯ ಅಧೀಕ್ಷಕರ ಕಛೇರಿ, ಕೆ.ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು-560 003. ದೂ.ಸಂ. 080-23467782.

ಸಹಿ/- ವೈದ್ಯಕೀಯ ಅಧೀಕ್ಷಕರು,
ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/1690/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ-ಪೂರ್ವ) ವಿಭಾಗ, 21ನೇ ಮಹಡಿ, ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡ, (ಪಿಯುಬಿ) ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560 001.

ಸಂಖ್ಯೆ: ಕಾಪಾಅ/ಯೋ-ಪೂ/ಟೆಂಡರ್-01/ತಿದ್ದುಪಡಿ-1/2024-25 ದಿನಾಂಕ: 28.08.2024

ತಿದ್ದುಪಡಿ-01

ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಯೋ-ಪೂ/ಟೆಂಡರ್/01/2024-25 ದಿನಾಂಕ 14.08.2024ರಂದು ಪ್ರಕಟಿಸಲಾಗಿದ್ದು, ಸಂಬಂಧಿತ ಟೆಂಡರ್ ಕಾಮಗಾರಿಗಳಿಗೆ ದಾಖಲೆಗಳನ್ನು ತಾಂತ್ರಿಕ ದೋಷಗಳಿಂದಾಗಿ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವುದಿಲ್ಲ. ಸದರಿ ಟೆಂಡರ್ ಕಾಮಗಾರಿಗಳ ಮಾರ್ಪಾಡಾದ ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿವೆ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ದಿನಾಂಕ **04.09.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್-ಪೂರ್ವಭಾವಿ ಸಭೆಯನ್ನು ದಿನಾಂಕ **11.09.2024**ರ ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **26.09.2024**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **27.09.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಪ್ರಸ್ತಾವನೆಗಳನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
(ಯೋಜನೆ ಪೂರ್ವ)

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

ಮಣ್ಣೂರ, ಬೆಳಗಾವಿ.

ಸಂಖ್ಯೆ : ಇ.ಪ್ರೊ./ಟೆಂಡರ್/2024-25 ದಿನಾಂಕ : 28-08-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ರಾಜ್ಯ ವಲಯ ಯೋಜನೆಯಡಿ ಬೆಳಗಾವಿ (ದ) ಜಿಲ್ಲೆಯ ಕೆಳಗಿನ ಅನುಬಂಧದಲ್ಲಿ ವಿವರಿಸಿದ **ಶೈಕ್ಷಣಿಕ ಸಂಸ್ಥೆ / ಕಚೇರಿಗಳಿಗೆ ವಿವಿಧ ಇಲೆಕ್ಟ್ರಾನಿಕ ಸಾಮಗ್ರಿಗಳನ್ನು ಪೂರೈಸಲು** ಆಸಕ್ತ ಸಂಸ್ಥೆಗಳಿಂದ ಪ್ರತ್ಯೇಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಬಿಡ್‌ದಾರರು **ಸದರಿ 03 ಟೆಂಡರ್‌ಗಳಿಗೆ ಭಾಗವಹಿಸಲು ದಿನಾಂಕ : 04-09-2024 ಕೊನೆಯ ದಿನಾಂಕವಾಗಿದ್ದು ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರಮೆಂಟ್ ತಂತ್ರಾಂಶದ ವೆಬ್‌ಸೈಟ್ : www.kppp.karnataka.gov.in ಅವಲೋಕಿಸುವುದು ಅಥವಾ ಪ್ರಾಚಾರ್ಯರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಣ್ಣೂರ, ಬೆಳಗಾವಿ ಇವರ ಕಚೇರಿಯನ್ನು ಸಂಪರ್ಕಿಸುವುದು. (ಮೊ. : 94489 99359).**

ಅನುಬಂಧ

1) ಟೆಂಡರ್‌ನ ವಿವರ : 05 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಇಲೆಕ್ಟ್ರಾನಿಕ್ ಸಾಮಗ್ರಿಗಳ ಪೂರೈಕೆ, ಟೆಂಡರ್‌ನ ಉಲ್ಲೇಖ ಸಂಖ್ಯೆ : DPI/2024-25/IND0329, ಟೆಂಡರ್‌ನ ಮೊತ್ತ : ರೂ. 11,80,000/-, ಇ.ಎಂ.ಡಿ. ಮೊತ್ತ : ರೂ. 23,600/-, 2) ಟೆಂಡರ್‌ನ ವಿವರ : 07 ಬಿ.ಆರ್.ಸಿ. ಕೇಂದ್ರಗಳಿಗೆ ಇಲೆಕ್ಟ್ರಾನಿಕ್ ಸಾಮಗ್ರಿಗಳ ಪೂರೈಕೆ, ಟೆಂಡರ್‌ನ ಉಲ್ಲೇಖ ಸಂಖ್ಯೆ : DPI/2024-25/IND0330, ಟೆಂಡರ್‌ನ ಮೊತ್ತ : ರೂ. 39,20,000/-, ಇ.ಎಂ.ಡಿ. ಮೊತ್ತ : ರೂ. 78,400/-, 3) ಟೆಂಡರ್‌ನ ವಿವರ : 08 ಕೆ.ಪಿ.ಎಸ್. ಶಾಲೆಗಳಿಗೆ ಇಲೆಕ್ಟ್ರಾನಿಕ್ ಸಾಮಗ್ರಿಗಳ ಪೂರೈಕೆ, ಟೆಂಡರ್‌ನ ಉಲ್ಲೇಖ ಸಂಖ್ಯೆ : DPI/2024-25/IND0331, ಟೆಂಡರ್‌ನ ಮೊತ್ತ : ರೂ. 54,56,000/-, ಇ.ಎಂ.ಡಿ. ಮೊತ್ತ : ರೂ. 1,09,120/-.

ಸಹಿ/- ಪ್ರಾಚಾರ್ಯರು / ಉಪನಿರ್ದೇಶಕರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,
ಮಣ್ಣೂರ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/705/ಮಣಿಪಾಲ್/2024-25

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-23

ನಂ.: NHM/SPMU/HR/Recruitment-State/Notification/50/2024-25(E-1127145) ದಿನಾಂಕ:27.08.2024

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳನ್ನು ಆಹ್ವಾನಿಸುತ್ತಿದೆ. ಹುದ್ದೆಗಳು ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರದಲ್ಲಿರುತ್ತದೆ. ಹೆಚ್ಚಿನ ವಿವರಗಳಿಗೆ ವೆಬ್‌ವಿಳಾಸ **www.hfwcom.karnataka.gov.in** & **nhm.karnataka.gov.in** ನಲ್ಲಿ ಲಾಗಿನ್ ಆಗಿ ಪಡೆಯಬಹುದು. ನೇರ ಸಂದರ್ಶನದ ದಿನಾಂಕ: **09.09.2024 ರಂದು ಬೆಳಿಗ್ಗೆ 11.00 ಗಂಟೆಗೆ** ಮುಖ್ಯ ಆಡಳಿತಾಧಿಕಾರಿ, ರಾಷ್ಟ್ರೀಯ ಆರೋಗ್ಯ ಅಭಿಯಾನ ಕಚೇರಿ 1ನೇ ಮಹಡಿ, ಪಶ್ಚಿಮ ವಿಭಾಗ, ಆರೋಗ್ಯ ಸೌಧ, ಮಾಗಡಿ ರಸ್ತೆ, 1ನೇ ಕ್ರಾಸ್, ಬೆಂಗಳೂರು - 560023 ಇಲ್ಲಿ ನಿಗದಿಪಡಿಸಲಾಗಿದೆ,

ಕ್ರ. ಸಂ.	ಕಾರ್ಯಕ್ರಮದ ಹೆಸರು	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ಮೀಸಲಾತಿ ವರ್ಗ
1	TB/NTEP/ RNTCP/NTCP	TB-HIV Co-ordinator	1	UR
		DRTB Co-ordinator	1	UR
2	NUHM-BBMP	M & E Manager	1	UR
3	RCH	PIP Consultant	1	UR
4		Procurement Consultant	1	UR

* ನಿಗದಿತ ಸಮಯದ ನಂತರ ಬಂದ ಅಭ್ಯರ್ಥಿಗಳನ್ನು ಅನುಮತಿಸಲಾಗುವುದಿಲ್ಲ.

ಸಹಿ/-
ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

DIPR/CP/BCPL/1702/2024-25

ಕಾರ್ಮಿಕರ ರಾಜ್ಯ ವಿಮಾ ನಿಗಮ
(ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ)
कर्मचारी राज्य बीमा निगम
(श्रम एवं रोजगार मंत्रालय, भारत सरकार)
EMPLOYEES' STATE INSURANCE CORPORATION
(Ministry of Labour & Employment, Govt. of India)

क्षेत्रीय कार्यालय, कर्नाटक, नं. 10 बिन्नीफील्ड्स, बिन्नीपेट, बेंगलूरु - 560023
REGIONAL OFFICE, KARNATAKA,
NO. 10 BINNYFIELDS,
BINNYPET, BANGALORE – 560023
Phone: 080-26740764,
E-Mail: rd-karnataka@esic.nic.in
Website: www.esic.nic.in / www.esic.in

EXPRESSION OF INTEREST (EOI) INVITATION FOR EMPANELMENT OF HEALTH CARE ORGANIZATIONS [HOSPITALS, DIAGNOSTIC CENTRES, DIALYSIS CENTRES, BLOOD BANKS, EYE CENTRES (FOR VITREO-RETINAL PROCEDURES)]

The competent authority invites applications from Hospitals, Diagnostic Centers, Dialysis Centers, Blood Banks, and Eye Centers located within the state of Karnataka for empanelment. The empanelment will be for a period of two years, specifically to provide Super Specialty Services (Tertiary care only) to ESIC Beneficiaries/ESIC staff and Pensioners in Karnataka region.

Interested Healthcare Organizations (HCOs) are requested to submit their applications by **18.09.2024, 6.00 p.m.**

Applications should be completed as per the relevant annexure as provided in terms and conditions:

- **Annexure A-1:** For Hospitals (34 to 37)
- **Annexure A-2:** For Diagnostic Laboratories/Imaging Centers (38 to 40)
- **Annexure A-3:** For Exclusive Dialysis Centers/Eye Centers (for Vitreo-Retinal Procedures) (41 to 43)
- **Annexure A-4:** For Blood Bank Services (44 to 46).

Submission Details:

- **Format:** Applications must be submitted in physical form either (by hand or by post) in a sealed envelope with all relevant documents as mentioned in **Annexure- F** of terms and conditions.
- **Deadline: 18.09.2024 , 6.00 P.M**

Earnest Money Deposit (EMD):

The bidder must submit the Earnest Money Deposit (EMD) through online mode (RTGS) only. The bank details are as follows:

- **Account Name:** Employees State Insurance Corporation
- **Bank Name & Branch:** State Bank of India, Branch – Chamarajapet (New Tharagupet)
- **Account No.:** 10374512464
- **IFS Code**: SBIN0005794
- **MICR No.:** 560002034

Terms and Conditions:

For detailed terms and conditions, please refer to the following:

- **Website: https://www.esic.gov.in/tenders**
- **Referral Policy Link:** **https://www.esic.gov.in/attachments/publicationfile/5fee10bf1dfc893ca1b9e04db75d4323.pdf**

Place: Bangalore
Date: 28 .08.2024

Sd/- **STATE MEDICAL OFFICER**
For AC & RD ESIC KARNATAKA

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಿಕೃಷ್ಟವಾದ ಪ್ರಶ್ನೆಗಳನ್ನು ಕೇಳುವ ವ್ಯಕ್ತಿಗೆ ಉತ್ತರಿಸಬಾರದು ಮತ್ತು ನಿಕೃಷ್ಟವಾದ ಉತ್ತರಗಳನ್ನು ಕೊಡುವ ವ್ಯಕ್ತಿಯನ್ನು ಪ್ರಶ್ನಿಸಲು ಹೋಗಬಾರದು.

-ಕನ್‌ಫ್ಯೂಷಿಯಸ್

ಕಾರಾಗೃಹದಲ್ಲಿ 'ವಿಶೇಷ ಸವಲತ್ತು' ನಿಗಾ ವ್ಯವಸ್ಥೆ ಮತ್ತಷ್ಟು ಬಿಗಿಯಾಗಲಿ

ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಚಲನಚಿತ್ರ ನಟ ದರ್ಶನ್ ಅವರಿಗೆ ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ 'ವಿಶೇಷ ಸವಲತ್ತು'ಗಳು ದೊರೆತಿರುವುದು ಕಾರಾಗೃಹ ವ್ಯವಸ್ಥೆಯಲ್ಲಿನ ಹುಳುಕುಗಳನ್ನು ಮತ್ತೊಮ್ಮೆ ಬಹಿರಂಗಪಡಿಸಿದೆ. ಕೈಯಲ್ಲಿ ಸಿಗರೇಟ್ ಹಾಗೂ ಚಹಾ ಕಪ್ಪು ಹಿಡಿದ ದರ್ಶನ್, ಕೆಲವು ರೌಡಿಗಳೊಂದಿಗೆ ಲೋಕಾಭಿರಾಮವಾಗಿ ಹರಟುತ್ತಿರುವ ಫೋಟೊ ಹಾಗೂ ರೌಡಿಯೊಬ್ಬನ ಮಗನಿಗೆ ಜೈಲಿನಿಂದಲೇ ವಿಡಿಯೊ ಕರೆ ಮಾಡಿರುವ ದೃಶ್ಯಾವಳಿಯ ತುಣುಕು ಬಹಿರಂಗಗೊಂಡಿವೆ. ಇವುಗಳನ್ನು ಗಮನಿಸಿದರೆ, ಕೇಂದ್ರ ಕಾರಾಗೃಹವು ಮನರಂಜನಾ ಸ್ಥಳದ ಸ್ವರೂಪ ಪಡೆದುಕೊಂಡಂತೆ ಕಾಣಿಸುತ್ತಿದೆ. ಮೊಬೈಲ್ ಫೋನ್ ಜಾಮರ್‌ಗಳು ಹಾಗೂ ಸಿ.ಸಿ. ಟಿ.ವಿ. ಕ್ಯಾಮೆರಾಗಳು ನಿಷ್ಕ್ರಿಯವಾಗುವಷ್ಟರ ಮಟ್ಟಿಗೆ ಜೈಲಿನಲ್ಲಿನ ಕಾನೂನುಬಾಹಿರ ಚಟುವಟಿಕೆಗಳು ಮೇಲುಗೈ ಪಡೆದುಕೊಂಡಿವೆ. ಕೈದಿಗಳಲ್ಲಿ ಸುಧಾರಣೆ ತರುವ ಉದ್ದೇಶದ ಪರಿಸರ, ಕಾನೂನುಬಾಹಿರ ಚಟುವಟಿಕೆಗಳ ಕೇಂದ್ರವಾಗಿ ರೂಪುಗೊಂಡಿರುವುದು ದುರದೃಷ್ಟಕರ. ಜೈಲಿನೊಳಗಿನಿಂದಲೇ ದರ್ಶನ್ ವಿಡಿಯೊ ಕರೆ ಮಾಡಿದ್ದಾರೆ ಎಂದೂ ಹೇಳಲಾಗುತ್ತಿದೆ. ಕುಳ್ಳ ಸೀನ ಎನ್ನುವ ರೌಡಿಶೀಟರ್ ಬಂದೂಕಿನಾಕಾರದ ಕೇಕ್ ಕತ್ತರಿಸಿ ಕಾರಾಗೃಹದಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಚಿತ್ರವೂ ಬಹಿರಂಗಗೊಂಡಿದೆ. ಈ ಫೋಟೊ ಮತ್ತು ವಿಡಿಯೊ ತುಣುಕು 'ಕರ್ನಾಟಕ ಕಾರಾಗೃಹಗಳ (ತಿದ್ದುಪಡಿ) ಕಾಯ್ದೆ– 2022' ನಿರ್ಬಂಧಿಸಿರುವ ಚಟುವಟಿಕೆಗಳಲ್ಲಿ ಕೈದಿಗಳು ತೊಡಗಿಕೊಳ್ಳಲು ಅವಕಾಶ ದೊರೆತಿರುವುದಕ್ಕೆ ಸಾಕ್ಷ್ಯದಂತಿವೆ. ರಾಜ್ಯದ ಬಹು ದೊಡ್ಡ ಹಾಗೂ ಸುರಕ್ಷಿತ ಕಾರಾಗೃಹದಲ್ಲಿ ರೌಡಿಶೀಟರ್‌ಗಳು ವಿಶೇಷ ಸವಲತ್ತುಗಳನ್ನು ಪಡೆಯುತ್ತಿರುವುದು ರಾಜ್ಯ ಸರ್ಕಾರಕ್ಕೆ, ವಿಶೇಷವಾಗಿ ಗೃಹ ಇಲಾಖೆಗೆ ಮುಖಭಂಗ ಆಗಬೇಕಾದ ಸಂಗತಿ. ಎಲ್ಲ ಕೈದಿಗಳನ್ನೂ ಸಮಾನವಾಗಿ ನಡೆಸಿಕೊಳ್ಳಬೇಕಾದ ಕಾರಾಗೃಹದಲ್ಲಿ ಕೆಲವರಿಗೆ ವಿಶೇಷ ಸವಲತ್ತುಗಳು ದೊರೆಯುವುದು ಕಾನೂನಿನ ಸ್ಪಷ್ಟ ಉಲ್ಲಂಘನೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರವು 9 ಮಂದಿ ಸಿಬ್ಬಂದಿಯನ್ನು ಅಮಾನತುಗೊಳಿಸಿ ತನಿಖೆಗೆ ಆದೇಶಿಸಿದೆ. ಅವರಲ್ಲಿ ಕಾರಾಗೃಹದ ಮುಖ್ಯ ಅಧೀಕ್ಷಕ ಮತ್ತು ಅಧೀಕ್ಷಕ ಕೂಡ ಸೇರಿದ್ದಾರೆ. ನ್ಯಾಯಾಲಯದ ಅನುಮತಿಯ ಮೇರೆಗೆ ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಹಾಗೂ ಆತನ ಸಹಚರರನ್ನು ರಾಜ್ಯದ ಬೇರೆ ಬೇರೆ ಜೈಲುಗಳಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಆರಂಭವಾಗಿದೆ. ಆರೋಪಿಗಳ ಸ್ಥಳಾಂತರ ಹಾಗೂ ಅಧಿಕಾರಿಗಳ ಅಮಾನತಿನಂತಹ ತಕ್ಷಣದ ಕ್ರಮಗಳ ಮೂಲಕ ಮುಜುಗರದಿಂದ ಪಾರಾಗಲು ಸರ್ಕಾರ ಪ್ರಯತ್ನಿಸಿದೆ.



ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಬದ್ಧತೆಯನ್ನು ರಾಜ್ಯ ಸರ್ಕಾರ ಪ್ರದರ್ಶಿಸಬೇಕು

ಹಣಬಲ ಹಾಗೂ ರಾಜಕೀಯ ಬಲ ಹೊಂದಿರುವವರಿಗೆ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಸವಲತ್ತುಗಳು ದೊರೆತಿರುವುದು ಇದೇ ಮೊದಲೇನೂ ಅಲ್ಲ. ಬಹು ಕೋಟಿ ಛಾಪಾ ಕಾಗದ ಹಗರಣದ ರೂವಾರಿ ಅಬ್ದುಲ್ ಕರೀಂ ತೆಲಗಿ, ಎಐಎಡಿಎಂಕೆ ನಾಯಕಿ ಜಯಲಲಿತಾ ಅವರ ಆಪ್ತಗೆಳತಿ ವಿ.ಕೆ. ಶಶಿಕಲಾ ಸೇರಿದಂತೆ ಕೆಲವರು ಕಾರಾಗೃಹದಲ್ಲಿ 'ವಿಶೇಷ ಸವಲತ್ತು'ಗಳ ಫಲಾನುಭವಿಗಳಾಗಿದ್ದುದರ ವರದಿಗಳು ಪ್ರಕಟವಾಗಿದ್ದವು. ಇಂಥ ಪ್ರಕರಣಗಳು ಬಹಿರಂಗಗೊಂಡಾಗ ಅಧಿಕಾರಿಗಳನ್ನು ಅಮಾನತುಗೊಳಿಸುವ ತಕ್ಷಣದ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆಯಾದರೂ ಕೆಲವರ ಪಾಲಿಗೆ ಕಾರಾಗೃಹಗಳು ಅತಿಥಿಗೃಹಗಳಾಗಿಯೇ ಉಳಿದುಬಂದಿವೆ. ಕಾರಾಗೃಹಗಳಲ್ಲಿ ಶಾಶ್ವತ ಸುಧಾರಣೆಯನ್ನು ತರುವುದಕ್ಕೆ ಯಾವ ಪಕ್ಷದ ನೇತೃತ್ವದ ಸರ್ಕಾರವೂ ಪ್ರಾಮಾಣಿಕವಾಗಿ ಪ್ರಯತ್ನಿಸಿದಂತಿಲ್ಲ. ಕೆಲವು ಕೈದಿಗಳು ಜೈಲಿನಲ್ಲಿ ತಮಗೆ ಬೇಕಾದ ಸವಲತ್ತುಗಳನ್ನೆಲ್ಲ ಪಡೆಯುವುದರ ಜೊತೆಗೆ, ಕಾರಾಗೃಹವನ್ನು ತಮ್ಮ ಕಾರ್ಯಾಚರಣೆಯ ಪಿತೂರಿಸ್ಥಳವನ್ನಾಗಿ ಬಳಸಿಕೊಂಡಿರುವ ವರದಿಗಳೂ ಇವೆ. ಸಿಗರೇಟು, ಮದ್ಯ, ಮಾದಕ ವಸ್ತುಗಳು ಹಾಗೂ ವಿವಿಧ ಸವಲತ್ತುಗಳು ಕಾರಾಗೃಹದಲ್ಲಿ ಖರೀದಿಗೆ ಲಭ್ಯ ಎನ್ನುವ ಸ್ಥಿತಿಯನ್ನು ಭ್ರಷ್ಟ ಅಧಿಕಾರಿಗಳು ಸೃಷ್ಟಿಸಿದ್ದಾರೆ. ಜೈಲಿನೊಳಗಿನ ವ್ಯಕ್ತಿ ಹೊರ ಜಗತ್ತಿನವರೊಂದಿಗೆ ವಿಡಿಯೊ ಕರೆ ಮಾಡಿ ಮಾತನಾಡಬಹುದು ಎನ್ನುವ ಕಲ್ಪನೆಯೇ ಆತಂಕ ಹುಟ್ಟಿಸುವಂತಹದ್ದು.

ಇದೇ ವರ್ಷದ ಏಪ್ರಿಲ್‌ನಲ್ಲಿ ಪರಪ್ಪನ ಅಗ್ರಹಾರ ಕಾರಾಗೃಹದ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ಹಲವು ವಸ್ತುಗಳನ್ನು ಜಪ್ತಿ ಮಾಡಿದ್ದರು. ಕೇಂದ್ರ ಕಾರಾಗೃಹದಲ್ಲಿನ ಅವ್ಯವಹಾರಗಳ ಕುರಿತಂತೆ 2017ರಲ್ಲಿ ಅಧಿಕಾರಿಗಳ ನಡುವೆ ನಡೆದ ಶೀತಲಯುದ್ಧ ದೊಡ್ಡ ಸುದ್ದಿಯಾಗಿತ್ತು. ಇದು, ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದ ದುರವಸ್ಥೆಯಷ್ಟೇ ಅಲ್ಲ. ಕಳೆದ ತಿಂಗಳು ಮಂಗಳೂರಿನ ಕಾರಾಗೃಹದ ಮೇಲೆ ದಾಳಿ ನಡೆಸಿದ್ದ ಪೊಲೀಸರು, 25 ಮೊಬೈಲ್ ಫೋನ್‌ಗಳು ಸೇರಿದಂತೆ ಹಲವು ವಸ್ತುಗಳನ್ನು ವಶಪಡಿಸಿಕೊಂಡಿದ್ದರು. ಈಗ ದರ್ಶನ್ ಪ್ರಕರಣದ ಮೂಲಕ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿನ ಅಕ್ರಮ ಚಟುವಟಿಕೆಗಳು ಮತ್ತೆ ಸುದ್ದಿಯಲ್ಲಿವೆ. ಕೈದಿಗಳ ಮಾನಸಿಕ ಪರಿವರ್ತನೆಗೆ ಪೂರಕವಾಗುವಂತೆ ಇರಬೇಕಾದ ಜೈಲಿನ ಪರಿಸರ, ಮನೋವಿಕಾರಗಳ ಪೋಷಣೆಗೆ ಅನುಕೂಲ ಒದಗಿಸುವಂತಿರುವುದು ಕಳವಳಕಾರಿ. ಈ ಕಾರಾಗೃಹವೂ ಸೇರಿದಂತೆ ರಾಜ್ಯದ ಎಲ್ಲ ಜೈಲುಗಳಲ್ಲಿ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಿಗಿಗೊಳಿಸಿ, ನಿರ್ಬಂಧಿತ ಚಟುವಟಿಕೆಗಳಿಗೆ ಅವಕಾಶ ಇಲ್ಲದಂತಹ ವಾತಾವರಣ ಸೃಷ್ಟಿಸಬೇಕು. ರಾಜಕೀಯ ಹಸ್ತಕ್ಷೇಪವೂ ಕಾರಾಗೃಹಗಳಲ್ಲಿ ಇಂತಹ ಚಟುವಟಿಕೆಗಳು ನಡೆಯಲು ಕಾರಣ ಎಂಬುದು ನಿರ್ವಿವಾದ. ಕೈದಿಗಳಿಗೆ ವಿಶೇಷ ಸವಲತ್ತುಗಳನ್ನು ಒದಗಿಸಲು ಪ್ರಭಾವ ಬೀರುವಂತಹ ರಾಜಕಾರಣಿಗಳ ವಿರುದ್ಧವೂ ಕಾನೂನು ಕ್ರಮ ಜರುಗಿಸುವ ಧೈರ್ಯವನ್ನು ಸರ್ಕಾರ ತೋರಬೇಕು. ಅತ್ಯಾಧುನಿಕ ಸಿ.ಸಿ. ಟಿ.ವಿ. ಕ್ಯಾಮೆರಾಗಳ ಕಣ್ಗಾವಲು ಸೇರಿದಂತೆ ತಂತ್ರಜ್ಞಾನವನ್ನು ಬಳಸಿಕೊಂಡು ಕಾರಾಗೃಹಗಳ ಮೇಲೆ ನಿಗಾ ಇರಿಸುವ ವ್ಯವಸ್ಥೆ ಆಗಬೇಕು. ಕಣ್ಗಾವಲು ವ್ಯವಸ್ಥೆ ದುರ್ಬಳಕೆ ಆಗದಂತೆ ಕೇಂದ್ರೀಕೃತ ನಿಗಾ ವ್ಯವಸ್ಥೆಯನ್ನೂ ರೂಪಿಸಿ, ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಬದ್ಧತೆಯನ್ನು ರಾಜ್ಯ ಸರ್ಕಾರ ಪ್ರದರ್ಶಿಸಬೇಕು.

ದಿನದ ಟ್ವೀಟ್

ಸೆಲ್ಫಿ ವ್ಯಾಮೋಹ ಏಕೆ?



ಅಟಲ್ ಸೇತುವಿನ ಮೇಲೆ ಸೆಲ್ಫಿ ತೆಗೆದುಕೊಳ್ಳುವಾಗ ಜಾರಿ ಬಿದ್ದು ನೀರಿನಲ್ಲಿ ಮುಳುಗುತ್ತಿದ್ದ ಹುಡುಗಿಯನ್ನು ಎಸ್‌ಎಸ್‌ಬಿ (ಸಶಸ್ತ್ರ ಸೀಮಾ ಬಲ) ಯೋಧರು ಕಾಪಾಡಿದ್ದಾರೆ. ಸೆಲ್ಫಿ ತೆಗೆದುಕೊಳ್ಳುವುದು ನಿಮ್ಮ ಜೀವನವನ್ನೇ ಅಪಾಯಕ್ಕೆ ಒಡ್ಡಿಕೊಳ್ಳುವಷ್ಟು ಮುಖ್ಯವಾದ ಕಾರ್ಯವೇ?

ರಿಷಿ ಬಾಗರೀ, ಹಣಕಾಸು ವಿಶ್ಲೇಷಕ

ಕಿಡಿನುಡಿ

ಕೇವಲ ಇನ್‌ಸ್ಟಾಗ್ರಾಮ್‌ನಲ್ಲಿ ಗಮನ ಸೆಳೆಯುವ ಸಲುವಾಗಿ ಬುಲಂದ್‌ಶಹರದ ಹುಡುಗನೊಬ್ಬ ಹಲವಾರು ಪ್ರಾಣಿಗಳನ್ನು ಕೊಂದು ಹಾಕಿದ್ದಾನೆ. ಇಂತಹ ಅಮಾನವೀಯ ಕೃತ್ಯಕ್ಕಾಗಿ ಆತನನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕು. ಯಾರೇ ಆದರೂ ಇಷ್ಟೊಂದು ಕ್ರೂರಿಯಾಗಲು ಹೇಗೆ ಸಾಧ್ಯ? ಮೋಜಿಗಾಗಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಖ್ಯಾತರಾಗುವುದಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದು ಒಪ್ಪುವಂಥದ್ದಲ್ಲ. ಇಂತಹ ಕೃತ್ಯಗಳ ವಿರುದ್ಧ ನಾವು ನಿಲ್ಲಬೇಕು ಮತ್ತು ನ್ಯಾಯ ಒದಗುವಂತೆ ನೋಡಿಕೊಳ್ಳಬೇಕು.

ವಿದಿತ್ ಶರ್ಮಾ, ಸಂಸ್ಥಾಪಕ, ಸೇವ್ ಎ ಸ್ಟ್ರೇ ಟ್ರಸ್ಟ್

25 ವರ್ಷಗಳ ಹಿಂದೆ

ಭಾನುವಾರ, 29-8-1999

• **'ಅಲ್ಪಸಂಖ್ಯಾತರು ಭಯದ ನೆರಳಲ್ಲಿ'**

ಪಟಿಯಾಲ (ಪಂಜಾಬ್), ಆ. 28 (ಪಿಟಿಐ)– ವಾಜಪೇಯಿ ನೇತೃತ್ವದ ಸರ್ಕಾರ ಕೋಮುವಾದದಿಂದ ರಾಷ್ಟ್ರದ ಜನರಲ್ಲಿ ಬಿರುಕು ಮೂಡಿಸಿರುವ ಕಾರಣ ಅಲ್ಪಸಂಖ್ಯಾತರು ಭಯದ ನೆರಳಿನಲ್ಲಿ ಬದುಕುವಂತಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಟೀಕಿಸಿದರು.

• **ಬದಲಾದ ಕಾಂಗ್ರೆಸ್ ಧೋರಣೆಗೆ ಟೀಕೆ**

ಅಹಮದಾಬಾದ್, ಆ. 28 (ಪಿಟಿಐ)– ಅತಂತ್ರ ಸಂಸತ್ ನಿರ್ಮಾಣವಾದಲ್ಲಿ ಸಮ್ಮಿಶ್ರ ಸರ್ಕಾರ ರಚಿಸುವ ಬಗ್ಗೆಯೂ ಕಾಂಗ್ರೆಸ್ ಪರಿಶೀಲಿಸಲಿದೆ ಎಂದು ಹೇಳುವ ಮೂಲಕ ಸೋನಿಯಾ ಗಾಂಧಿ ಮುಖ ಉಳಿಸಿಕೊಳ್ಳುವ ಯತ್ನ ಮಾಡುತ್ತಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾಣಿ ಟೀಕಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 29-8-1974

• **ಪೇಟೆ ಔಷಧಿಗಳಲ್ಲಿ ಶೇ 16ರಷ್ಟು ಕೀಳು: ತಜ್ಞರಿಂದ ಬಹಿರಂಗ**

ಬೆಂಗಳೂರು, ಆ. 28– ಪೇಟೆಯಲ್ಲಿ ಮಾರಾಟವಾಗುತ್ತಿರುವ ಔಷಧಿಗಳಲ್ಲಿ ಶೇಕಡ 16ರಷ್ಟು ಕೀಳುದರ್ಜೆಯ ಔಷಧಿಗಳು ಸೇರಿವೆಯೆಂದು ಅಂದಾಜು ಮಾಡಲಾಗಿದೆ.

ಶ್ರೀ ಕೆ.ಆರ್.ಶ್ರೀನಿವಾಸಲು ನಾಯ್ಡು ಅವರ ಪ್ರಶ್ನೆಗೆ ಆರೋಗ್ಯ ಸಚಿವ ಶ್ರೀ ಎಚ್. ಸಿದ್ಧವೀರಪ್ಪ ಅವರು ಇಂದು ವಿಧಾನಸಭೆಯಲ್ಲಿ ಈ ಸಂಬಂಧ ಉತ್ತರ ನೀಡಿದರು.

ತಜ್ಞರು ವಿಶ್ಲೇಷಿಸಿದ ಔಷಧಿಗಳ ಪೈಕಿ 35 ಔಷಧಿಗಳು ಅಗತ್ಯ ಮಟ್ಟದಲ್ಲಿ ಇಲ್ಲದುದು ಕಂಡುಬಂದಿದೆ ಎಂದು ಸಚಿವರು ತಿಳಿಸಿದರು.

• **ವಾಣಿಜ್ಯ ಸಚಿವರಿಗೆ ಪ್ರಧಾನಿ ಛೀಮಾರಿ ವಿರುದ್ಧ ತೀವ್ರ ಪ್ರತಿಭಟನೆ**

ನವದೆಹಲಿ, ಆ. 28– ಆಮದು ಲೈಸೆನ್ಸ್ ನೀಡಿಕೆಗೆ ಶಿಫಾರಸು ಮಾಡಿದರೆನ್ನಲಾದ ಸಂಸತ್ ಸದಸ್ಯರ ಹೆಸರನ್ನು ಸಭೆಗೆ ತಿಳಿಸಿದ ವಾಣಿಜ್ಯ ಮಂತ್ರಿ ಡಿ.ಪಿ.ಚಟ್ಟೋಪಾಧ್ಯಾಯ ಅವರನ್ನು ಪ್ರಧಾನಿ ಖಂಡಿಸಿದರೆಂಬ ವರದಿ ಬಗ್ಗೆ ರಾಜ್ಯಸಭೆಯ ವಿರೋಧ ಪಕ್ಷದ ಸದಸ್ಯರು ತೀವ್ರ ಆಕ್ಷೇಪವೆತ್ತಿದರು.

ಬಿ.ಟಿ. ಆಹಾರ ಬೆಳೆಗಳಿಗೆ ವಿರೋಧ ಹೆಚ್ಚಿದಷ್ಟೂ ಅವನ್ನು ಹೊಲಕ್ಕೆ ನುಗ್ಗಿಸುವ ಹುನ್ನಾರ ಹೆಚ್ಚುತ್ತಿದೆ

ಕುಲಾಂತರಿ ಚರ್ಚೆ ಮತ್ತೆ ಮುನ್ನೆಲೆಗೆ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಹಿಂದಿನ ಗುರುವಾರ ಚಂಡೀಗಢದಲ್ಲಿ 18 ರಾಜ್ಯಗಳ ರೈತ ನೇತಾರರ ಚರ್ಚಾಗೋಷ್ಠಿ ನಡೆಯಿತು. ರೈತರಲ್ಲದ ಕೆಲವು ವಿಜ್ಞಾನಿಗಳು, ರಾಜಕಾರಣಿಗಳು ಮತ್ತು ಕೃಷಿನೀತಿ ತಜ್ಞರೂ ಇದ್ದರು. ಈ ಗೋಷ್ಠಿಯಲ್ಲಿ ಪಾಲ್ಗೊಂಡ ಎಲ್ಲ 90 ಧುರೀಣರು 'ಕುಲಾಂತರಿ ಆಹಾರ ಬೆಳೆಗಳು ನಮಗೆ ಬೇಡ' ಎಂದು ಒಕ್ಕೊರಲಿನಲ್ಲಿ ಘೋಷಿಸಿದರು.

ಈ ಸಂಚಲನಕ್ಕೆ ಕಾರಣ ಏನೆಂದರೆ, ಕುಲಾಂತರಿ ಬೆಳೆಗಳ ಕುರಿತಂತೆ ಸುಪ್ರೀಂ ಕೋರ್ಟ್ ಈಚೆಗೆ ಕೇಂದ್ರ ಸರ್ಕಾರಕ್ಕೆ ಒಂದು ಮಹತ್ವದ ಆದೇಶವನ್ನು ನೀಡಿದೆ. ಬಿ.ಟಿ. ಹತ್ತಿ, ಬಿ.ಟಿ. ಬದನೆ, ಬಿ.ಟಿ. ಭತ್ತ, ಬಿ.ಟಿ. ಸಾಸಿವೆ ಹೀಗೆ ಬಿಡಿಬಿಡಿ ಫಸಲನ್ನು ರೈತರ ಹೊಲಕ್ಕೆ ಇಳಿಸಲು ಯತ್ನ ನಡೆಯುತ್ತಿದ್ದು, ರೈತ ಪ್ರತಿನಿಧಿಗಳು ಮತ್ತೆ ಮತ್ತೆ ನ್ಯಾಯಾಲಯಕ್ಕೆ ಬರುವಂತಾಗಿದೆ. 'ಕುಲಾಂತರಿ ಕುರಿತಂತೆ ನೀವೊಂದು ರಾಷ್ಟ್ರೀಯ ನೀತಿಯನ್ನು ಪ್ರಕಟಿಸಿ– ಇನ್ನು ನಾಲ್ಕು ತಿಂಗಳ ಒಳಗೆ' ಎಂದು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಸಂಜಯ್ ಕರೋಲ್ ಅವರಿದ್ದ ಪೀಠ ಸರ್ಕಾರಕ್ಕೆ ಹೇಳಿದೆ. ಹಾಗೊಂದು ನೀತಿಯನ್ನು ರೂಪಿಸುವ ಮುನ್ನ ರೈತರು, ಬಳಕೆದಾರರು, ವಿಜ್ಞಾನಿಗಳು, ಕೃಷಿ ಕಂಪನಿಗಳು ಹೀಗೆ ಸಂಬಂಧಪಟ್ಟ ಎಲ್ಲರೊಂದಿಗೆ ಸರ್ಕಾರವೇ ಬಹಿರಂಗ ಸಮಾಲೋಚನೆ ಮಾಡಬೇಕು ಎಂತಲೂ ಆದೇಶಿಸಿದೆ. ಸರ್ಕಾರ ಅದೇನೋ ಮಸಲತ್ತು ಮಾಡಿ ತನಗೆ ಬೇಕೆಂಬಂತೆ ಕುಲಾಂತರಿ ನೀತಿಯನ್ನು ರೂಪಿಸೀತೆಂಬ ಶಂಕೆ ಎದ್ದಿದ್ದರಿಂದ ಚಂಡೀಗಢ ಸಮಾವೇಶ ಏರ್ಪಾಟಾಗಿತ್ತು.

ಬಿ.ಟಿ. (ಕುಲಾಂತರಿ) ಹತ್ತಿಯಂತೂ ಇಡೀ ದೇಶವನ್ನು ಆಕ್ರಮಿಸಿದೆ. ಸ್ಥಳೀಯ ಹತ್ತಿ ತಳಿಗಳೆಲ್ಲ ನಾಮಾವಶೇಷ ಆಗಿವೆ. ಆಹಾರ ಬೆಳೆಗಳಲ್ಲಿ ಕುಲಾಂತರಿ ತಳಿಗಳನ್ನು 'ತರಲೇಕೂಡದು' ಎಂದು ನಮ್ಮ ದೇಶದ ರೈತಪರ ಸಂಘಟನೆಗಳು ತಡೆ ಒಡ್ಡುತ್ತಲೇ ಬಂದಿವೆ. ಅತ್ತ ಹೇಗಾದರೂ ಮಾಡಿ ಕುಲಾಂತರಿ ಆಹಾರ ಬೆಳೆಗಳನ್ನು ನುಗ್ಗಿಸಿಯೇ ಸಿದ್ಧ ಎಂಬಂತೆ ವಾಣಿಜ್ಯ ಕಂಪನಿಗಳು ಯತ್ನಿಸುತ್ತಲೇ ಇವೆ. ಹಿಂದೆ ಕುಲಾಂತರಿ ಬದನೆಯನ್ನು ಹೊಲಕ್ಕಿಳಿಸಲು ಮಾನ್ಸಾಂಟೊ ಕಂಪನಿ ಇನ್ನಿಲ್ಲದ ಪ್ರಯತ್ನವನ್ನು ನಡೆಸಿತ್ತು. ಜನಪರ ಧೋರಣೆಯಿದ್ದ ಅಂದಿನ ಪರಿಸರ ಸಚಿವ ಜಯರಾಂ ರಮೇಶ್, 2010ರಲ್ಲಿ ನಮ್ಮ ದೇಶದ ಏಳು ನಗರಗಳಲ್ಲಿ ಜನಸಮಾಲೋಚನೆ ನಡೆಸಿದ್ದರು. ಬೆಂಗಳೂರಿನ ಸಮಾವೇಶದಲ್ಲಿ ಎಚ್.ಡಿ. ದೇವೇಗೌಡ, ಯು.ಆರ್. ಅನಂತಮೂರ್ತಿ ಆದಿಯಾಗಿ ಕುಲಾಂತರಿ ಬೇಡವೆಂದು ವಾದಿಸಿ, ಸಚಿವರಿಗೆ ನಮ್ಮ ನಾಡಿನ ವೈವಿಧ್ಯಮಯ ಬದನೆಗಳನ್ನು ಉಡುಗೊರೆ ನೀಡಿದ್ದರು. ಆ ಏಳೂ ಸಭೆಗಳ ಅಭಿಪ್ರಾಯವನ್ನು ಸೇರಿಸಿ ಕೇಂದ್ರ ಸರ್ಕಾರ 'ಮುನ್ನೆಚ್ಚರಿಕೆಯ ತತ್ವದ ಮೇಲೆ' ಕುಲಾಂತರಿ ಆಹಾರ ಬೆಳೆಗಳನ್ನು ಹೊಲಕ್ಕಿಳಿಸುವುದನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಿತು. ಬಿ.ಟಿ. ಆಹಾರಬೆಳೆಗಳ ಮೇಲೆ ಸಂಪೂರ್ಣ ಅಧ್ಯಯನ ನಡೆಯಬೇಕೆಂದು ನಿರ್ಧರಿಸಿತ್ತು.

2005- 15ರ ಅವಧಿಯಲ್ಲಿ ಕುಲಾಂತರಿ (ಬಿ.ಟಿ.) ತಂತ್ರಜ್ಞಾನ ವಿದೇಶಗಳಲ್ಲಿ ಭರ್ಜರಿ ವಿಜೃಂಭಿಸಿದ್ದಂತೂ ಹೌದು. ಹತ್ತಿ, ಮೆಕ್ಕೆಜೋಳ, ಸೋಯಾ, ರೇಪ್‌ಸೀಡ್, ಕನೋಲಾ... ಹತ್ತಿಯಂತೂ ಅಮೆರಿಕ, ಬ್ರಝಿಲ್, ಅರ್ಜೆಂಟಿನಾ, ಚೀನಾ, ಆಸ್ಟ್ರೇಲಿಯಾಕ್ಕೂ ಹೋಯಿತು. ನಂತರ ಬಿ.ಟಿ. ಬೆಳೆಗಳ ಅನಪೇಕ್ಷಿತ ಮುಖಗಳು ಗೋಚರ ಆಗುತ್ತ ಹೋದ ಹಾಗೆ, ಎಲ್ಲೆಡೆ ಉತ್ಸಾಹ ಇಳಿಯುತ್ತಿದೆ. ಕಳೆದ ವರ್ಷದ ಸಮೀಕ್ಷೆಯ ಪ್ರಕಾರ ಜಗತ್ತಿನ ಒಟ್ಟೂ 468 ಕೋಟಿ ಹೆಕ್ಟೇರ್ ಕೃಷಿಭೂಮಿಯಲ್ಲಿ ಬರೀ 21 ಕೋಟಿ ಹೆಕ್ಟೇರ್‌ನಲ್ಲಿ ಅಂದರೆ (ಶೇ 4ರಷ್ಟು ಭೂಮಿಯಲ್ಲಿ ಮಾತ್ರ) ಕುಲಾಂತರಿ ಫಸಲು ಬೆಳೆಯುತ್ತಿದೆ. ಅದೂ ಬರೀ ಐದು ದೇಶಗಳಲ್ಲಿ ಔದ್ಯಮಿಕ ಕೃಷಿಯಾಗಿ ಅದು ಸೀಮಿತಗೊಂಡಿದೆ.

ಈ ಮಧ್ಯೆ 'ಮಾನ್ಸಾಂಟೊ' ತನ್ನನ್ನು ತಾನೇ 'ಬಾಯರ್' ಎಂಬ ಬಹುರಾಷ್ಟ್ರೀಯ ಕಂಪನಿಗೆ ಮಾರಿಕೊಂಡಿತು. ಕೃಷಿ ಸಾಮಗ್ರಿಗಳನ್ನು ಒದಗಿಸುತ್ತಿರುವ ಬಾಯರ್ ಕಂಪನಿ ಇತ್ತೀಚೆಗೆ ಭಾರತ ಸರ್ಕಾರದ ಕೃಷಿ ಸಂಶೋಧನಾ ಮಂಡಳಿಯೊಂದಿಗೆ ಕೈಜೋಡಿಸಿದೆ. ಹತ್ತು ವರ್ಷಗಳ ಹಿಂದೆಯೇ ಅದು ತನ್ನ ಬಿ.ಟಿ. ತಂತ್ರಜ್ಞಾನದ ಒಂದು ತುಣುಕನ್ನು ದಿಲ್ಲಿ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಡಾ. ದೀಪಕ್ ಪೆಂತಾಲ್ ಅವರಿಗೆ ನೀಡಿ, ಕುಲಾಂತರಿ ಸಾಸಿವೆ ತಳಿಯನ್ನು ಸೃಷ್ಟಿಸಲು ನೆರವು ನೀಡಿತು. ಅವರು ಅದನ್ನು ಸೃಷ್ಟಿಸಿ, ರೈತರಿಗೆ ಬಿಡುಗಡೆ ಮಾಡಲು ಸರ್ಕಾರದ ಅನುಮತಿಗೆ ಯತ್ನಿಸುತ್ತಿದ್ದಾರೆ. ಈ ಸಸ್ಯದ ಇಳುವರಿಯೇನೂ ಭಾರೀ ಇಲ್ಲ, ಅದಕ್ಕಿಂತ ಹೆಚ್ಚು ಫಸಲು ನೀಡುವ ಹೈಬ್ರಿಡ್ ಸಾಸಿವೆಯನ್ನು ರೈತರು ಬೆಳೆಯುತ್ತಿದ್ದಾರೆ. ಆದರೆ ಈ ಹೊಸದೊಂದು ಗುಣ ಇದೆ. ಕುಲಾಂತರಿ ಸಾಸಿವೆ ಹೊಲದಲ್ಲಿ ಮೇಲೆ ನೀವೆಷ್ಟೇ ಕಳೆನಾಶಕವನ್ನು ಎರಚಿದರೂ ಸಾಸಿವೆ ಸಸ್ಯ ಮಾತ್ರ ಸಾಯುವುದಿಲ್ಲ. ಸಾಸಿವೆಯ ಬುಡದಲ್ಲಿನ ಕಳೆಗಳೆಲ್ಲ ಸುಟ್ಟುಹೋಗುತ್ತವೆ. ಹಾಗೆ ಸುರಿದ ಕಳೆನಾಶಕದಿಂದ ಚಿಟ್ಟೆ, ದುಂಬಿ, ಜೇನ್ನೊಣ, ಎರೆಹುಳುಗಳ ಮೇಲೆ ಪರಿಣಾಮ ಏನೆಂದು ವಿಜ್ಞಾನಿಗಳೂ ನೋಡಿಲ್ಲ. ಅಂಥ ಸಾಸಿವೆ ಮನುಷ್ಯರ ಆರೋಗ್ಯಕ್ಕೆ ಏನು ಮಾಡೀತೆಂಬುದೂ ಗೊತ್ತಿಲ್ಲ. ಆದರೆ ಕಳೆ ಕೀಳಲು ಬರುತ್ತಿದ್ದ ಹಳ್ಳಿಯ ಹೆಣ್ಣುಮಕ್ಕಳಿಗೆ ಕೆಲಸವಿಲ್ಲದಂತಾಗುತ್ತದೆ. ಹಾಗೆ ಉಳಿಸಿದ ಹಣವೆಲ್ಲ ಹೊಸತಳಿಯ ಬೀಜ ತಯಾರಿಸುವ ಕಂಪನಿಗಳಿಗೆ ಹೋಗುತ್ತದೆ.



ಕುಲಾಂತರಿ ಸಾಸಿವೆಯನ್ನು ಹೊಲಕ್ಕಿಳಿಸಿದರೆ ಕಂಪನಿಗಳಿಗೆ ಭಾರೀ ಲಾಭವೇನೂ ಬರಲಿಕ್ಕಿಲ್ಲ. ಅಸಲೀ ವಿಚಾರ ಏನೆಂದರೆ, ಕುಲಾಂತರಿ ಸಾಸಿವೆಯ ನೆಪದಲ್ಲಿ ಆಹಾರ ಬೆಳೆಗೆ ಅನುಮತಿ ಸಿಕ್ಕರೆ ಬಿ.ಟಿ. ಬದನೆ, ಬಿ.ಟಿ. ಬೆಂಡೆ, ಟೊಮೆಟೊ, ಬಟಾಟೆ, ಮೆಣಸು, ಸೌತೆ, ಅವರೆ, ಭತ್ತ ಎಲ್ಲಕ್ಕೂ ರಹದಾರಿ ಸಿಕ್ಕಂತಾಗುತ್ತದೆ. ನಮ್ಮ ದೇಶದ ತಳಿವೈವಿಧ್ಯ ಕಡಿಮೆ ಆಗುತ್ತದೆ. ವಿಷನಿರೋಧಕ ಕಳೆಗಳು ಹೆಚ್ಚುತ್ತವೆ. ಬೀಜಸ್ವಾತಂತ್ರ್ಯ ರೈತರ ಕೈತಪ್ಪುತ್ತದೆ. ಕಂಪನಿಗಳ ಲಾಭದ ಮೊತ್ತ ಏರುತ್ತದೆ. ಸಾವಯವ ಬಾಸ್ಮತಿ, ಶುಂಠಿ, ಅರಿಸಿನವನ್ನು ವಿದೇಶಗಳಿಗೆ ರಫ್ತು ಮಾಡುವವರ ವಹಿವಾಟು ಕುಸಿಯುತ್ತದೆ. ಇದು ಚಂಡೀಗಢದ ಸಮಾವೇಶದಲ್ಲಿ ವ್ಯಕ್ತವಾದ ಅಭಿಪ್ರಾಯ.

ಬಿ.ಟಿ. ಹತ್ತಿಯ ಸಹವಾಸ ಸಾಕೆಂದು ಕೈಬಿಟ್ಟ ಈಜಿಪ್ಟ್, ಟರ್ಕಿ, ಪೆರು ಈಗ ಸಹಜ ಹತ್ತಿಯಿಂದಲೇ (ಭಾರತಕ್ಕಿಂತ) ಇಮ್ಮಡಿ ಫಸಲು ತೆಗೆಯುತ್ತಿವೆ. ಪ್ರಮುಖ 13 ರಾಷ್ಟ್ರಗಳು ಕುಲಾಂತರಿ ಬೆಳೆಗಳಿಗೆ ವಿದಾಯ ಹೇಳಿವೆ. ಜಪಾನಿನಲ್ಲಿ ಬಿ.ಟಿ. ಬೆಳೆ ಬೆಳೆಯುವಂತಿಲ್ಲ. ಫಿಲಿಪ್ಪೀನ್ಸ್ ನ್ಯಾಯಾಲಯ ಈಚೆಗಷ್ಟೇ ಬಿ.ಟಿ. ಬದನೆ ಮತ್ತು ಬಿ.ಟಿ. ಭತ್ತಕ್ಕೆ ನಿಷೇಧ ಹಾಕಿದೆ. ನಮ್ಮಲ್ಲಿ ಸರ್ಕಾರಿ ದಾಖಲೆಗಳ ಪ್ರಕಾರವೇ ಬಿ.ಟಿ. ಹತ್ತಿಗೆ ಎಲ್ಲೆಲ್ಲೂ ಸೋಲಾಗುತ್ತಿದೆ. ಕೀಟಬಾಧೆ ಹಿಂದಿಗಿಂತ ಹೆಚ್ಚಾಗಿದೆ. ರೈತರು ಸೋಲುತ್ತಿದ್ದಾರೆ.

ವಿಶೇಷ ಏನೆಂದರೆ, ಕುಲಾಂತರಿ ಬೆಳೆಗಳಿಗೆ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳೂ ವಿರೋಧ ವ್ಯಕ್ತಪಡಿಸಿವೆ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕದಲ್ಲಿ ಅವನ್ನು ನಿಷೇಧಿಸಿದ್ದರು. ಆರ್‌ಎಸ್‌ಎಸ್ ಹಿನ್ನೆಲೆಯ ಭಾರತೀಯ ಕಿಸಾನ್ ಸಂಘ ಮೊದಲಿನಿಂದಲೂ ಅದನ್ನು ವಿರೋಧಿಸುತ್ತ ಬಂದಿದೆ. ಕಾಂಗ್ರೆಸ್ ಆಡಳಿತವಿದ್ದ ರಾಜ್ಯಗಳೂ ವಿರೋಧಿಸಿವೆ. ಬಿಹಾರದಿಂದ ಆಯ್ಕೆಯಾದ ಸಿಪಿಎಂ ಸಂಸದ ರಾಜಾರಾಂ ಸಿಂಗ್ ಮೊನ್ನೆ ಚಂಡೀಗಢದ ಘೋಷಣೆಗೆ ದನಿಗೂಡಿಸಿದ್ದಾರೆ. ಅಧ್ಯಾತ್ಮ ಪೀಠದವರೂ ಅದನ್ನೇ ಹೇಳುತ್ತಾರೆ. 'ಮನುಷ್ಯನ ದೀರ್ಘ ಭವಿಷ್ಯದ ಬಗ್ಗೆ ವಾಣಿಜ್ಯ ಶಕ್ತಿಗಳಿಗೆ ಕಾಳಜಿ ಇಲ್ಲವೇ ಇಲ್ಲ. ಕುಲಾಂತರಿಗಳಿಗೆ ನಮ್ಮಲ್ಲಿ ಪ್ರವೇಶ ಕೊಡಲೇಬಾರದಿತ್ತು' ಎಂದು ಸದ್ಗುರು ಜಗ್ಗಿ ವಾಸುದೇವ್ ಎಂದೋ ಹೇಳಿದ್ದಾರೆ.

ಕುಲಾಂತರಿ ಬೇಡವೆನ್ನಲು ಇಷ್ಟೊಂದು ಅಂಶ ಇರುವಾಗ ಕೇಂದ್ರ ಸರ್ಕಾರ ಮತ್ತೆ ರಾಷ್ಟ್ರೀಯ ಜನಸಂವಾದವನ್ನು ನಡೆಸುವ ಅಗತ್ಯವಿದೆಯೆ? ಸರ್ಕಾರಿ ನೀತಿ, ನಿಲುವು ಕುಲಾಂತರಿಯ ಪರವಾಗಿ ಹೊಮ್ಮುವ ಸಾಧ್ಯತೆಯಿದೆಯೆ? ಹಾಗೂ ಆಗಬಹುದು. ಏಕೆಂದರೆ ಜನಸಾಮಾನ್ಯರಿಗೆ ತಲುಪಿದ ಮಾಹಿತಿಗಳು ಅಧಿಕಾರ ವರ್ಗಕ್ಕೆ, ಸಚಿವರಿಗೆ, ಸಂಸದರಿಗೆ, ನೀತಿ ನಿರೂಪಕರಿಗೂ ತಲುಪುತ್ತವೆ ಎನ್ನುವಂತಿಲ್ಲ. ಅವರೆಲ್ಲರಿಗೆ ಪಾಠ ಹೇಳುವ 'ತಜ್ಞರು' ಬೇರೆಯೇ ಇರುತ್ತಾರೆ. ಅವರ ಪಾಠದ ಮನೆಗಳೂ ಮನವೊಲಿಕೆ ತಂತ್ರಗಳೂ ಬೇರೆಯೇ ಇರುತ್ತವೆ. ಹಿಂದೆ ಬಿ.ಟಿ. ಬದನೆಯ ವಿರುದ್ಧ ಜನಾಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದ ಅರಣ್ಯ/ಪರಿಸರ ಸಚಿವ ಜಯರಾಂ ರಮೇಶ್ ಅವರ ಖಾತೆಯನ್ನೇ ಬದಲಿಸಿ ಗ್ರಾಮೀಣಾಭಿವೃದ್ಧಿ ಖಾತೆ ನೀಡಲಾಯಿತು. ಹೈಟೆಕ್ ತಂತ್ರಜ್ಞಾನಕ್ಕೆ, ತಂತ್ರಕ್ಕೆ ಅಷ್ಟೊಂದು ಪವರ್ ಇರುತ್ತದೆ. ಪ್ರಜಾಪ್ರಭುತ್ವದ ಈ ಮಗ್ಗುಲುಗಳನ್ನೂ ಜನರಿಗೆ ಮತ್ತೆಮತ್ತೆ ನೆನಪಿಸುತ್ತಿರಬೇಕಿದೆ. ಅದಕ್ಕಾಗಿ ಒಂದು ಸಂವಾದ ಬೇಕಿದೆ.

ಚುರುಮುರಿ



ವೈಟ್ನರ್ ಕಂಪನಿ!

• ತುರುವೇಕೆರೆ ಪ್ರಸಾದ್

'ಏನ್ಲಾ ವೊತ್ತು ಉಟ್ಟೋಕೆ ಮುಂಚೆ ಬಾ ಅಂತ ಕರ್ದಿದ್ದು? ನಿಂಗಂತೂ ಕ್ಯಾಮೆ ಇಲ್ಲ, ನಮ್ಗೂ ಇಲ್ಲ ಅಂದ್ಕಂಡ್ಯೇನು?' ರೇಗಿದ ಮಾಲಿಂಗ.

'ಕ್ಯಾಮೆ ಇಲ್ಲ ಅಂತಾನೆ ಒಸ ಕಸುಬು ಉಡ್ಕಿದ್ವಿ. ವೈಟ್ನರ್ ಕಂಪ್ನಿ ಓಪನ್ ಮಾಡವಾ ಅಂದ್ಕಂಡಿದ್ವಿ. ನೀವೂ ಜೊತೆಗೆ ತಗಲಾಕ್ಕತೀರಾ ಅಂತ ಕೇಳೋಕೆ ಕರ್ದೆ' ಎಂದ ಗುದ್ಲಿಂಗ.

'ವೈಟ್ನರ್ ಕಂಪ್ನಿನಾ? ಏನೇನು ನಿನ್ ಪ್ರಾಡಕ್ಟು?' ಕೇಳಿದ ಕಲ್ಲೇಶಿ.

'ಈ ಕಾಗ್ದ, ಪತ್ರದ ಸಾಲುಗಳನ್ನ ಇನ್ನೂ ಪಸಂದಾಗಿ ಯಾರ್ಗೂ ಸುಳಿವು ಸಿಗ್ದಂಗೆ ಅಳ್ಸೋ ವೈಟ್ನರ್ ಪೆನ್ನು, ರೀಫಿಲ್ಲು, ಗುಳುಂ ಲೆಕ್ಕದ ಖಾತೆಯಲ್ಲಿ ಇಡೀ ಪೇಜಿಗೇ ವೈಟ್ನರ್ ಬಳ್ದು ಹರೋಹರ ಅನ್ನೋ ಕಡ್ಡಿ ಬ್ರಶ್ಯು ಇವನ್ನೆಲ್ಲಾ ಮಾರಾದು'.

'ಅಂಗೇ ಅದ್ರಲ್ಲಿ ಜೂನಿಯರ್ ಮಾಡ್ಲೂ ಬಿಡಪ್ಪ, ಮಕ್ಕಳಿಗೆ ಈಗಿಂದನೇ ಕಾಪಿ ಪುಸ್ತಕದಾಗೆ ವೈಟ್ನರ್ ಬಳ್ಯೋದ ಹೇಳ್ಕೊಟ್ರೆ ಒಳ್ಳೇದು'.

'ಹೆಂಡ್ರು ಮಗುಚುಕಾಯ್ ಎಸ್ದು ಮೂತಿನಾಗೆ ಬ್ಲಾಕ್ ಮಾರ್ಕ್ ಆದ್ರೆ ತಕ್ಷಣಕ್ಕೆ ಆಕ್ಕಳಕ್ಕೆ ಒಂದು ಪಾಕೆಟ್ ಫೇಸ್ ವೈಟ್ನರ್ ಬ್ರಾಂಡ್ ಮಾಡು'.

'ಊ ಅದ್ನೂ ಮಾಡವಾ. ಆಮ್ಯಾಕೆ ಈ ತಂಗುದಾಣ, ವಾಟ್ರು ಟ್ಯಾಂಕು, ಸೇತುವೆ ಮ್ಯಾಗೆ ನಮ್ ನಾಯಕ ಸಿರೋಮಣಿಗಳು ಇಂತ ವರ್ಷ ಕಟ್ಸಿಕೊಟ್ಟವ್ರು ಅಂತ ಬರ್ದಿರ್ತಾರಲ್ಲ, ಅದನ್ನ ಅಳ್ಸಿ ತಿದ್ದಕ್ಕೆ ಬ್ರಶ್ಯು, ಆಯಿಲ್ ವೈಟ್ನರ್ ಮಾಡಾದು'.

'ಈ ಗೇಟು, ಬಾಗ್ಲು, ಎಂಟ್ರೆನ್ಸು ಅಂತ ಏನೇನೋ ಪರೀಕ್ಷೆ ಇದಾವಲ್ಲ, ಅವುಗಳ ಆನ್ಸರ್ ಶೀಟಿಗೆ ಬಳಿಯಕ್ಕೆ ಸ್ಪೆಶಲ್ ವೈಟ್ನರ್ ಮಾಡ್ಬೇಕು'.

'ವೂ ಕಣ್ಲಾ, ಅಂಗೇ ಈ ಚಳುವಳಿಕಾರರು ಅವರಿವರಿಗೆ ಮಸಿ ಬಳಿತಿರ್ತಾರಲ್ಲ, ಅದನ್ನ ಅಳ್ಸಕ್ಕೆ ಒಂದು ಇನ್‌ಸ್ಟಾಂಟ್ ವೈಟ್ನರ್ ಮಾಡುದ್ರಂತೂ ಸಕತ್ ಕಾಸು ಗೆಬರ್ಕಬಹುದು'.

'ಇಷ್ಟೇ ಸಾಕಾಗಲ್ಲ ಕಣ್ರೋ... ವೈಟ್ನರ್ ಡ್ರಮ್‌ಗಳನ್ನೇ ತಯಾರಿಸ್ಬೇಕು'.

'ಅಷ್ಟೊಂದು ಎಲ್ಲಿಗೆ ಹಾಕ್ತೀಯ?'

'ನಮ್ ಜೈಲಂತ ಬಿಲ್ಡಿಂಗ್‌ಗಳು, ವ್ಯವಸ್ಥೆ ಪೂರಾ ಗಬ್ಬೆದ್ದು ಕಪ್ಪಿಟ್ಟುಹೋಗಿವೆ. ಅವಕ್ಕೆ ಎಷ್ಟು ಬ್ಯಾರಲ್ ವೈಟ್ನರ್ ಹಚ್ಚುದ್ರೂ ಮಸಿ ಮುಚ್ಚಕ್ಕಾಗಲ್ಲ' ಎಂದ ಪರ್ಮೇಶಿ.

ಎಲ್ಲಾ ಹೌದೌದು ಎಂದು ತಲೆಯಾಡಿಸಿದರು.

ಸಂಗತ

ಕನಸು ಬಿಕರಿಗಿದೆ... ಕೊಳ್ಳಲು ಮುಗಿಬಿದ್ದಿದ್ದಾರೆ!

ಮಕ್ಕಳ ಓದಿನ ಬಗ್ಗೆ ಪೋಷಕರಿಗೆ ಇರುವ ಸಹಜ ಬಯಕೆಯನ್ನೇ ಬಂಡವಾಳ ಮಾಡಿಕೊಂಡಿರುವ ಕೋಚಿಂಗ್ ಸೆಂಟರ್, ಭವಿಷ್ಯದ ಕನಸುಗಳನ್ನು ಮಾರಾಟಕ್ಕಿಡುತ್ತಾ ಲಾಭದಾಯಕ ಉದ್ಯಮವಾಗಿದೆ

• ಡಾ. ಕೆ.ಎಸ್.ಚೈತ್ರಾ

ದಾರಿಯಲ್ಲಿ ಸಿಕ್ಕ ಪರಿಚಿತರೊಬ್ಬರು 'ಬೆಳಿಗ್ಗೆ ಆರೂವರೆಗೆ ಮಗನನ್ನು ಜೆಇಇ ಕೋಚಿಂಗ್ ಸೆಂಟರ್‌ಗೆ ಡ್ರಾಪ್ ಮಾಡಬೇಕು' ಎಂದರು. ಹೈಸ್ಕೂಲ್ ಓದುವ ಹುಡುಗನಿಗೆ ಈಗೇಕೆ ಆ ಕೋಚಿಂಗ್ ಎಂದು ಪ್ರಶ್ನಿಸಿದೆ. 'ಅಯ್ಯೋ! ಆರನೇ ತರಗತಿಯಿಂದಲೇ ಈ ಎಲ್ಲಾ ಕೋಚಿಂಗ್ ಶುರುವಾಗುತ್ತದೆ. ಈ ಸಲವಂತೂ ನೀಟ್ ಪರೀಕ್ಷೆಯಲ್ಲಿ ಕಟ್‌ಆಫ್ ಹೆಚ್ಚಾಗಿದೆ. ಹಾಗಾಗಿ ಮತ್ತೂ ಕಷ್ಟಪಡಬೇಕು' ಎಂದರು. ಅದಕ್ಕೆ ಸರಿಯಾಗಿ ಈಗಷ್ಟೇ ಮೆಡಿಕಲ್, ಎಂಜಿನಿಯರಿಂಗ್ ಸೀಟು ಹಂಚಿಕೆಯ ಪ್ರಕ್ರಿಯೆ ಆರಂಭವಾಗಿದ್ದರೂ ಕೋಚಿಂಗ್ ಸೆಂಟರ್‌ಗಳ ಪ್ರವೇಶ ಪ್ರಕ್ರಿಯೆ ಮುಗಿದು ಮುಂದಿನ ವರ್ಷಕ್ಕೆ ಭರದಿಂದ ತಯಾರಿ ನಡೆದಿದೆ!

ಕೆಲ ವರ್ಷಗಳ ಹಿಂದೆ ಹತ್ತು-ಹನ್ನೆರಡನೇ ತರಗತಿಯಲ್ಲಿ, ಶೈಕ್ಷಣಿಕವಾಗಿ ದುರ್ಬಲವಾಗಿದ್ದ ವಿದ್ಯಾರ್ಥಿಗಳು ಟ್ಯೂಷನ್‌ಗೆ ಸೇರುವ ಪರಿಪಾಟವಿತ್ತು. ಈಗ ಸ್ಪರ್ಧಾತ್ಮಕ ಪರೀಕ್ಷೆಗಳಾದ ಜೆಇಇ, ನೀಟ್ ಮತ್ತು ನಾಗರಿಕ ಸೇವಾ ಪರೀಕ್ಷೆಗಳಿಗೆ ಎಲ್ಲಿಲ್ಲದ ಮಹತ್ವ. ಈ ಪರೀಕ್ಷೆಗಳಲ್ಲಿ ಪಠ್ಯಕ್ರಮದ ಆಳವಾದ ಅಧ್ಯಯನ ಮಾತ್ರವಲ್ಲ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಲು ನಿಖರತೆ, ವೇಗ ಮತ್ತು ಸಮಯ ನಿರ್ವಹಣೆ ಅಗತ್ಯ. ಶಾಲಾ ಕಾಲೇಜುಗಳ ಸೀಮಿತ ಅವಧಿಯಲ್ಲಿ ಇವೆಲ್ಲವನ್ನೂ ಪ್ರತಿ ವಿದ್ಯಾರ್ಥಿಗೂ ಕಲಿಸುವುದು ಶಿಕ್ಷಕರಿಗೆ ಕಷ್ಟಸಾಧ್ಯ. ಹಾಗಾಗಿ ಮೂಲ ಪಠ್ಯಕ್ರಮವನ್ನು ಕಾಲೇಜಿನಲ್ಲಿ ಕಲಿತರೂ ಈ ಎಲ್ಲ ಹೆಚ್ಚಿನ ತರಬೇತಿಯನ್ನು ನೀಡಿ ಆ ಮೂಲಕ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸುವ ಉದ್ದೇಶದಿಂದ ಹುಟ್ಟಿಕೊಂಡಿದ್ದು ಕೋಚಿಂಗ್ ಸೆಂಟರ್‌ಗಳು.

ಆದರೆ ಕಾಲ ಕಳೆದಂತೆ ಈ ಸೆಂಟರ್‌ಗಳು ಸೀಟು ಗಳಿಕೆಯನ್ನೇ ಗುರಿಯಾಗಿಟ್ಟುಕೊಂಡ ಫ್ಯಾಕ್ಟರಿಗಳಾಗಿವೆ. ತಮ್ಮ ಮಗು ಚೆನ್ನಾಗಿ ಓದಲು ಎಲ್ಲ ರೀತಿಯ ಅನುಕೂಲ ಮಾಡಿಕೊಡಬೇಕು ಎಂಬ ಪೋಷಕರ ಸಹಜ ಬಯಕೆಯನ್ನೇ ಬಂಡವಾಳ ಮಾಡಿಕೊಂಡ ಕೋಚಿಂಗ್ ಸೆಂಟರ್‌ಗಳು ಭವಿಷ್ಯದ ಕನಸುಗಳನ್ನು ಮಾರಾಟಕ್ಕಿಡುತ್ತಿವೆ. ಅವನ್ನು ಕೊಂಡುಕೊಳ್ಳಲು ಪೋಷಕರು ಎಷ್ಟೇ ಖರ್ಚಾದರೂ ಪರವಾಗಿಲ್ಲ ಎಂದು ಇವುಗಳಿಗೆ ಸೇರಿಸುತ್ತಾರೆ. ಹೀಗಾಗಿ ಕೋಚಿಂಗ್ ಸೆಂಟರ್ ಈಗ ಲಾಭದಾಯಕ ಉದ್ಯಮವಾಗಿದೆ. ಈಗಂತೂ ಈ ರೀತಿಯ ಕೋಚಿಂಗ್ ಸೆಂಟರ್‌ಗಳಿಗೆ ಸೇರಿಸುವುದು ಸಮಾಜದಲ್ಲಿ ಪ್ರತಿಷ್ಠೆಯ ಸಂಕೇತವೂ ಹೌದು. ಎಲ್ಲಿ ನೋಡಿದರೂ ಜಾಹೀರಾತು, ಮಾಧ್ಯಮಗಳಲ್ಲಿ ಯಶಸ್ಸಿನ ಕಥೆಗಳು, ಭರ್ಜರಿ ಪ್ರಚಾರದಿಂದ ವಿದ್ಯಾರ್ಥಿಗಳು ಇವುಗಳಿಗೆ ಮುಗಿಬೀಳುತ್ತಿದ್ದಾರೆ. ವಿಧಿಸುವ ಶುಲ್ಕ ದಿನೇ ದಿನೇ ಹೆಚ್ಚುತ್ತಿದೆ.

ಕೋಚಿಂಗ್ ಸೆಂಟರ್‌ಗಳಲ್ಲಿ ಪರೀಕ್ಷೆಯ ದೃಷ್ಟಿಯಿಂದ ಅನುಕೂಲವಾಗುವ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಸತತವಾಗಿ ನೂರಾರು ಪ್ರಶ್ನೆಪತ್ರಿಕೆಗಳನ್ನು ಬಿಡಿಸಿ ಅದನ್ನು ನೆನಪಿನಲ್ಲಿಟ್ಟು ಮತ್ತೆ ಬರೆಯುವ ವಿಧಾನಕ್ಕೆ ಪ್ರಾಶಸ್ತ್ಯ. ಇದರಿಂದ ವಿದ್ಯಾರ್ಥಿಗಳು ಏನಿದ್ದರೂ ಓದಿದ್ದನ್ನು ನೆನಪಿನಲ್ಲಿಟ್ಟು ಯಾಂತ್ರಿಕವಾಗಿ ಬರೆಯುವುದರಲ್ಲಿ ಮಾತ್ರ ತರಬೇತಿ ಪಡೆಯುತ್ತಾರೆ. ಸತತವಾಗಿ ನಾಲ್ಕೈದು ವರ್ಷಗಳಿಗೂ ಮೀರಿ ಈ ರೀತಿಯ ಶಿಕ್ಷಣ ಪಡೆಯುವುದರಿಂದ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ, ವಿಷಯ ಜ್ಞಾನ ಇವೆಲ್ಲವೂ ಕುಂಠಿತವಾಗುತ್ತವೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಪ್ರತಿ ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ನಿರ್ದಿಷ್ಟ ಕಲಿಕೆಗೆ ಅವುಗಳಿಂದ ಹೆಚ್ಚಿನ ಸಹಾಯ ಸಿಗುತ್ತಿಲ್ಲ. ಒಟ್ಟಿನಲ್ಲಿ ಶಿಕ್ಷಣದ ಗುಣಮಟ್ಟ ಕುಸಿದಿದೆ. ಗಳಿಸುವ ಅಂಕದಲ್ಲಿ ಹೆಚ್ಚಳ ಕಂಡುಬಂದರೂ ಸೀಟುಗಳು ಸಿಗುತ್ತಿಲ್ಲ. ಕಲಿತಿದ್ದನ್ನು ನಿಜ ಜೀವನದಲ್ಲಿ ಬಳಸುವ ಕೌಶಲ ಮತ್ತು ವಿಷಯ ಜ್ಞಾನವನ್ನು ವಿದ್ಯಾರ್ಥಿಗಳು ಇಂದು ಪಡೆದಿಲ್ಲ. ಪರಿಣಾಮವಾಗಿ, ವೃತ್ತಿ ಜೀವನದಲ್ಲಿ ನಿರೀಕ್ಷಿಸಿದಷ್ಟು ಯಶಸ್ವಿಯಾಗುತ್ತಿಲ್ಲ. ಆದರೂ ಕೋಚಿಂಗ್ ಸೆಂಟರ್‌ಗಳ ಜನಪ್ರಿಯತೆ ಕಡಿಮೆಯಾಗಿಲ್ಲ!



ಎಲ್ಲೆಡೆ ಹರಡಿರುವ ಈ ಕೋಚಿಂಗ್ ಸೆಂಟರ್‌ಗಳಲ್ಲಿ ಪರಸ್ಪರ ಪೈಪೋಟಿಯೂ ತೀವ್ರವಾಗಿದೆ. ಹೆಚ್ಚು ಸೀಟು ಗಳಿಸಲು ಆದಷ್ಟು ಬೇಗ ತರಬೇತಿ, ದಿನಕ್ಕೆ ಹನ್ನೆರಡು ತಾಸು ತರಗತಿ ಎಲ್ಲವೂ ನಡೆಯುತ್ತವೆ. ಅದರೊಂದಿಗೆ ಕನಿಷ್ಠ ಗಾಳಿ, ಬೆಳಕು, ಶೌಚಾಲಯ ವ್ಯವಸ್ಥೆಯೂ ಇಲ್ಲದ ಇಕ್ಕಟ್ಟಾದ ಜಾಗದಲ್ಲಿ ಬೆಳಗಿನಿಂದ ಸಂಜೆಯವರೆಗೆ ವಿದ್ಯಾರ್ಥಿಗಳು ತಮ್ಮ ದಿನದ ಬಹುಭಾಗವನ್ನು ಕಳೆಯುತ್ತಿದ್ದಾರೆ. ಆಟ, ಊಟ, ನಿದ್ದೆಯ ಜೊತೆಗೆ ಇದು ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಆರೋಗ್ಯದ ಮೇಲೂ ಗಂಭೀರ ಪರಿಣಾಮವನ್ನು ಬೀರುತ್ತಿದೆ. ಹೀಗಾಗಿಯೇ ದೆಹಲಿಯಲ್ಲಿ ಇತ್ತೀಚೆಗೆ ಕೋಚಿಂಗ್ ಕೇಂದ್ರದಲ್ಲಿ ನುಗ್ಗಿದ ಪ್ರವಾಹದ ನೀರಿನಲ್ಲಿ ಮೃತಪಟ್ಟ ವಿದ್ಯಾರ್ಥಿಗಳ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 'ಕೋಚಿಂಗ್ ಸೆಂಟರ್‌ಗಳು ಮೃತ್ಯುಕೂಪಗಳಂತಾಗಿವೆ. ವಿದ್ಯಾರ್ಥಿಗಳ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿವೆ' ಎಂದು ಹೇಳಿರುವುದು ಗಮನಾರ್ಹ.

ಕೋಚಿಂಗ್ ಸೆಂಟರ್‌ಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಹಾಯವಾಗಬಹುದು ನಿಜ. ವಿಷಯ ಪರಿಣತರಿಂದ, ಕೈಗೆಟಕುವ ದರದಲ್ಲಿ ಸರ್ಕಾರ ನೀಡಿರುವಂತಹ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಕೋಚಿಂಗ್ ಸೆಂಟರ್ ನಡೆಯಬೇಕು. ಆದರೆ ಅದಕ್ಕಿಂತ ಮೊದಲು ನಮ್ಮ ಶಿಕ್ಷಣ ವ್ಯವಸ್ಥೆ ಇನ್ನಷ್ಟು ಬಲಗೊಳ್ಳಬೇಕು. ವಿಷಯಜ್ಞಾನದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಕ್ರಮದ ಬಗ್ಗೆಯೂ ಮಕ್ಕಳಿಗೆ ತರಬೇತಿ ಸಿಗಬೇಕು. ಹಾಗೆಯೇ ಪ್ರತಿ ವಿದ್ಯಾರ್ಥಿಯ ಆಸಕ್ತಿ, ಸಾಮರ್ಥ್ಯಕ್ಕೆ ಅನುಗುಣವಾಗಿ ತಮ್ಮಿಷ್ಟದ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ನೀಡಬೇಕು. ಏಕೆಂದರೆ ಶಿಕ್ಷಣದ ಗುರಿಯು ಮಗುವಿನ ಸರ್ವಾಂಗೀಣ ಪ್ರಗತಿ ಮತ್ತು ವ್ಯಕ್ತಿತ್ವ ವಿಕಸನವೇ ವಿನಾ ಬರೀ ಅಂಕ-ಸೀಟು ಗಳಿಕೆಯಲ್ಲ!

ವಾಚಕರ ವಾಣಿ

ಸಮಸ್ಯೆಗೆ ಸ್ಥಳಾಂತರ ಪರಿಹಾರವಲ್ಲ

ನಟ ದರ್ಶನ್ ಹಾಗೂ ಇತರ ಕೈದಿಗಳನ್ನು ಒಂದು ಜೈಲಿನಿಂದ ಮತ್ತೊಂದು ಜೈಲಿಗೆ ಸ್ಥಳಾಂತರ ಮಾಡುವುದು ಸೂಕ್ತ ಕ್ರಮವಲ್ಲ. ಇದರಿಂದ ಪೊಲೀಸರ ಮೇಲೆ ಅತಿಯಾದ ಒತ್ತಡ ಬೀಳುತ್ತದೆ. ಸ್ಥಳಾಂತರಿಸುವಾಗಿನ ಪ್ರಯಾಣದ ಒತ್ತಡ, ಖರ್ಚುವೆಚ್ಚದ ಜೊತೆಗೆ ಪೊಲೀಸರು ಅನವಶ್ಯಕವಾಗಿ ಮಾನಸಿಕ, ದೈಹಿಕ ಶ್ರಮ ಅನುಭವಿಸಬೇಕಾಗುತ್ತದೆ. ಆರೋಪಿಗಳನ್ನು ತನಿಖೆಗೆ ಒಳಪಡಿಸುವ ತನಿಖಾಧಿಕಾರಿಗಳಿಗೂ ಇದು ಸಮಸ್ಯೆ ತಂದೊಡ್ಡುತ್ತದೆ. ಹೀಗಾಗಿ, ಯಾವುದೇ ಆರೋಪಿ ಅಥವಾ ಅಪರಾಧಿಯನ್ನು ಸ್ಥಳಾಂತರಿಸುವ ಬದಲು ಎಲ್ಲ ಕಾರಾಗೃಹಗಳಿಗೂ ದಕ್ಷ, ಪ್ರಾಮಾಣಿಕ, ಖಡಕ್ ಅಧಿಕಾರಿಗಳನ್ನು ನೇಮಿಸಿ ಜೈಲುಗಳ ವ್ಯವಸ್ಥೆಯನ್ನು ಸೂಕ್ತವಾಗಿ ನಿರ್ವಹಣೆ ಮಾಡುವುದು ಒಳ್ಳೆಯದು.

ಜೈಲಿನಿಂದ ಜೈಲಿಗೆ ಸ್ಥಳಾಂತರಿಸಿದ ಮಾತ್ರಕ್ಕೆ ಆರೋಪಿಗಳು ಅಥವಾ ಅಪರಾಧಿಗಳ ಕ್ರೌರ್ಯ, ಕುಕೃತ್ಯಗಳಿಗೆ ಕಡಿವಾಣ ಬೀಳುವುದೇ? ಅಕ್ರಮ ಚಟುವಟಿಕೆಗಳಿಗೆ ಆಸ್ಪದ ಇಲ್ಲದಂತೆ ಭದ್ರತೆಯನ್ನು ಬಿಗಿಗೊಳಿಸಬೇಕು.

ಎಂ.ಮಂಚಶೆಟ್ಟಿ, ಕಡಿಲುವಾಗಿಲು, ಮದ್ದೂರು

ಎಂಥಾ ಮಹಿಮೆ?!

ಅಗ್ರಹಾರದ ಪರಪ್ಪಾ...
ಏನಪ್ಪಾ ನಿನ್ನ ಮಹಿಮೆ!
ನಿಂತೆಡೆ, ಕುಂತೆಡೆ ಎಲ್ಲೆಲ್ಲೂ
ನಿನ್ನದೇ ಗುಣಗಾನ,
ನೊಂದವರ ನೋವಿಗೆ
ಇದೇನಾ ನೀ...ನ್ಯಾಯ
ಸಲ್ಲಿಸುವ ವಿಧಾನ!

ಮ.ಗು.ಬಸವಣ್ಣ
ಮೈಸೂರು

ಪ್ರಶ್ನೆಪತ್ರಿಕೆ ರೂಪಿಸಲು ಬಾರದವರು...

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಮಂಗಳವಾರ ನಡೆಸಿದ ಪೂರ್ವಭಾವಿ ಪರೀಕ್ಷೆಯ ಎರಡನೇ ಪತ್ರಿಕೆಯ ಕನ್ನಡ ಅನುವಾದ ತೀರಾ ಕಳಪೆಯಾಗಿತ್ತು. ಕ್ಲಿಷ್ಟಕರ ಪ್ರಶ್ನೆಗಳನ್ನು ಸಿದ್ಧಪಡಿಸುವಲ್ಲಿ ತೋರಿರುವ ಉತ್ಸಾಹ ಭಾಷಾಂತರದಲ್ಲಿ ಕಾಣೆಯಾಗಿದ್ದುದು ದುರದೃಷ್ಟಕರ. ಕೆಪಿಎಸ್‌ಸಿ ಲಾಗಾಯ್ತಿನಿಂದಲೂ ಈ ವಿಷಯದಲ್ಲಿ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಇದರ ನೇರ ಪರಿಣಾಮ ಉಂಟಾಗುವುದು ಕನ್ನಡ ಮಾಧ್ಯಮದ ಗ್ರಾಮೀಣ ವಿದ್ಯಾರ್ಥಿಗಳ ಮೇಲೆ ಎಂಬುದನ್ನು ಅದು ಮರೆತಂತಿದೆ. ಎರಡು ಲಕ್ಷಕ್ಕೂ ಹೆಚ್ಚು ಜನ ಬರೆಯುವ ಪರೀಕ್ಷೆಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಲ್ಲೂ ಆಯೋಗ ಬೇಜವಾಬ್ದಾರಿ ತೋರುವುದು ಅಕ್ಷಮ್ಯ. ಈ ಹಿಂದೆ ಪ್ರಥಮ ದರ್ಜೆ ಸಹಾಯಕ ಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆಯಲ್ಲೂ 15ಕ್ಕೂ ಹೆಚ್ಚು ಪ್ರಶ್ನೆಗಳಿಗೆ ತಪ್ಪು ಉತ್ತರ ನೀಡಿ ನಂತರ ಗ್ರೇಸ್ ಅಂಕಗಳನ್ನು ಘೋಷಿಸಲಾಗಿತ್ತು. ನೆಟ್ಟಗೆ ಪ್ರಶ್ನೆಪತ್ರಿಕೆ ರೂಪಿಸಲು ಬಾರದ ಆಯೋಗವು ಅಭ್ಯರ್ಥಿಗಳ ಜಾಣ್ಮೆಯನ್ನು ಒರೆಗೆ ಹಚ್ಚುವ ಕೆಲಸ ನಿರ್ವಹಿಸುತ್ತಿರುವುದು ಹಾಸ್ಯಾಸ್ಪದ.

ಸರ್ಕಾರ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂದು ಕಾರ್ಯಕ್ರಮ ಆಯೋಜಿಸಿ ಕೈ ತೊಳೆದುಕೊಂಡರೆ ಸಾಲದು. ಕನ್ನಡದ ಸಮರ್ಪಕ ಅನುಷ್ಠಾನ ಅದರ ಆದ್ಯತೆಯಾಗಬೇಕು.

ಶಿಶಿರ, ಶಿರಸಿ

ಸಹಾಯಕ್ಕೆ ಪ್ರಚಾರ: ತಪ್ಪೇನು?

ಯಾರಿಗಾದರೂ ನೆರವು ನೀಡುವಾಗ ಸಹಾನುಭೂತಿ ಇರಬೇಕೇ ವಿನಾ ಕನಿಕರವಲ್ಲ ಎಂಬ ಎಚ್.ಕೆ.ಶರತ್ ಅವರ ಅಭಿಪ್ರಾಯ (ಸಂಗತ, ಆ. 28) ಸರಿಯಾಗಿದೆ. ಆದರೆ ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದ್ದನ್ನು ಜಗಜ್ಜಾಹೀರುಗೊಳಿಸುವುದು ತಪ್ಪು ಎಂಬಂತೆ ಬಿಂಬಿಸಿರುವುದು ಸರಿಯಲ್ಲ. ಬೀದಿನಾಯಿಗಳಿಗೆ ದಿನವೂ ತಪ್ಪದೇ ಆಹಾರ ಒದಗಿಸುವ ವ್ಯಕ್ತಿಯೊಬ್ಬರ ವಿಡಿಯೊದಿಂದ ಪ್ರಭಾವಿತಳಾಗಿ ನಮ್ಮೂರಿನ ಬೀದಿನಾಯಿಗಳಿಗೆ ಆಹಾರ ನೀಡುವುದನ್ನು ನಾನು ರೂಢಿಸಿಕೊಂಡೆ. ಎಷ್ಟೋ ಸಾರಿ ಪರಿಸರ, ಪ್ರಾಣಿ-ಪಕ್ಷಿ, ಮನುಷ್ಯರಿಗೆ ಮಾಡಿದ ಉಪಕಾರದ ಬಗ್ಗೆ ಲೇಖನ, ವಿಡಿಯೊಗಳನ್ನು ಹಂಚಿಕೊಂಡಾಗ, ಅದರಿಂದ ಪ್ರೇರಿತರಾಗಿ ಅನೇಕರು ಅಂತಹ ಸಂದರ್ಭಗಳಲ್ಲಿ ಸಹಾಯ ಮಾಡುವ ಮನಸ್ಸು ಮಾಡುತ್ತಾರೆ. ಓದಲು ಧನಸಹಾಯ, ಚಿಕಿತ್ಸೆಗೆ ಧನಸಹಾಯ, ರಕ್ತದಾನ, ದೇಹದಾನ, ಹಸಿದವರಿಗೆ ಆಹಾರ ನೀಡಿಕೆಯಂತಹ ಸತ್ಕಾರ್ಯಗಳ ಬಗ್ಗೆ ಹೇಳಿಕೊಳ್ಳುವುದರಿಂದ ಜನರಿಗೆ ಪ್ರೇರಣೆ ಸಿಗುವುದರಲ್ಲಿ ಎರಡು ಮಾತಿಲ್ಲ.

ಇಂತಹ ಅದೆಷ್ಟೋ ವಿಷಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಓದಿ, ನೋಡಿ ಅದರಿಂದ ಪ್ರೇರಣೆ ಪಡೆದು ಸಹಾಯ ಮಾಡಲು ಮುಂದಾಗುವುದು ಒಳ್ಳೆಯದೇ ಅಲ್ಲವೆ? ರಾಜ್‌ಕುಮಾರ್ ಅವರಂತಹ ಖ್ಯಾತನಾಮರು ತೀರಿಕೊಂಡಾಗ ಅವರ ಕಣ್ಣುಗಳನ್ನು ದಾನ ಮಾಡಿದ ವಿಷಯ ತಿಳಿದು ಅದೆಷ್ಟೋ ಮಂದಿ ನೇತ್ರದಾನ ಮಾಡಲು ಮುಂದಾದರಲ್ಲವೇ? 'ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯಬಾರದು' ಎಂಬ ಮಾತೆಲ್ಲಾ ಈಗಿನ ಪರಿಸ್ಥಿತಿಗೆ ಒಗ್ಗಲಾರದು. ಈಗೇನಿದ್ದರೂ ಕಷ್ಟದಲ್ಲಿರುವ ವ್ಯಕ್ತಿಗೆ ಈ ರೀತಿಯಾಗಿಯೂ ಸಹಾಯ ಮಾಡಬಹುದು ಎಂದು ತಿಳಿವಳಿಕೆ ನೀಡಬೇಕಾದ ಪರಿಸ್ಥಿತಿಯಿದೆ.

ಸ್ನೇಹಾ ಕೃಷ್ಣನ್, ಚಿಕ್ಕಬಳ್ಳಾಪುರ

ಎಲೆಕ್ಟ್ರಾನಿಕ್ ಸಿಟಿ: ಮೂಲಕರ್ತನ ಹೆಸರಿರಲಿ

ಎಲೆಕ್ಟ್ರಾನಿಕ್ ಸಿಟಿ ರೂವಾರಿ ಎಸ್.ಎಂ.ಕೃಷ್ಣ ಅವರಾದ್ದರಿಂದ ಸರ್ಕಾರ ಈಗ ಎಣಿಸಿರುವಂತೆ ಈ ಬಡಾವಣೆಗೆ ದೇವರಾಜ ಅರಸು ಅವರ ಹೆಸರಿನ ಬದಲಿಗೆ ಕೃಷ್ಣ ಅವರ ಹೆಸರನ್ನೇ ಇಡಬೇಕು ಎಂದು ಬೂಕನಕೆರೆ ವಿಜೇಂದ್ರ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಆ. 28). ಯಾರದೇ ಹೆಸರನ್ನು ನಾಮಕರಣ ಮಾಡುವಾಗ ಹಿನ್ನೆಲೆ ಬಹು ಮುಖ್ಯ. ಒಂದು ಬಡಾವಣೆಗೆ ಅಥವಾ ಊರಿಗೆ ಹೆಸರಿಡುವಾಗ ಆ ವ್ಯಕ್ತಿಯ ಕೊಡುಗೆಯನ್ನು ಪರಿಗಣಿಸಬೇಕು. 'ಎಲೆಕ್ಟ್ರಾನಿಕ್ ಸಿಟಿ' ಎಂಬ ಹೆಸರು ಬರಲು ಮೂಲ ಕಾರಣಕರ್ತರು ರಾಮಕೃಷ್ಣ ಬಾಳಿಗಾ (ಆರ್.ಕೆ.ಬಾಳಿಗಾ) ಎಂಬುದನ್ನು ಮರೆಯಬಾರದು. ಅವರು ಎಂಬತ್ತರ ದಶಕದಲ್ಲಿ ಬೆಂಗಳೂರು ನಗರವನ್ನು ದೇಶದಲ್ಲೇ 'ಸಿಲಿಕಾನ್ ವ್ಯಾಲಿ' ಮಾಡಬೇಕೆಂಬ ಕನಸು ಕಂಡು 'ಎಲೆಕ್ಟ್ರಾನಿಕ್ ಸಿಟಿ'ಯನ್ನು ಸ್ಥಾಪಿಸಿದರು. ಕಿಯೋನಿಕ್ಸ್ ಸ್ಥಾಪನೆಗೆ ಕಾರಣರಾದ ಬಾಳಿಗಾ ಅವರ ಕನಸು ನನಸಾಗಿದೆ. ಆಗ ಮುಖ್ಯಮಂತ್ರಿ ಆಗಿದ್ದವರು ಡಿ. ದೇವರಾಜ ಅರಸು. ಬೆಂಗಳೂರು ಐ.ಟಿ., ಬಿ.ಟಿ. ಕ್ಷೇತ್ರದ ಅಭಿವೃದ್ಧಿಯಲ್ಲಿ ಕೃಷ್ಣ ಅವರ ಪಾತ್ರ ಇದೆ. ಅಂದಮಾತ್ರಕ್ಕೆ ಎಲೆಕ್ಟ್ರಾನಿಕ್ ಸಿಟಿಗೆ ಕೃಷ್ಣ ಅವರ ಹೆಸರು ಸೂಕ್ತವಲ್ಲ.

ಐ.ಟಿ., ಬಿ.ಟಿ. ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಇಂದಿನ ಯುವಕರಿಗೆ ಬಾಳಿಗಾ ಅವರ ಬಗ್ಗೆ ಬಹುತೇಕ ಅರಿವಿರಲಾರದು. ಆದ್ದರಿಂದ ಎಲೆಕ್ಟ್ರಾನಿಕ್ ಸಿಟಿಗೆ ಮರುನಾಮಕರಣ ಮಾಡುವುದಾದರೆ ಅದರ ಮೂಲಕರ್ತರಾದ ಬಾಳಿಗಾ ಅವರ ಹೆಸರನ್ನೇ ಇಡುವುದು ಸೂಕ್ತ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹೈಕೋರ್ಟ್‌ಗೆ ಪ್ರಮಾಣಪತ್ರವನ್ನೇ ಸಲ್ಲಿಸದ ರಾಜ್ಯ ಸರ್ಕಾರ



ಜಿಂದಾಲ್‌ಗೆ 3,667 ಎಕರೆ

ಜಿಂದಾಲ್‌ಗೆ ಬಳ್ಳಾರಿಯಲ್ಲಿ 3,667 ಎಕರೆ ಜಮೀನನ್ನು ಲೀಸ್ ಕಂ ಸೇಲ್ ಒಪ್ಪಂದದಂತೆ ಮಾರಾಟ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿರುವುದು ರಾಜಕೀಯ ಜಟಾಪಟಿಗೆ ಕಾರಣವಾಗಿದೆ. ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳುತ್ತಿರುವ ರಾಜ್ಯ ಸರ್ಕಾರ, 'ಯಡಿಯೂರಪ್ಪ ಸರ್ಕಾರದ ನಿರ್ಧಾರವನ್ನೇ ಜಾರಿಗೆ ತರುತ್ತಿದ್ದೇವೆ. ಹೈಕೋರ್ಟ್‌ನ ಆದೇಶದಂತೆ ಕ್ರಮ ತೆಗೆದುಕೊಂಡಿದ್ದೇವೆ' ಎಂದು ಹೇಳುತ್ತಿದೆ. 'ಯಡಿಯೂರಪ್ಪ ಸರ್ಕಾರ ತೆಗೆದುಕೊಂಡಿದ್ದ ನಿರ್ಧಾರವನ್ನು ಮರುಪರಿಶೀಲಿಸುತ್ತೇವೆ' ಎಂದು ಬಸವರಾಜ ಬೊಮ್ಮಾಯಿ ಸರ್ಕಾರವು ಹೈಕೋರ್ಟ್‌ಗೆ ತಿಳಿಸಿತ್ತು. ಮರುಪರಿಶೀಲನೆಗೆ ಸಂಬಂಧಿಸಿದ ಪ್ರಮಾಣಪತ್ರವನ್ನು ಸಲ್ಲಿಸಿ ಎಂದು ಹೈಕೋರ್ಟ್ ಸೂಚಿಸಿದ್ದರೂ ಅಂತಹ ಯಾವುದೇ ಪ್ರಮಾಣಪತ್ರ ಹೈಕೋರ್ಟ್‌ಗೆ ಸಲ್ಲಿಸಿಲ್ಲ. ಬದಲಿಗೆ ಒಂದು ಹೇಳಿಕೆ ನೀಡಿ, ಹೈಕೋರ್ಟ್‌ನ ಆದೇಶ ಪಡೆದುಕೊಳ್ಳಲಾಗಿದೆ. ಹೈಕೋರ್ಟ್ ಆದೇಶದಲ್ಲಿ ಇರುವ ವಿವರಗಳು ಮತ್ತು ನಂತರದ ಬೆಳವಣಿಗೆಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ

● ಜಯಸಿಂಹ ಆರ್.

ಬಳ್ಳಾರಿಯ ತೋರಣಗಲ್, ಕುರೇಕುಪ್ಪ, ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿ ಜಿಂದಾಲ್ ಕಂಪನಿಗೆ 3,667 ಎಕರೆಯಷ್ಟು ಜಮೀನನ್ನು 2006 ಮತ್ತು 2007ರಲ್ಲಿ ಗುತ್ತಿಗೆ ಮಾರಾಟ ಒಪ್ಪಂದದಂತೆ ಮಂಜೂರು ಮಾಡಲಾಗಿತ್ತು. ಒಪ್ಪಂದದ ಪ್ರಕಾರ ಆ ಜಮೀನನ್ನು 2013 ಮತ್ತು 2017ರಲ್ಲಿ ಕಂಪನಿಗೆ ಮಾರಾಟ ಮಾಡಬೇಕಿತ್ತು ಮತ್ತು ಸರ್ಕಾರವು ನಿಗದಿ ಮಾಡಿದಷ್ಟು ದರವನ್ನು ಕಂಪನಿ ಸರ್ಕಾರಕ್ಕೆ ಪಾವತಿಸಬೇಕಿತ್ತು. 2007ರ ಒಪ್ಪಂದದಂತೆ ಜಮೀನನ್ನು ಶುದ್ಧ ಕ್ರಯಪತ್ರ ಮಾಡಿಕೊಡಿ ಎಂದು 2017ರಲ್ಲಿ ಮತ್ತು 2006ರ ಒಪ್ಪಂದದಂತೆ ಜಮೀನನ್ನು ಶುದ್ಧ ಕ್ರಯಪತ್ರ ಮಾಡಿಕೊಡಿ ಎಂದು 2018ರಲ್ಲಿ ಕಂಪನಿಯು ಸರ್ಕಾರಕ್ಕೆ ಎರಡು ಪತ್ರ ಬರೆದಿತ್ತು. ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಹಣಕಾಸು ಇಲಾಖೆಯ ಅಭಿಪ್ರಾಯ ಕೇಳಿತ್ತು.

ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪರಿಶೀಲಿಸಿದ್ದ ಇಲಾಖೆಯು, 'ದರವನ್ನು ಪರಿಷ್ಕರಿಸಿ ಶುದ್ಧ ಕ್ರಯಪತ್ರ ಮಾಡಿಕೊಡಬಹುದು' ಎಂದು 2018ರ ಮಾರ್ಚ್ 3ರಂದು ತನ್ನ ಅಭಿಪ್ರಾಯ ತಿಳಿಸಿತ್ತು. ಆದರೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆದು, ಸರ್ಕಾರ ಬದಲಾದ ಕಾರಣ ಶುದ್ಧ ಕ್ರಯಪತ್ರ ಮಾಡಿಕೊಡುವ ಪ್ರಕ್ರಿಯೆ ನನೆಗುದಿಗೆ ಬಿದ್ದಿತ್ತು. 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಚಿವ ಸಂಪುಟದ ಎದುರು ಈ ವಿಷಯ ಚರ್ಚೆಗೆ ಬಂದಿತ್ತು. ಜಿಂದಾಲ್‌ಗೆ ಸದರಿ ಜಮೀನನ್ನು ಮಾರಾಟ ಮಾಡಲು 2019ರ ಮೇ 27ರಂದು ಸಂಪುಟ ಒಪ್ಪಿಗೆ ನೀಡಿತ್ತು. ಮೈತ್ರಿ ಸರ್ಕಾರದಲ್ಲಿ ಪಾಲುದಾರ ಪಕ್ಷವಾದ ಕಾಂಗ್ರೆಸ್‌ನ ಶಾಸಕರಿಂದಲೇ ತೀವ್ರ ವಿರೋಧ ಬಂದ ಕಾರಣ 2019ರ ಜೂನ್ 14ರಂದು ಸಂಪುಟ ಉಪಸಮಿತಿ ಪರಿಶೀಲನೆಗೆ ವಿಷಯವನ್ನು ಒಪ್ಪಿಸಲಾಯಿತು. ಮುಂದಿನ ಒಂದೇ ತಿಂಗಳಲ್ಲಿ ಸರ್ಕಾರ ಪತನವಾಯಿತು.

ಹೊಸದಾಗಿ ರಚನೆಯಾದ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಈ ಪ್ರಕ್ರಿಯೆ ಮತ್ತೆ ಚಾಲನೆಗೆ ಬಂದಿತು. 2020ರ ಡಿಸೆಂಬರ್ 22ರಿಂದ 2021ರ ಮಾರ್ಚ್ 4ರವರೆಗೆ ಸಂಪುಟ ಉಪಸಮಿತಿಯು ಹಲವು ಸಭೆಗಳನ್ನು ನಡೆಸಿತು. ತಜ್ಞರ ಅಭಿಪ್ರಾಯಗಳನ್ನೂ ಪಡೆದುಕೊಂಡಿತ್ತು. ಕುಮಾರಸ್ವಾಮಿ ಸರ್ಕಾರದ ಅವಧಿಯಲ್ಲಿ ನೀಡಲಾಗಿದ್ದ ಒಪ್ಪಿಗೆಯ ಆಧಾರದಲ್ಲೇ ಜಮೀನು ಮಾರಾಟ ಮಾಡಲು 2021ರ ಏಪ್ರಿಲ್ 26ರಂದು ಯಡಿಯೂರಪ್ಪ ಸಂಪುಟ ಸಭೆ ಒಪ್ಪಿಗೆ ನೀಡಿತು. ಅದರ ಪ್ರಕಾರ 2021ರ ಮೇ 21ರಂದು ಸರ್ಕಾರವು ಆದೇಶ ಹೊರಡಿಸಿತು. 'ತೋರಣಗಲ್ ಮತ್ತು ಕುರೇಕುಪ್ಪ ಗ್ರಾಮಗಳಲ್ಲಿನ 2,000 ಎಕರೆ ಜಮೀನನ್ನು ಪ್ರತಿ ಎಕರೆಗೆ ₹1.22 ಲಕ್ಷದಂತೆ ಹಾಗೂ ತೋರಣಗಲ್, ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿನ 1,667 ಎಕರೆ ಜಮೀನನ್ನು ಪ್ರತಿ ಎಕರೆಗೆ ₹1.50 ಲಕ್ಷದಂತೆ ಮಾರಾಟ ಮಾಡಿ ಶುದ್ಧ ಕ್ರಯಪತ್ರ ಮಾಡಿಕೊಡಲು ನಿರ್ಧರಿಸಲಾಗಿದೆ' ಎಂದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಆದೇಶದಲ್ಲಿ ವಿವರಿಸಿತು.

ಈ ಆದೇಶ ಹೊರಬಿದ್ದ ನಂತರ ಅದರ ವಿರುದ್ಧ ಹೈಕೋರ್ಟ್‌ನಲ್ಲಿ ಕೆ.ಎ.ಪೌಲ್ ಪಿಐಎಲ್ ಸಲ್ಲಿಸಿದರು. 'ಯಡಿಯೂರಪ್ಪ ನೇತೃತ್ವದ ಸಂಪುಟ ಸಭೆ ಮತ್ತು ಜಗದೀಶ್ ಶೆಟ್ಟರ್ ನೇತೃತ್ವದ ಸಂಪುಟ ಉಪಸಮಿತಿ ನಡೆಸಿದ ಪರಿಶೀಲನೆ, ಸಭೆ ಮತ್ತು ನಿರ್ಧಾರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. 3,667 ಎಕರೆಯನ್ನು ಜಿಂದಾಲ್‌ಗೆ ನೀಡುವ ಆದೇಶವನ್ನು ರದ್ದುಪಡಿಸಬೇಕು. ಈ ಪ್ರಕ್ರಿಯೆ ಕುರಿತು ಹೈಕೋರ್ಟ್ ಸೂಚಿಸಿದ ಸಂಸ್ಥೆಯ ಮೂಲಕ ಸ್ವತಂತ್ರ ತನಿಖೆ ನಡೆಸಬೇಕು' ಎಂದು ಪಿಐಎಲ್‌ನಲ್ಲಿ ಕೋರಲಾಗಿತ್ತು. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಇದ್ದಾಗ ಪಿಐಎಲ್ ವಿಚಾರಣೆಗೆ ಬಂದಿತ್ತು. ಸರ್ಕಾರದ ಪರವಾಗಿ ಹಾಜರಾಗಿದ್ದ ವಕೀಲರು, 'ಈ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಮರುಪರಿಶೀಲಿಸುತ್ತೇವೆ' ಎಂದು ಹೇಳಿದ್ದರು. ಅದನ್ನು ಪರಿಗಣಿಸಿದ್ದ ಹೈಕೋರ್ಟ್ ಪೀಠವು 2021ರ ನವೆಂಬರ್ 8ರಂದು, ಪಿಐಎಲ್ ಅನ್ನು ವಜಾ ಮಾಡಿತ್ತು.

ಪಿಐಎಲ್ ವಜಾ ಆಗಿರುವ ಕಾರಣ, ಶುದ್ಧ ಕ್ರಯಪತ್ರ ಮಾಡಿಕೊಡಿ ಎಂದು ಜಿಂದಾಲ್ ಕಂಪನಿ 2022ರ ಅಕ್ಟೋಬರ್ 1ರಂದು ಸರ್ಕಾರಕ್ಕೆ ಪತ್ರ ಬರೆಯಿತು. ಸರ್ಕಾರ ಕ್ರಮವಹಿಸದ ಕಾರಣ, ಕಂಪನಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತು. ಹೈಕೋರ್ಟ್, ಸರ್ಕಾರದ ಅಭಿಪ್ರಾಯ ಕೇಳಿತು. ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್, 'ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರವು ಈಗಾಗಲೇ ನಿರ್ಧಾರ ತೆಗೆದುಕೊಂಡಿದೆ. ನ್ಯಾಯಾಲಯದ ನಿರ್ದೇಶನಕ್ಕೆ ಕಾಯಲಾಗುತ್ತಿದೆ. ಶುದ್ಧ ಕ್ರಯಪತ್ರ ಮಾಡಿಕೊಡಬೇಕು ಎಂದು 2021ರ ಮೇ 6ರಂದು ಸರ್ಕಾರವು ನಿರ್ಧಾರ ತೆಗೆದುಕೊಂಡಿದ್ದು, ಅದನ್ನು ಜಾರಿಗೆ ತರಲು ವಿಳಂಬ ಮಾಡುವುದರಲ್ಲಿ ಅರ್ಥವಿಲ್ಲ' ಎಂದು ಹೇಳಿದ್ದರು.

'ಈ ವಿಷಯವನ್ನು ಮರುಪರಿಶೀಲಿಸಿ. ಆ ಸಂಬಂಧ ಪ್ರಮಾಣಪತ್ರವನ್ನು ಸಲ್ಲಿಸಿ' ಎಂದು ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿತ್ತು. ಆದರೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅವರು ಹೈಕೋರ್ಟ್‌ಗೆ ಯಾವುದೇ ಪ್ರಮಾಣಪತ್ರ ಸಲ್ಲಿಸಲಿಲ್ಲ. ಆದರೆ, 'ಈ ವಿಷಯವನ್ನು ಸರ್ಕಾರ ಪುನರ್‌ಪರಿಶೀಲಿಸಿದೆ. ನ್ಯಾಯಾಲಯ ಆದೇಶ ನೀಡಿದರೆ ಶುದ್ಧ ಕ್ರಯಪತ್ರ ಮಾಡಿಕೊಡಬೇಕಾಗುತ್ತದೆ' ಎಂದು ಪೀಠದ ಎದುರು ಹೇಳಿಕೆ ನೀಡಿದ್ದರು. ಅದನ್ನು ಪರಿಗಣಿಸಿದ್ದ ಹೈಕೋರ್ಟ್, 'ಜಿಂದಾಲ್ ಕಂಪನಿಗೆ ಶುದ್ಧ ಕ್ರಯಪತ್ರ ಮಾಡಿಕೊಡಿ' ಎಂದು 2024ರ ಮಾರ್ಚ್ 12ರಂದು ಆದೇಶಿಸಿತ್ತು. ಆದರೆ ಹೈಕೋರ್ಟ್ ನಿರ್ದೇಶಿಸಿದ್ದಂತೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರಮಾಣಪತ್ರವನ್ನು ಸಲ್ಲಿಸಿಲ್ಲ ಎಂಬುದನ್ನು ತೀರ್ಪಿನಲ್ಲಿ ಉಲ್ಲೇಖಿಸಿದೆ. ❖

ನಿರ್ಧಾರ ಪ್ರಶ್ನಿಸಲು ಅವಕಾಶ

ಪೌಲ್ ಅವರ ಪಿಐಎಲ್ ಅನ್ನು ವಜಾ ಮಾಡುವಾಗ, 'ಈ ನ್ಯಾಯಾಲಯದ ಆದೇಶದನ್ವಯ ಸರ್ಕಾರ ತೆಗೆದುಕೊಳ್ಳುವ ನಿರ್ಧಾರವನ್ನು ಪ್ರಶ್ನಿಸುವ ಮತ್ತು ನ್ಯಾಯಾಲಯದ ಆದೇಶವನ್ನು ಮರುಪರಿಶೀಲಿಸುವ ಎಲ್ಲ ಅವಕಾಶಗಳೂ ಅರ್ಜಿದಾರರಿಗೆ ಇರುತ್ತದೆ' ಎಂದು 2021ರ ನವೆಂಬರ್ 8ರ ಆದೇಶದಲ್ಲಿ ಹೈಕೋರ್ಟ್ ಹೇಳಿತ್ತು. ಈಗ 2024ರ ಮಾರ್ಚ್ 12ರಂದು ನೀಡಿದ ತೀರ್ಪಿನಲ್ಲಿ ಹಿಂದಿನ ತೀರ್ಪನ್ನು ಉಲ್ಲೇಖಿಸಿರುವ ಹೈಕೋರ್ಟ್, 'ಹಿಂದಿನ ತೀರ್ಪಿನಲ್ಲಿ ಹೇಳಿದಂತೆ ಆದೇಶ ಮರುಪರಿಶೀಲನೆಗೆ ಮನವಿ ಮಾಡಿಕೊಳ್ಳುವ ಅವಕಾಶ ಅರ್ಜಿದಾರರಿಗೆ ಇರುತ್ತದೆ' ಎಂದು ಹೇಳಿದೆ.

'₹6,908ಕ್ಕೆ ಖರೀದಿಸಿದ ಜಮೀನಿಗೆ ₹90,000'

ಮಾರುಕಟ್ಟೆ ದರಕ್ಕಿಂತ ಅತ್ಯಂತ ಕಡಿಮೆ ದರದಲ್ಲಿ ಜಿಂದಾಲ್‌ಗೆ ಭೂಮಿ ಮಾರಾಟ ಮಾಡಲಾಗುತ್ತಿದೆ ಎಂದು ವಿರೋಧ ಪಕ್ಷಗಳು ಮತ್ತು ರೈತ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ. 2021ರಲ್ಲಿ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಕೆಯಾದಾಗಲೂ ಇದೇ ವಿಚಾರ ಚರ್ಚೆಗೆ ಬಂದಿತ್ತು. ಜಿಂದಾಲ್ ಕಂಪನಿಯು 2022ರಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದಾಗ, 'ಸರ್ಕಾರ ಈ ಜಮೀನಿನ ಭೂಸ್ವಾಧೀನಕ್ಕೆ ಮಾಡಿದ್ದ ವೆಚ್ಚಕ್ಕಿಂತ 13 ಪಟ್ಟು ಹೆಚ್ಚು ಬೆಲೆ ಪಾವತಿಗೆ ಒಪ್ಪಿದ್ದೆವು' ಎಂದು ಹೇಳಿತ್ತು.

'ಬಳ್ಳಾರಿಯಲ್ಲಿ ವಿಜಯನಗರ ಸ್ಟೀಲ್ ಲಿಮಿಟೆಡ್ (ವಿಎಸ್‌ಎಲ್) ಸ್ಥಾಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು 1971–77ರಲ್ಲಿ 9,341 ಎಕರೆ ಸ್ವಾಧೀನಪಡಿಸಿಕೊಂಡಿತ್ತು. ಆದರೆ ಅಷ್ಟೂ ಜಮೀನನ್ನು 1995ರಲ್ಲಿ ಕರ್ನಾಟಕ ಸರ್ಕಾರಕ್ಕೆ ಮಾರಾಟ ಮಾಡಿತ್ತು. ವಿಎಸ್‌ಎಲ್ ಷೇರುಗಳು ಸೇರಿದಂತೆ ಜಮೀನು ಖರೀದಿಗೆ ರಾಜ್ಯ ಸರ್ಕಾರ ₹12.90 ಕೋಟಿ ಪಾವತಿಸಿತ್ತು' ಎಂದು ಜಿಂದಾಲ್ ತನ್ನ ಅರ್ಜಿಯಲ್ಲಿ ವಿವರಿಸಿತ್ತು.

'9,341 ಎಕರೆಗೆ ರಾಜ್ಯ ಸರ್ಕಾರ ₹6.42 ಕೋಟಿ ಪಾವತಿಸಿತ್ತು. ಪ್ರತಿ ಎಕರೆಗೆ ಸರ್ಕಾರಕ್ಕೆ ತಗುಲಿದ ವೆಚ್ಚ ₹6,908. ಇದೇ ಜಮೀನನ್ನು ನಾವು 2006ರಲ್ಲಿ ಲೀಸ್ ಕಂ ಸೇಲ್ ಒಪ್ಪಂದದಂತೆ ಪಡೆದುಕೊಳ್ಳುವಾಗ ಪ್ರತಿ ಎಕರೆಗೆ ₹90,000 ಸಾವಿರ ನೀಡಲು ಒಪ್ಪಿಗೆ ನೀಡಿದ್ದೆವು. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರಕ್ಕೆ ತಗುಲಿದ ವೆಚ್ಚಕ್ಕಿಂತ ಇದು 13 ಪಟ್ಟು ಹೆಚ್ಚು' ಎಂದು ಕಂಪನಿ ಹೈಕೋರ್ಟ್‌ಗೆ ವಿವರಿಸಿತ್ತು.

'ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಭೂಮಿ ನೀಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ, ನಮ್ಮ ಕಂಪನಿ ಅಲ್ಲಿ ಕಾರ್ಖಾನೆ ಆರಂಭಿಸಿದ ನಂತರವೇ ವಾಣಿಜ್ಯ ಚಟುವಟಿಕೆಗಳು ಆರಂಭವಾದವು. ನಮ್ಮ ಕಾರ್ಖಾನೆಯ ಚಟುವಟಿಕೆಗಳ ಕಾರಣದಿಂದಲೇ ಅಲ್ಲಿ ಭೂಮಿಯ ಬೆಲೆ ಹೆಚ್ಚಾಗಿದೆ. ಭೂಮಿಗೆ ದರ ನಿಗದಿ ಮಾಡುವಾಗ ಕಂಪನಿಯಿಂದ ಆಗಿರುವ ಈ ಅನುಕೂಲಗಳನ್ನು ಪರಿಗಣಿಸಲು ಸರ್ಕಾರವನ್ನು ಕೋರಿದ್ದೆವು' ಎಂದೂ ಜಿಂದಾಲ್ ಹೈಕೋರ್ಟ್‌ಗೆ ತಿಳಿಸಿತ್ತು.

ಆಧಾರ: ಜಿಂದಾಲ್ ವರ್ಸಸ್ ಕರ್ನಾಟಕ ಸರ್ಕಾರದ ಮೊಕದ್ದಮೆಯಲ್ಲಿ ಹೈಕೋರ್ಟ್ ತೀರ್ಪು, ಕೆ.ಎ.ಪೌಲ್ ವರ್ಸಸ್ ಕರ್ನಾಟಕ ಸರ್ಕಾರದ ಪಿಐಎಲ್‌ನಲ್ಲಿ ಹೈಕೋರ್ಟ್ ತೀರ್ಪು

ನವೆಂಬರ್ 15ಕ್ಕೆ 'ಭೈರತಿ ರಣಗಲ್'



ಶಿವರಾಜ್‌ಕುಮಾರ್

ನಟ ಶಿವರಾಜ್‌ಕುಮಾರ್ ನಟನೆಯ 'ಭೈರತಿ ರಣಗಲ್' ನವೆಂಬರ್ 15ರಂದು ಬಿಡುಗಡೆಯಾಗಲಿದೆ. ಶಿವರಾಜ್‌ಕುಮಾರ್ ಅವರ ಈ ವರ್ಷದ ಎರಡನೇ ಸಿನಿಮಾವಾಗಿದೆ.

ಬೆಂಗಳೂರಿನ ಯಲಹಂಕದಲ್ಲಿರುವ ಗೆಲರಿಯಾ ಮಾಲ್‌ನಲ್ಲಿ ವಿನೂತನವಾಗಿ ನಿರ್ಮಿಸಲಾಗಿದ್ದ ಅತೀ ದೊಡ್ಡ ಗ್ರಾಫಿಟಿ ಆರ್ಟ್ ಮೂಲಕ 'ಭೈರತಿ ರಣಗಲ್' ಚಿತ್ರದ ಬಿಡುಗಡೆ ದಿನಾಂಕವನ್ನು ಘೋಷಣೆ ಮಾಡಿದ್ದು ವಿಶೇಷವಾಗಿತ್ತು.

ಕಳೆದ ವರ್ಷ ಸಿನಿಮಾ ಘೋಷಣೆಯಾಗಿದ್ದ ಸಂದರ್ಭದಲ್ಲಿ 2024ರ ಆಗಸ್ಟ್ 15ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿತ್ತು. ಆದರೆ ಕಾರಣಾಂತರಗಳಿಂದ ಸಿನಿಮಾ ಮುಂದೂಡಲ್ಪಟ್ಟಿತ್ತು. 'ಮಫ್ತಿ' ಸಿನಿಮಾದ ಪ್ರೀಕ್ವೆಲ್ ಆಗಿರುವ ಈ ಸಿನಿಮಾವನ್ನು 'ಗೀತಾ ಪಿಕ್ಚರ್ಸ್' ಲಾಂಛನದಡಿ ಗೀತಾ ಶಿವರಾಜ್‌ಕುಮಾರ್ ನಿರ್ಮಾಣ ಮಾಡಿದ್ದಾರೆ. 'ವೇದ' ಸಿನಿಮಾ ಬಳಿಕ ಗೀತಾ ಅವರು ನಿರ್ಮಾಣ ಮಾಡುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಬೆಳಗಾವಿಯಲ್ಲಿ ಚಿತ್ರದ ಕಾರ್ಯಕ್ರಮವೊಂದನ್ನು ನಡೆಸುವುದಾಗಿ ಗೀತಾ ಶಿವರಾಜ್‌ಕುಮಾರ್ ತಿಳಿಸಿದ್ದಾರೆ. ನರ್ತನ್ ನಿರ್ದೇಶನದ ಈ ಚಿತ್ರದಲ್ಲಿ ರುಕ್ಮಿಣಿ ವಸಂತ್ ನಾಯಕಿಯಾಗಿದ್ದಾರೆ.

ಚಿತ್ರದ ತಾರಾಬಳಗದಲ್ಲಿ ರಾಹುಲ್ ಬೋಸ್, ಅವಿನಾಶ್, ದೇವರಾಜ್, ಮಧು ಗುರುಸ್ವಾಮಿ, ಛಾಯಾ ಸಿಂಗ್, ಬಾಬು ಹಿರಣ್ಣಯ್ಯ ಮುಂತಾದವರಿದ್ದಾರೆ. ನವೀನ್ ಕುಮಾರ್ ಛಾಯಾಚಿತ್ರಗ್ರಹಣ ಮತ್ತು ರವಿ ಬಸ್ರೂರು ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಸೆಟ್ಟೇರಿದ '1st ಲವ್ ಗುರು'

ಬಹುತೇಕ ಹೊಸಬರಿಂದಲೇ ಕೂಡಿರುವ '1st ಲವ್ ಗುರು' ಸಿನಿಮಾ ಇತ್ತೀಚೆಗಷ್ಟೇ ಸೆಟ್ಟೇರಿದೆ. ಗುರುಪ್ರಸಾದ್ ಬರೆದು, ನಿರ್ದೇಶಿಸುತ್ತಿದ್ದು, ಕೊಳನಕಲ್ ಮಹಾಗಣಪತಿ ಪ್ರೊಡಕ್ಷನ್ಸ್ ಈ ಚಿತ್ರವನ್ನು ನಿರ್ಮಿಸುತ್ತಿದೆ.

'13–14 ವರ್ಷಗಳಿಂದ ಸಾಕಷ್ಟು ನಿರ್ದೇಶಕರ ಜೊತೆ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿರುವೆ. ಇದು ನನ್ನ ಮೊದಲ ನಿರ್ದೇಶನದ ಚಿತ್ರ. ವಯಸ್ಸಲ್ಲದ ವಯಸ್ಸಿನಲ್ಲಿ ಪ್ರೀತಿಸಿದರೆ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರದ ಕಥೆ. ಮನರಂಜನೆ ಜೊತೆಗೆ ಒಂದು ಸಂದೇಶ ಹೊಂದಿದೆ. ಆ್ಯಕ್ಷನ್ ಕೂಡ ಇದೆ. ಸೆಪ್ಟೆಂಬರ್‌ನಿಂದ ಮೊದಲ ಹಂತದ ಚಿತ್ರೀಕರಣ. ಬೆಂಗಳೂರು ಮತ್ತು ಮಂಗಳೂರಿನಲ್ಲಿ 35 ದಿನಗಳ ಕಾಲ ಚಿತ್ರೀಕರಣ ನಡೆಸುವ ಯೋಜನೆ ಇದೆ' ಎಂದು ಚಿತ್ರದ ಕುರಿತು ಮಾಹಿತಿ ಹಂಚಿಕೊಂಡರು ನಿರ್ದೇಶಕರು.

ನಟಿ ಶ್ರುತಿ, ನಾಯಕಿ ತಾಯಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಾಕಷ್ಟು ಕಿರುಚಿತ್ರಗಳಿಂದ ಗುರುತಿಸಿಕೊಂಡಿರುವ ಪ್ರತೀಕ್‌ಗೆ ಕಿರುತೆರೆ ನಟಿ ತನ್ವಿ ಬಾಲರಾಜ್ ಜೋಡಿಯಾಗಿದ್ದಾರೆ. ನಾಲ್ಕು ಹಾಡುಗಳಿದ್ದು ಮನೋಜವಂ ಆತ್ರೇಯ ಅವರ ಸಂಗೀತ, ಸತೀಶ್ ಜೀ ಛಾಯಾಚಿತ್ರಗ್ರಹಣ, ಸುರೇಶ್ ಅರಸ್ ಸಂಕಲನ ಚಿತ್ರಕ್ಕಿದೆ.



ತನ್ವಿ ಬಾಲರಾಜ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ಡಾ.ಆಕಾಶ್ ನಾಗ್ ಎನ್ನುವವರ ಪತ್ರದ ಸ್ಕ್ರೀನ್ ಶಾಟ್ ಹಂಚಿಕೊಳ್ಳುತ್ತಿದ್ದಾರೆ. ಅವರು ಕೋಲ್ಕತ್ತದ ಅಪರಾಧ ವಿಭಾಗದ ಡಿಐಜಿ ಮತ್ತು ಜಂಟಿ ನಿರ್ದೇಶಕ ಎಂದು ಪ್ರತಿಪಾದನೆ ಮಾಡಲಾಗುತ್ತಿದೆ. ರಾಜಕೀಯ ಹಸ್ತಕ್ಷೇಪ ಮತ್ತು ಸಾಮಾಜಿಕ ಒತ್ತಡದಿಂದಾಗಿ ಕೋಲ್ಕತ್ತ ಅತ್ಯಾಚಾರ ಪ್ರಕರಣದ ತನಿಖೆಯಿಂದ ಹಿಂದೆ ಸರಿಯುವಂತೆ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿರುವುದಾಗಿಯೂ, ಕೇಂದ್ರ ಅಪರಾಧ ದಳವು (ಸಿಬಿಐ) ಪ್ರಕರಣದ ತನಿಖೆಯಿಂದ ಹಿಂದೆ ಸರಿದಿರುವುದಾಗಿಯೂ ಪ್ರಚಾರ ಮಾಡಲಾಗುತ್ತಿದೆ. ಆದರೆ, ಇದು ಸುಳ್ಳು.



ಪತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದಾಗ, ಆಕಾಶ್ ನಾಗ್ ಎನ್ನುವ ಹೆಸರು ಹಲವು ರೀತಿ ಉಲ್ಲೇಖಗೊಂಡಿರುವುದು ಕಂಡುಬಂತು. ಮುಂದುವರಿದು, ಈ ಕುರಿತು ಕೀ ವರ್ಡ್ ಸರ್ಚ್ ಮಾಡಿದಾಗ, ಪ್ರಕರಣದ ತನಿಖೆಯಿಂದ ಹಿಂದೆ ಸರಿದಿಲ್ಲ ಎಂದು ಸಿಬಿಐ ನೀಡಿರುವ ಸ್ಪಷ್ಟನೆ ಸಿಕ್ಕಿತು. ಜತೆಗೆ, ಕೋಲ್ಕತ್ತ ಪೊಲೀಸ್ ಇಲಾಖೆಯ ಅಧಿಕಾರಿಗಳ ಪಟ್ಟಿಯನ್ನು ಪರಿಶೀಲಿಸಿದಾಗ, ಡಾ.ಆಕಾಶ್ ನಾಗ್ ಎನ್ನುವ ಹೆಸರು ಪತ್ತೆಯಾಗಲಿಲ್ಲ. ಕೋಲ್ಕತ್ತ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವರು ನಕಲಿ ಪತ್ರವನ್ನು ಹಂಚಿಕೊಳ್ಳುವ ಮೂಲಕ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಗುರು ಎಂಬ ಗೂಗಲ್ ಅರ್ಥ್!

ನುಡಿ ಬೆಳಗು — ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 11



ನೀವು ಮೋಟಾರು ಸೈಕಲ್‌ನಲ್ಲಿ ಹೋಗ್ತಿರ್ತೀರಿ. ಒಂದು ಸಣ್ಣ ಮುಳ್ಳು ಚುಚ್ಚಿದರೆ ಟ್ಯೂಬ್ ಪಂಕ್ಚರ್ ಆಗತ್ತೈತಿ. ಆಗ ನಿಮ್ಮ ಪ್ರಯಾಣ ನಿಲ್ಲುತ್ತದೆ. ಹಾಗೆಯೇ ದೇಹ ಎಂಬ ಈ ತೊಗಲಿನ ಟ್ಯೂಬ್‌ನಲ್ಲಿ 9 ರಂಧ್ರ ಇಟ್ಟೂ ಪಂಕ್ಚರ್ ಆಗಲಾಗದಂಗೆ ವ್ಯವಸ್ಥೆ ಇಟ್ಟಾನಲ್ಲ ಆ ದೇವರು. ಅವನ ವೈಶಿಷ್ಟ್ಯ ಎಂಥದ್ದು! ಇದು ಸೃಷ್ಟಿಯ ವೈಚಿತ್ರ್ಯ. ಈ ಜೀವನದ ಆಳವನ್ನು ಅಳೆಯಲಾಗುವುದಿಲ್ಲ. ಜಗತ್ತು ಕೂಡಾ ಗೊತ್ತಾಗುವುದಿಲ್ಲ. ಇದನ್ನು ಅರಿಯಬೇಕು ಎಂದರೆ ಅದಕ್ಕೆ ನಮ್ಮ ಆಯಸ್ಸು ಚಿಕ್ಕದು. ಇದನ್ನು ತಿಳಿಯಬೇಕಾದರೆ ಏನು ಮಾಡಬೇಕು? ಯಾಕೆ ನಮ್ಮ ಹುಟ್ಟಾತು? ಹುಟ್ಟಾದ ಮೇಲೆ ಯಾಕೆ ನಮಗೆ ಸಾವು ಬರುತ್ತದೆ? ಹುಟ್ಟು ಸಾವುಗಳ ಮಧ್ಯದಲ್ಲಿ ನಾವೇನು ಮಾಡಬೇಕು ಎನ್ನುವುದು ನಮಗ್ಯಾರಿಗೂ ತಿಳಿದಿಲ್ಲ. ನಾಳೆಯ ಗರ್ಭದೊಳಗೆ ಏನಿದೆ ಎಂಬುದು ನಮಗೆ ಅರ್ಥವಾಗಿಲ್ಲ. ಆದರೂ ಈ ಜೀವನದ ರಹಸ್ಯ ತಿಳಿಸಿಕೊಡುವವ ಒಬ್ಬ ಬೇಕಲ್ಲ.

ನೀವು ಕಾಡಿನೊಳಗೆ ಹೋಗ್ತಿರ್ತೀರಿ. ನಿಮಗೆ ದಾರಿ ಗೊತ್ತಾಗೋದಿಲ್ಲ. ಆಗ ನೀವು ಮೊಬೈಲ್ ಓಪನ್ ಮಾಡ್ತೀರಿ. ಗೂಗಲ್ ಅರ್ಥ್ ತೆಗೀತೀರಿ. ಅದು ನಿಮಗೆ ದಾರಿ ತೋರಿಸ್ತದ. ಈ ವಿಶ್ವವೂ ಕೂಡಾ ದಾರಿಕಾಣದ ಭವಾರಣ್ಯ. ನಾವು ನಮ್ಮ ಬದುಕಿನಲ್ಲಿ ದಾರಿ ಕಾಣದೆ ನಿಂತಾಗ ದಾರಿ ತೋರಿಸುವ ಗೂಗಲ್ ಅರ್ಥ್ ಎಂದರೆ ಅವರೇ ಗುರುಗಳು. ಗುರುಗಳು ಕಲ್ಲು ಸಕ್ಕರೆ ಕೊಟ್ಟರೆ ಅದನ್ನೇ ಎಣಿಸಿ ಓಸಿ ನಂಬರ್‌ಗೆ ದುಡ್ಡು ಹಾಕುವ ಶಿಷ್ಯರೂ ಇರ್ತಾರೆ. ಅವರನ್ನು ಬಿಡಿ.

ಫಿಲ್ಟರ್ ನೀರು ಕುಡಿಯದಿದ್ದರೆ ನಮಗೆ ಕೆಮ್ಮು, ನೆಗಡಿ, ಜ್ವರ ಬರ್ತದ. ಆದರೆ ಆಕಳ ಎಂದೂ ಫಿಲ್ಟರ್ ನೀರು ಕುಡಿಯುವುದಿಲ್ಲ. ರಾಡಿ ನೀರು ಕುಡೀತೈತಿ. ಕಸ ತಿಂತೈತಿ. ಮನೀಗ್ ಬಂದಾಗ ನಾವು ಅದಕ್ಕೆ ಮುಸುರೆ ನೀರು ಕೊಡುತ್ತೀವಿ. ಇಷ್ಟಾದರೂ ಅದಕ್ಕೆ ಇನ್‌ಫೆಕ್ಷನ್ ಆಗಲ್ಲ. ಅದು ಕರುವಿಗೆ ಹಾಲಿನ ರೂಪದ ಅಮೃತ ಕೊಡುತ್ತದೆ. ಜೀವನದಲ್ಲಿ ಬರುವ ಎಲ್ಲ ಕಷ್ಟಗಳನ್ನೂ ಸ್ವೀಕಾರ ಮಾಡಿ ಜನರಿಗೆ ಅಮೃತವನ್ನು ನೀಡುವವನೇ ನಿಜವಾದ ಗುರು. ಯಾರ ಮಾತಿನಲ್ಲಿ ಸತ್ಯದ ಬೆಳಕಿದೆ, ಶಾಂತಿಯ ನೆರಳಿದೆ ಅಂಥವನಿಗೆ ಗುರು ಎನ್ನಬೇಕು. ಯಾರ ಸಾನಿಧ್ಯದಲ್ಲಿ ಕೂಡುವುದರಿಂದ ನಮ್ಮ ಮನಸ್ಸು, ಹೃದಯ ಅರಳುತ್ತದೆಯೋ ಅವನಿಗೆ ಗುರು ಎನ್ನಬೇಕು.

ಮೊಗ್ಗೊಂದನ್ನು ಬಲವಂತವಾಗಿ ಅರಳಿಸಲು ಸಾಧ್ಯವಿಲ್ಲ. 'ನಾನೇ ನೀರು ಹಾಕಿ, ಗೊಬ್ಬರ ಹಾಕಿ ಬೆಳೆಸಿದ್ದೇನೆ' ಎಂದು ನೀವು ಮೊಗ್ಗು ಅರಳಿಸಲು ಹೋದರೆ ಅದು ಅರಳುವುದಿಲ್ಲ. ಮೊಗ್ಗೆಯ ಪಕಳೆಗಳು ಉದುರುತಾವ ಅಷ್ಟೆ. ಆದರೆ, 15 ಕೋಟಿ ಕಿಮೀ ದೂರದಲ್ಲಿರುವ ಸೂರ್ಯನ ಕಿರಣ ತಾಗಿದರೆ ಮೊಗ್ಗು ತಾನಾಗಿಯೇ ಅರಳುತ್ತದೆ. ಇದು ಸೂರ್ಯ ಮತ್ತು ಮೊಗ್ಗಿಗೆ ಇರುವ ಸಂಬಂಧ. ಗುರು ಶಿಷ್ಯರ ಸಂಬಂಧವೂ ಹಾಗೆಯೇ ಇರಬೇಕು. ಗುರು ಶಾಂತವಾಗಿರಬೇಕು. ಕಷ್ಟಗಳು ಯಾರಿಗೆ ಬಂದಿಲ್ಲ ಹೇಳಿ? ಇಬ್ಬರಿಗಷ್ಟೇ ಕಷ್ಟ ಇಲ್ಲ. ಅದರಲ್ಲಿ ಒಬ್ಬ ಸತ್ತಾನ, ಇನ್ನೊಬ್ಬ ಹುಟ್ಟಿಲ್ಲ. ಅವರಿಗೆ ಮಾತ್ರ ಕಷ್ಟ ಇಲ್ಲ. ಕಷ್ಟ ಇಲ್ಲ ಎಂದರೆ ನೀವು ಜೀವಂತ ಇಲ್ಲ ಎಂದೇ ಅರ್ಥ. ಪರಿಸ್ಥಿತಿ ಬದಲಾಗಬಹುದು, ಆದರೆ ಮನಃಸ್ಥಿತಿ ಬದಲಾಗಬಾರದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 29, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಏಕಾದಶಿ ಗಂ. 25-38 ನಕ್ಷತ್ರ: ಆರ್ದ್ರಾ ಗಂ. 16-40 ಯೋಗ: ಸಿದ್ಧಿ (ಆಸ್ರಿಕ್) ಗಂ. 18-17 ಕರಣ: ಬವ ಗಂ. 13-25, ಸಿಂಹ ಮಾಸದ 13 ನೇ ದಿನ, ಮಳೆನಕ್ಷತ್ರ: ಮಘಾ 4.

ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-23 ಸೂರ್ಯಾಸ್ತ: 06-40
ಮುಸ್ಲಿಂ ದಿನಾಂಕ: 24 ಸಫರ್
ಅದೃಷ್ಟ ಸಂಖ್ಯೆ: 2, 5

ಮೇಷ: ಕುಲದೇವರ ದರ್ಶನದಿಂದ ಎಲ್ಲಾ ವ್ಯವಹಾರಗಳಲ್ಲಿ ಅಭಿವೃದ್ಧಿ ಸಾಧಿಸಬಲ್ಲಿರಿ. ಸಗಟು ವ್ಯಾಪಾರಿಗಳಿಗೆ ಹೇರಳ ವ್ಯಾಪಾರ ಇರುವುದು. ಹಣದ ಪರಿಸ್ಥಿತಿ ಸುಧಾರಿಸಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ವೃಷಭ: ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದಲ್ಲಿ ದುಡುಕು ನಿರ್ಧಾರ ತೆಗೆದುಕೊಳ್ಳಬೇಡಿ. ಸಾಕುಪ್ರಾಣಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಸಂಶೋಧನೆಯ ಕೆಲಸಗಳು ಉತ್ತಮ ಫಲಿತಾಂಶವನ್ನು ಕಾಣಲಿದೆ.

ಮಿಥುನ: ಇತರರೊಂದಿಗೆ ಜತೆಗೂಡಿ ಕೆಲಸ ಮಾಡುವುದು, ನಾಲ್ಕಾರು ಜನರ ಜತೆಯಲ್ಲಿ ಬೆರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಶರೀರದಲ್ಲಿ ಆಯಾಸ ಕಡಿಮೆಯಾಗಿ ಉಲ್ಲಾಸವಿರುವುದು. ಕೆಲಸದ ಒತ್ತಡ, ಜವಾಬ್ದಾರಿ ಹೆಚ್ಚಲಿವೆ.

ಕರ್ಕಾಟಕ: ಯಾರೊಂದಿಗೆ ಸಮಸೆಗಳಿದ್ದರೂ ಸ್ವತಃ ನೀವೇ ಪರಿಹರಿಸಿಕೊಳ್ಳುವುದು ಉತ್ತಮ ಮಾರ್ಗ. ಆರೋಗ್ಯದ ವಿಚಾರದಲ್ಲಿ ಖರ್ಚು ವೆಚ್ಚದ ಲೆಕ್ಕಾಚಾರವನ್ನು ಮಾಡುವುದು ಸಮಂಜಸವಲ್ಲ.

ಸಿಂಹ: ದೈಹಿಕ ಮತ್ತು ಆರ್ಥಿಕ ಶಕ್ತಿಯನ್ನು ವ್ಯಯಿಸದೇ ಸಮಯಕ್ಕಾಗಿ ಕಾದು ಸಿಕ್ಕ ಸಮಯದಲ್ಲಿ ಕಾರ್ಯವೆಸಗುವ ಚಾಣಾಕ್ಷತನ ಇರುವುದು. ಅದನ್ನು ನೀವೇ ಕಂಡುಕೊಳ್ಳಿರಿ. ನಿರ್ಧಾರದಲ್ಲಿ ಅಸ್ಥಿರತೆ ಬೇಡ.

ಕನ್ಯಾ: ಹಲವು ದಿನಗಳಿಂದ ಉಳಿಸಿಕೊಂಡ ಕೆಲಸಗಳನ್ನು ಮುಂದೂಡುವುದು ಒಳ್ಳೆಯದಲ್ಲ. ಇಂದು ಶ್ರೀ ಲಕ್ಷ್ಮಿ ಸಮೇತನಾದ ವೇಂಕಟರಮಣನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಶುಭವಾಗುತ್ತದೆ. ಧೈರ್ಯ ನಿಮ್ಮ ಜೊತೆಯಾಗುವುದು.

ತುಲಾ: ನೂತನ ಸ್ಥಳದಲ್ಲಿ ಗೆಳೆಯರನ್ನು ಸಂಪಾದಿಸುವಂಥ ಕೆಲಸವನ್ನು ಮಾಡುವಿರಿ. ಕಾರಣವು ನಿಮಗೆ ತಿಳಿಯದೇ ಹೋದರೂ ತಂದೆ ತಾಯಿಯರ ಮುನಿಸು ಸಮಂಜಸವಾಗಿಯೇ ಇರುತ್ತದೆ. ಪತಿಯಲ್ಲಿ ವಿಶೇಷ ಗಮನ ಇರಿಸಿ.

ವೃಶ್ಚಿಕ: ಸರ್ಕಾರಿ ಕೆಲಸಗಳು ಗುತ್ತಿಗೆಯಾಗಿ ಲಭಿಸುವುದರ ಜತೆಗೆ ಲಾಭದಾಯಕವಾಗಿ ಇರುತ್ತವೆ. ಕೃಷಿ ಉತ್ಪನ್ನದ ವ್ಯಾಪಾರಿಗಳಿಗೆ ಇಂದು ಶುಭ ದಿನ. ಪಾಲುದಾರರಿಂದ ಮೋಸ ಹೋಗುವ ಸಾಧ್ಯತೆ ಇದೆ.

ಧನು: ಮನೆಯಲ್ಲಿ ಹಲವು ಜನಗಳ ಅಕಾಂಕ್ಷೆಗಳನ್ನು ಪೂರೈಸಬೇಕಾದರೂ ನೆಮ್ಮದಿಯ ವಿಷಯವೇನೆಂದರೆ ಖರ್ಚಿಗೆ ತಕ್ಕಂತೆ ಧನಾಗಮನ ಇರುವುದರಿಂದ ಚಿಂತೆ ಇರದು. ಮೇಧಾವಿಗಳಿಂದ ಧನ ಸಂಪಾದನೆ ಹೊಂದುವಿರಿ.

ಮಕರ: ಮನೆಯಲ್ಲಿ ನೆಮ್ಮದಿಯನ್ನು ಕಾಪಾಡುವ ಕಾರಣಕ್ಕಾಗಿ ಹಿರಿಯರನ್ನು ಸುಮ್ಮನಿರಿಸುವಂಥ ಕೆಲಸ ಮಾಡುವಿರಿ. ಕಾರ್ಯಕ್ಷೇತ್ರದಲ್ಲಿನ ಕೆಲಸಗಳನ್ನು ಎಲ್ಲರೂ ಶ್ಲಾಘಿಸುವಂತೆ ಮಾಡಿ ಮುಗಿಸುವಿರಿ. ನೀಲಿ ಶುಭವನ್ನು ತರುವುದು.


ಕುಂಭ: ಜೀವನವನ್ನು ಇನ್ನೊಬ್ಬರೊಂದಿಗೆ ಹೋಲಿಸಿಕೊಂಡು ಜೀವನ ನಡೆಸುವುದು ಸರಿಯಲ್ಲ. ನವದಂಪತಿ ದೀರ್ಘ ಪ್ರಯಾಣದ ನಂತರ ಮನೆಗೆ ಮರಳುವಿರಿ. ಸಾಗರದಾಚೆಗಿನ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮೀನ: ಮುಂಬರುವ ಕಾರ್ಯಕ್ರಮದಲ್ಲಿನ ಆರ್ಥಿಕ ನಿರ್ವಹಣೆಗೆ ಖರ್ಚುಗಳನ್ನು ನಿಲ್ಲಿಸುವಿರಿ. ಪರಿಚಯಸ್ಥರ ಮಗಳಿಗೆ ಯೋಗ್ಯ ವರನನ್ನು ಹುಡುಕಿ ಕೊಡುವಿರಿ. ಮೊಬೈಲ್ ಮಾರಾಟಗಾರರಿಗೆ ವಿಶೇಷ ದಿನವಾಗಬಹುದು.

ಪದಬಂಧ 5787 — ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ (4)
3.ಎಳ್ಳು ನೀರು ಬಿಡುವಿಕೆ ಉಲ್ಟಾ ಆಗಿದೆ (4)
5.ಬಂಗಾರ ಇಲ್ಲಿದೆ (3)
6.ಗುಪ್ತ ನಿಧಿಯಿದು (3)
8.ಕುಲದಲ್ಲೇ ನುಸುಳಿರುವ ಕ್ಷೇಮ (3)
9.ಹಿತವಲ್ಲದ್ದು ಇದು (3)
10.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
12.ವನದಲ್ಲಿ ತ್ಯಜಿಸುವಿಕೆ (3)
14.ಕರುಣೆ ಇಲ್ಲದ ಕ್ರೂರ ಇಲ್ಲಿದ್ದಾನೆ (4)
15.ಕೆಟ್ಟ ನಡವಳಿಕೆಯಿದು (4)

ಮೇಲಿಂದ ಕೆಳಕ್ಕೆ
1.ಹಾಲು ಕರೆಯುವ ಹಸು (4)
2.ಪ್ರಯಾಣಿಕ ಇಲ್ಲಿದ್ದಾನೆ (3)
3.ಪ್ರಾಣಿಗಳನ್ನು ಕತ್ತರಿಸುವವನು (3)
4.ದೊಡ್ಡ ಗಾತ್ರದ ಜಲಚರ (4)
7.ಪರ್ವ ಕಾಲದಲ್ಲಿ ಏರಿದ ಬೆಟ್ಟ (3)
8.ಅಷ್ಟದಿಕ್ಪಾಲಕರಲ್ಲಿ ಈತನೇ ಶ್ರೀಮಂತ (3)
9.ಸ್ಮರಣ ಶಕ್ತಿ ಚನ್ನಾಗಿರುವವನು (4)
11.ಕರದಲ್ಲಿರುವ ದೇಹ (4)
12.ನೀರಿನ ಅಧಿದೇವತೆ (3)
13.ಆಭರಣದೊಡನಿರುವ ಕೈಯಲ್ಲಿನ ಹಣ (3)



5786ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನೆವಾಳ್ತನ 4.ಪ್ರಾಚೀನ
5.ಗಹನ 7.ವಿಪ್ರ
9.ಮರ 10.ಪಕ್ಷ
11.ವಾರಸು 12.ಲಾಭ
13.ಮಂದಿ 14.ಕುಲ
16.ಶಪಥ 18.ವರ್ತಕ
19.ನವೀಕರಣ

ಮೇಲಿಂದ ಕೆಳಕ್ಕೆ
1.ಕವಾಟ 2.ಮನವಿ
3.ನಗರ 4.ಪ್ರಾಯೋಪವೇಶ
6.ನರಭಕ್ಷಕ 8.ಪ್ರವಾದಿ
9.ಮಸುಕು 13.ಮಂಥನ
15.ಲವಣ 17.ಸಂಕರ

ಸುಡೊಕು 6172


2		9			7	1		4
	6							
5		7	4		6	2		3
					5		3	1
	5	1		8			2	
3			9					8
		2		1		8		5
9			7		8		1	
	8			2		4		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6171 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಷೇರುಪೇಟೆ ವಹಿವಾಟು 73



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,017
ಇಂದಿನ ಅಂತ್ಯ	25,052
▲	34
ದಿನದ ಗರಿಷ್ಠ	25,129


ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹231
ಆರ್‌ಎಸ್‌ಎಸ್-5	₹225
ಗುಡ್ ಲಾಟ್	₹208

(ಪ್ರತಿ ಕೆಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು 100ಕ್ಕೆ	₹500
12 ಕ್ಕೆ	₹68
ಮೈಸೂರು 100ಕ್ಕೆ	₹502

₹963 ಕೋಟಿ ತೆರಿಗೆ ಬಾಕಿ: ಎಚ್‌ಯುಎಲ್‌ಗೆ ನೋಟಿಸ್

ನವದೆಹಲಿ (ಪಿಟಿಐ): ದೇಶದ ಪ್ರಮುಖ ಎಫ್‌ಎಂಸಿಜಿ ಕಂಪನಿ ಹಿಂದುಸ್ತಾನ್ ಯೂನಿಲಿವರ್ ಲಿಮಿಟೆಡ್‌ಗೆ ₹963 ಕೋಟಿ ತೆರಿಗೆ ಪಾವತಿ ಬಾಕಿಗೆ ಸಂಬಂಧಿಸಿದಂತೆ ಮುಂಬೈನ ಆದಾಯ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ.

2020ರಲ್ಲಿ ಗ್ಲಾಕ್ಸೊ ಸ್ಮಿತ್‌ಕ್ಲೈನ್ ಕನ್ಸೂಮರ್ ಹೆಲ್ತ್‌ಕೇರ್ ಕಂಪನಿ (ಜಿಎಸ್‌ಕೆಸಿಎಚ್) ಮತ್ತು ಹಿಂದುಸ್ಥಾನ್ ಯೂನಿಲಿವರ್ ನಡುವೆ ₹31,700 ಕೋಟಿ ಮೊತ್ತದ ವಿಲೀನ ಒಪ್ಪಂದ ಪೂರ್ಣಗೊಂಡಿತ್ತು.

ಜಿಎಸ್‌ಕೆಸಿಎಚ್ ಕಂಪನಿಯು ಹಾರ್ಲಿಕ್ಸ್, ಬೂಸ್ಟ್ ಹಾಗೂ ಮಾಲ್ಟೋವಾ ಬ್ರ್ಯಾಂಡ್‌ನ ಒಡೆತನ ಹೊಂದಿತ್ತು. ಈ ಬ್ರ್ಯಾಂಡ್ ಖರೀದಿಗೆ ಎಚ್‌ಯುಎಲ್ ಹೆಚ್ಚುವರಿಯಾಗಿ ₹3,045 ಕೋಟಿ ಪಾವತಿಸಿತ್ತು. ಆದರೆ, ಇದಕ್ಕೆ ಸಂಬಂಧಿಸಿದಂತೆ ತೆರಿಗೆ ಪಾವತಿಸಿಲ್ಲವೆಂದು ನೋಟಿಸ್ ನೀಡಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ನೋಟಿಸ್‌ನಿಂದ ಕಂಪನಿಯ ಕಾರ್ಯಾಚರಣೆಗೆ ಅಡ್ಡಿಯಾಗುವುದಿಲ್ಲ. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)
28-08-2024

ಜಾವಾ 70/80(ಹೊಸ)	11800-11900
ಜಾವಾ 80/90(ಹೊಸ)	11200-11300
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1565)
ಒಂದು ವಾರದ ಡೆಲಿವರಿ	1575 (1560)
ಪಾಮ್ ವಾರದ ಡೆಲಿವರಿ	968 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	930 (930)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹71,500 (71,450)
ಬೆಳ್ಳಿ ಕೆ.ಜಿ ₹85,050 (85,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹309-530
ದ್ವಿತಳಿ (ಬಿ.ವಿ) ₹322-655

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹17200
ಎಸಿ	₹10395
ಆರ್‌ಪಿ	₹20750
ಆರ್‌ಸಿ	₹10325

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹9900-9900
ದಾವಣಗೆರೆ	₹7400-7500
ತಿಪಟೂರು	₹11200-11950

ಹೆಣ್ಣು ಮಕ್ಕಳಿಗೆ ಉದ್ಯೋಗ ತರಬೇತಿ

ಒಂದನೇ ಪುಟದಿಂದ...

‘ಎರಡು ಅಥವಾ ಮೂರು ವಾರದೊಳಗೆ ಈ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಲಾಗುವುದು’ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅನಿಲ್ ಮಲಿಕ್ ಬುಧವಾರ ತಿಳಿಸಿದ್ದಾರೆ.

ಆರಂಭದಲ್ಲಿ 27 ಜಿಲ್ಲೆಯಲ್ಲಿ ಈ ಯೋಜನೆ ಜಾರಿಯಾಗಲಿದೆ. ಬಳಿಕ ಹಂತ ಹಂತವಾಗಿ 218 ಜಿಲ್ಲೆಗಳಿಗೆ ಇದರ ವಿಸ್ತರಣೆಗೆ ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ದೇಶದಲ್ಲಿ ಸಾಂಪ್ರದಾಯಿಕವಲ್ಲದ ಉದ್ಯೋಗಗಳಲ್ಲಿ ದುಡಿಯುವ ಪುರುಷರು ಮತ್ತು ಮಹಿಳೆಯರ ಪ್ರಮಾಣ ಶೇ 25ಕ್ಕಿಂತಲೂ ಕಡಿಮೆಯಿದೆ.

‘ತರಬೇತಿ ಸಂಬಂಧ ಕೇಂದ್ರ ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯದ ಜೊತೆಗೆ ಒಡಂಬಡಿಕೆಗೆ ಸಹಿ ಹಾಕಲಾಗಿದೆ’ ಎಂದು ತಿಳಿಸಿದ್ದಾರೆ.

ನಿಧನ



ಶ್ರೀ ಶಿವಲಿಂಗಯ್ಯ
70 ವರ್ಷಗಳು
ಇವರು ದಿ: 28.08.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 29.08.2024 ಗುರುವಾರ, ಬೆಳಗ್ಗೆ 11.00 ರಿಂದ 1.00 ಗಂಟೆಯೊಳಗೆ ಮೃತರ ಪೂರ್ವಿಕರ ತೋಟ, ಜೋಗೆರಹಳ್ಳಿ, ತಾವರೆಕೆರೆ, ಮಾಗಡಿರಸ್ತೆ, ಬೆಂಗಳೂರು. ಇಲ್ಲಿ ನಡೆಸಲಾಗುವುದು.
ದುಃಖತಪ್ತರು: ಕುಟುಂಬದವರು
ಮೊಬೈಲ್: 8050065200

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಎಂ. ಬಾಬು
(ಬಾಲಾಜಿ ಮೆಡಿಕಲ್ಸ್, ಸೂಲಿಬೆಲೆ) ಖಾಜಿಹೊಸಹಳ್ಳಿ
ಜನನ: 13.09.1974 ನಿಧನ: 29.08.2020
ನಿನ್ನ ನೆನಪು ನಮ್ಮ ಹೃದಯದಲ್ಲಿ ಸದಾ ಹಚ್ಚಹಸಿರಾಗುಳಿದಿದೆ, ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ. ಸದಾ ನಿನ್ನ ಸ್ಮರಿಸುವ.
ಇಂತಿ: ದುಃಖತಪ್ತ ಕುಟುಂಬವರ್ಗದವರು

1ನೇ ವರ್ಷದ ಚಿರಸ್ಮರಣೆ



ದೀಪ್ತಿ ಎಂ
ಜನನ: 04.12.2003 ಮರಣ: 29.08.2023
“ನೀನು ನಮ್ಮ ಹೃದಯದಲ್ಲಿ ಸದಾ ಹಸಿರು ಮತ್ತು ಅವಿಸ್ಮರಣೀಯ”
ಸದಾ ಸ್ಮರಿಸುವ:
ತಂದೆ, ತಾಯಿ ಮತ್ತು ಕುಟುಂಬವರ್ಗ

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಚಿಪ್ಪು	23699-28099	ಸರಕು	57109-81400
ಕೋಕ	18000-28500	ಕೋಕ	8100-24199	**ಸಿದ್ದಾಪುರ**	
ಹೊಸತು	28500-40000	ಫ್ಯಾಕ್ಟರಿ	6869-17011	ಬಿಳಿಗೋಟು	24000-27599
ಹಳತು	40000-47500	ಹಳೆಚಾಲಿ	37309-39509	ಚಾಲಿ	32000-35009
ಕಾರ್ಕಳ		ಹೊಸಚಾಲಿ	32199-35165	ಕೋಕ	22599-26199
ಹೊಸತು	25000-40000	**ಶಿವಮೊಗ್ಗ**		ಕೆಂಪುಗೋಟು	22689-23689
ಹಳತು	30000-47500	ಬೆಟ್ಟೆ	37599-54699	ರಾಶಿ	39469-45829
ಕುಮಟ		ಗೊರಬಲು	17089-32599	ತಟ್ಟಿಬೆಟ್ಟೆ	23689-26889
ಬೆಟ್ಟೆ	20199-29300	ರಾಶಿ	30000-48599		


ರಿಲಯನ್ಸ್–ಡಿಸ್ನಿ ವಿಲೀನಕ್ಕೆ ಅಸ್ತು

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರಿಸ್ ಮತ್ತು ವಾಲ್ಟ್ ಡಿಸ್ನಿ ಲಿಮಿಟೆಡ್ ಆಸ್ತಿಗಳ ವಿಲೀನಕ್ಕೆ ಭಾರತೀಯ ಸ್ಪರ್ಧಾತ್ಮಕ ಆಯೋಗ (ಸಿಸಿಐ) ಬುಧವಾರ ಒಪ್ಪಿಗೆ ನೀಡಿದೆ.

ಆರು ತಿಂಗಳ ಹಿಂದೆ ₹70 ಸಾವಿರ ಕೋಟಿ ಮೊತ್ತದ ಜಂಟಿ ಉದ್ಯಮ ಒಪ್ಪಂದಕ್ಕೆ ಈ ಎರಡು ಕಂಪನಿಗಳು ಸಹಿ ಹಾಕಿದ್ದವು.

ರಿಲಯನ್ಸ್ ಇಂಡಸ್ಟ್ರಿಸ್ ಲಿಮಿಟೆಡ್, ವಯಾಕಾಮ್ 18 ಮೀಡಿಯಾ ಪ್ರೈವೆಟ್ ಲಿಮಿಟೆಡ್, ಡಿಜಿಟಲ್ ಮೀಡಿಯಾ ಲಿಮಿಟೆಡ್, ಸ್ಟಾರ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಮತ್ತು ಸ್ಟಾರ್ ಟೆಲಿವಿಷನ್ ಪ್ರೊಡಕ್ಷನ್ಸ್ ಲಿಮಿಟೆಡ್ ಒಗ್ಗೂಡಲಿವೆ. ಇದು ಕೆಲವು ಸ್ವಯಂಪ್ರೇರಿತ ಮಾರ್ಪಾಡುಗಳಿಗೆ ಒಳಪಟ್ಟಿದೆ ಎಂದು ಸಿಸಿಐ ‘ಎಕ್ಸ್’ನಲ್ಲಿ ತಿಳಿಸಿದೆ.ಒಪ್ಪಂದದ ಪ್ರಕಾರ ಉದ್ಯಮಿ ಮುಕೇಶ್ ಅಂಬಾನಿ ಮಾಲೀಕತ್ವದ ರಿಲಯನ್ಸ್ ಇಂಡಸ್ಟ್ರಿಸ್ ಮತ್ತು ಅದರ ಅಂಗಸಂಸ್ಥೆಗಳು ಶೇ 63.16ರಷ್ಟು ಮತ್ತು ವಾಲ್ಟ್ ಡಿಸ್ನಿ ಶೇ 36.84ರಷ್ಟು ಷೇರುಗಳ ಮೇಲೆ ಒಡೆತನ ಹೊಂದಲಿವೆ.

ನಿಧನ



ಜೀವನದುದ್ದಕ್ಕೂ ಇತರರಿಗೆ ಯೋಗಾಭ್ಯಾಸ ಭೋದಿಸುತ್ತ, ಅನ್ಯರ ಯೋಗಕ್ಷೇಮಕ್ಕಾಗಿ ತುಡಿಯುತ್ತಿದ್ದ ಜೀವಜ್ಯೋತಿ ಎನ್. ದೇವರಾಜೇಗೌಡ (75 ವರ್ಷ)ರವರು, ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದುಃಖತಪ್ತ ಕುಟುಂಬ ಸದಸ್ಯರು ಮತ್ತು ಅಮೆಂಡ್ ಸದಸ್ಯರು
ನಂ. 441, 2ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560085.
ಮೊಬೈಲ್ ನಂ. 7829446611

ಎನ್. ದೇವರಾಜೇಗೌಡ, 75 ವರ್ಷ



ಮತ್ತಷ್ಟು ಎಡವಟ್ಟು; ಪ್ರಶ್ನೆಗಳೇ ತದ್ವಿರುದ್ಧ

ಒಂದನೇ ಪುಟದಿಂದ...

A. The Permanent Lok Adalat were set up after the Lok Adalat Act 2002

ಕನ್ನಡದಲ್ಲಿ ಇದೇ ಪ್ರಶ್ನೆಯ (ಎ) ಆಯ್ಕೆ: ಲೋಕ್ ಅದಾಲತ್ ಅಧಿನಿಯಮ 2022ರ ನಂತರ ಖಾಯಂ ಲೋಕ್ ಅದಾಲತ್ ಸ್ಥಾಪಿಸಲಾಯಿತು.

(ಇಂಗ್ಲಿಷ್‌ನಲ್ಲಿ 2002 ಎಂದಿದ್ದರೆ ಕನ್ನಡದಲ್ಲಿ 2022 ಎಂದಿದೆ)

ಉದಾ–5 (ಪ್ರಶ್ನೆ ಪತ್ರಿಕೆ–2)

ಇಂಗ್ಲಿಷ್ ಪ್ರಶ್ನೆ: Consider the following statements about National Family Health Survey-5 (NFHS)

ಆಯ್ಕೆ C. In Karnataka nearly 30% of men and women (between 15-49 years of age) are overweight or obese

ಕನ್ನಡ ಪ್ರಶ್ನೆ: ಆಯ್ಕೆ ಸಿ. ಕರ್ನಾಟಕದಲ್ಲಿ ಸರಿ ಸುಮಾರು ಪುರುಷ ಮತ್ತು ಮಹಿಳೆಯರು (15–49 ವರ್ಷಗಳ ವಯಸ್ಸಿನ ನಡುವೆ ಇರುವ) ಶೇ 30ರಷ್ಟಿದ್ದಾರೆ

(ಇಲ್ಲಿ overweight (ಅತಿತೂಕ) or obese (ಸ್ಥೂಲಕಾಯರಾಗಿದ್ದಾರೆ) ಎಂಬ ಪದಗಳನ್ನು ಕನ್ನಡಕ್ಕೆ ಅನುವಾದ ಮಾಡಿಲ್ಲ)

ಇವು ಕೆಲವು ಉದಾಹರಣೆಗಳಷ್ಟೇ, ಪ್ರಶ್ನೆ ಪತ್ರಿಕೆಗಳನ್ನು ಓದುತ್ತಾ ಹೋದಂತೆ ಇಂತಹ ಹಲವು ಎಡವಟ್ಟುಗಳು ಕಾಣಸಿಗುತ್ತವೆ.

ಮರುಪರೀಕ್ಷೆಗೆ ಆಗ್ರಹ

ಕನ್ನಡದಲ್ಲಿ ಪೂರ್ವಭಾವಿ ಪರೀಕ್ಷೆ ಬರೆದಿರುವ ಹಲವು ಅಭ್ಯರ್ಥಿಗಳು ಮತ್ತೆ ಪರೀಕ್ಷೆ ನಡೆಸುವಂತೆ ಆಗ್ರಹಿಸಿದ್ದಾರೆ.

‘ನಾನು ಗ್ರಾಮೀಣ ಪ್ರದೇಶದಿಂದ ಬಂದವಳು. ಕನ್ನಡ ಮಾಧ್ಯಮದಲ್ಲಿ ಓದಿದ್ದೇನೆ. ತುಂಬಾ ನಿರೀಕ್ಷೆ ಇಟ್ಟುಕೊಂಡು ಈ ಬಾರಿ ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಗೆ ಸಿದ್ಧತೆ ನಡೆಸಿದ್ದೆ. ಆದರೆ, ಪರೀಕ್ಷೆಯಲ್ಲಿ ಕೊಟ್ಟ ಪ್ರಶ್ನೆಪತ್ರಿಕೆಗಳಲ್ಲಿದ್ದ ಕನ್ನಡವನ್ನು ಓದಲು ಸಾಧ್ಯವಾಗದೇ, ಅತ್ತ ಇಂಗ್ಲಿಷ್ ಗೊತ್ತಿಲ್ಲದೇ ಪರದಾಡಿದೆ. ಕೆಲವು ಪ್ರಶ್ನೆಗಳು ಇಂಗ್ಲಿಷ್‌ನಲ್ಲಿ ಒಂದು ರೀತಿ ಇದ್ದರೆ, ಕನ್ನಡದಲ್ಲಿ ವಿರುದ್ಧವಾಗಿತ್ತು. ಕೆಪಿಎಸ್‌ಸಿಯು ತನ್ನ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಪ್ರಶ್ನೆಪತ್ರಿಕೆಯನ್ನು ಸಿದ್ಧ ಪಡಿಸಿ ನನ್ನಂತಹ ಹಲವರ ಭವಿಷ್ಯವನ್ನೇ ಮಂಕಾಗಿಸಿದೆ’ ಎಂದು ಪರೀಕ್ಷೆ ಬರೆದಿರುವ ಮೈಸೂರಿನ ಅಭ್ಯರ್ಥಿ ಶಶಿ ತಿಳಿಸಿದರು.

‘ತಪ್ಪು ಅಕ್ಷಮ್ಯ, ವರದಿ ಕೇಳಿದ್ದೇನೆ’

‘ಸರ್ಕಾರದ ಅಂಗಸಂಸ್ಥೆಯೊಂದರಿಂದಲೇ ಆಗಿರುವ ಈ ತಪ್ಪು ಅಕ್ಷಮ್ಯ. ಇದನ್ನು ಖಂಡಿಸಿ ನಾನು ಕೆಪಿಎಸ್‌ಸಿ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದು, ಪ್ರಶ್ನೆ ಪತ್ರಿಕೆಗಳ ಕನ್ನಡದ ಪ್ರಶ್ನೆಗಳಲ್ಲಿ ಅಷ್ಟೊಂದು ತಪ್ಪು ಹೇಗಾಯಿತು? ಅದನ್ನು ಸರಿಪಡಿಸಲು ಕ್ರಮ ಕೈಗೊಂಡಿರುವುದರ ಬಗ್ಗೆ ಮೂರು ದಿನಗಳ ಒಳಗೆ ವರದಿ ನೀಡುವಂತೆ ಕೇಳಿದ್ದೇನೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

‘ಪ್ರಶ್ನೆಪತ್ರಿಕೆಗಳನ್ನು ಮೊದಲು ಕನ್ನಡದಲ್ಲಿ ಸಿದ್ಧಪಡಿಸಿ ನಂತರ ಇಂಗ್ಲಿಷ್‌ಗೆ ಅನುವಾದಿಸಬೇಕಿತ್ತು. ನಮ್ಮಲ್ಲಿ ತಜ್ಞ ಅನುವಾದಕರು, ಭಾಷಾ ತಜ್ಞರ ಕೊರತೆ ಏನಿಲ್ಲ. ಕೆಪಿಎಸ್‌ಸಿಯು ಅನುವಾದಕ್ಕೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ, ಗೂಗಲ್ ಟ್ರಾನ್ಸ್‌ಲೇಟ್ ಅನ್ನು ಬಳಸಿದೆ ಎಂದು ತಿಳಿದು ಬಂದಿದೆ’ ಎಂದಿದ್ದಾರೆ.

ಕೆಪಿಎಸ್‌ಸಿ ಕಾರ್ಯದರ್ಶಿಯವರಿಗೆ ಬರೆದ ಪತ್ರದಲ್ಲಿ ಅವರು ‘ಪ್ರಜಾವಾಣಿ’ಯ ಬುಧವಾರದ ಸಂಚಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಲಗತ್ತಿಸಿದ್ದಾರೆ.

ಸಂಕಷ್ಟ ತೀರದ ರೈತರ ಬದುಕು

‘ಬಿಳಿ ಬಂಗಾರ’ ಎಂದು ಕರೆಸಿಕೊಳ್ಳುವ ಬೆಳ್ಳುಳ್ಳಿಗೆ ಮಾರುಕಟ್ಟೆಯಲ್ಲಿ ಬಂಪರ್ ಬೆಲೆ ಬಂದಿದೆ. ಆದರೆ, ಸತತ ಮಳೆಯಿಂದಾಗಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ಬೆಳ್ಳುಳ್ಳಿ ಬೆಳೆದಿರುವ ರೈತರು ಫಸಲು ರಕ್ಷಿಸಿಕೊಳ್ಳಲು ಹರಸಾಹಸಪಡುತ್ತಿದ್ದಾರೆ. ಮತ್ತೊಂದೆಡೆ ಉಷ್ಣಾಂಶ ಏರಿಕೆಯಿಂದಾಗಿ ಕೊಡಗು ಜಿಲ್ಲೆಯಲ್ಲಿ ಮೆಣಸು ಕಾಳುಕಟ್ಟಲು ಸಮಸ್ಯೆಯಾಗಿದೆ. ನೀರಿನ ಕೊರತೆ ನಡುವೆಯೇ ಈ ವರ್ಷ ಇಳುವರಿ ಕುಸಿದ ಆತಂಕ ತಲೆದೋರಿದೆ.

ಬೆಳ್ಳುಳ್ಳಿ ರಕ್ಷಣೆಗೆ ಹರಸಾಹಸ



ಧಾರವಾಡ ಜಿಲ್ಲೆಯ ಗುಡಗೇರಿ ಗ್ರಾಮದಲ್ಲಿ ಬೆಳ್ಳುಳ್ಳಿ ಒಣಗಿಸುವುದರಲ್ಲಿ ನಿರತರಾಗಿರುವ ರೈತರು

● ವಾಸುದೇವ ಎಸ್. ಮುರಗಿ

ಗುಡಗೇರಿ (ಧಾರವಾಡ ಜಿಲ್ಲೆ): ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿಗೆ ಉತ್ತಮ ಬೆಲೆ ಬಂದಿದೆ. ಆದರೆ, ಅದನ್ನು ಸಕಾಲಕ್ಕೆ ಮಾರಾಟ ಮಾಡಲಾಗದೆ ಮತ್ತು ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಬೆಳೆ ರಕ್ಷಿಸಿಕೊಳ್ಳಲು ಆಗದೇ ರೈತರು ಪರದಾಡುವಂತಾಗಿದೆ.

ಕುಂದಗೋಳ ತಾಲ್ಲೂಕಿನ ಪಶುಪತಿಹಾಳ, ಗುಡಗೇರಿ, ಹರಲಾಪುರ, ಕಳಸ, ಸಂಕ್ಲೀಪುರ, ಸುತ್ತಾನಪುರ ಗ್ರಾಮದ 43 ಹೆಕ್ಟೇರ್ ಪ್ರದೇಶದಲ್ಲಿ ರೈತರು ಬೆಳ್ಳುಳ್ಳಿ ಬೆಳೆದಿದ್ದಾರೆ. ಪ್ರಸಕ್ತ ವರ್ಷ ಮುಂಗಾರು ಆರಂಭದಿಂದ ಇಲ್ಲಿಯವರೆಗೂ ಅತಿಹೆಚ್ಚು ಮಳೆ ಸುರಿದಿದೆ. ಬೆಳೆಗೆ ರೋಗ ತಗುಲಿದ್ದು, ಅಲ್ಪಸ್ವಲ್ಪ ಉಳಿದ ಫಸಲು ರಕ್ಷಿಸಿಕೊಳ್ಳಲು ರೈತರು ಹರಸಾಹಸಪಡುತ್ತಿದ್ದಾರೆ.

‘ಬೆಳ್ಳುಳ್ಳಿ ಬೆಳೆ ಕಟಾವಿಗೆ ಬಂದಿದ್ದು, ಮಳೆ ಅಡ್ಡಿಯಾಗಿದೆ. ಕಟಾವು ಮಾಡಿ ಬೆಳೆಯನ್ನು ಮನೆಗೆ ತರಲಾಗದೆ ಹೊಲದಲ್ಲೇ ಬಿಟ್ಟಿದ್ದೇವೆ. ಇನ್ನೂ ಕೆಲವರು ಮನೆಗೆ ತಂದು ಅದನ್ನು ಒಣಗಿಸಲು ಕಷ್ಟಪಡುತ್ತಿದ್ದಾರೆ’ ಎಂದು ರೈತರು ತಿಳಿಸಿದರು.

‘ಬಣವೆ ಹಾಕಿ ಇಟ್ಟರೆ ಕಾವು ಬಂದು ಬೆಳ್ಳುಳ್ಳಿ ಕಪ್ಪಾಗುತ್ತದೆ. ತೆರೆದಿಟ್ಟರೆ ಮಳೆಯಿಂದ ತೊಯ್ದು ಹೋಗುತ್ತದೆ. ಮನೆಯ ಅಂಗಳ, ಖಾಲಿ ಜಾಗದಲ್ಲಿ ತಾಡಪತ್ರೆ ಹಾಕಿ ಅದರ ಮೇಲೆ ಬೆಳ್ಳುಳ್ಳಿ ಒಣಗಿಸುವುದು, ಮಳೆ ಬಂದಾಗ ಮುಚ್ಚುವುದೇ ನಿತ್ಯದ ಕೆಲಸವಾಗಿದೆ’ ಎಂದು ರೈತ ಬಾಹುಬಲಿ ಸೂಮಾಪೂರ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಾಡಿಕೆ ಮಳೆ ಆಗಿದ್ದರೆ ಎಕರೆಗೆ 3 ಕ್ವಿಂಟಲ್‌ಗೂ ಹೆಚ್ಚು ಇಳುವರಿ ಸಿಗುತ್ತಿತ್ತು. ಈ ಸಲ ಹೆಚ್ಚು ಮಳೆಯಿಂದಾಗಿ ಎಕರೆಗೆ 80 ಕೆ.ಜಿಯಿಂದ 1 ಕ್ವಿಂಟಲ್‌ವರೆಗೆ ಮಾತ್ರ ಇಳುವರಿ ಬಂದಿದೆ. 1 ಕ್ವಿಂಟಲ್ ಬೆಳ್ಳುಳ್ಳಿಗೆ ₹ 12 ಸಾವಿರದಿಂದ ₹16 ಸಾವಿರ ಬೆಲೆ ಇದೆ. ಕೈಗೆ ಸಿಗುವಷ್ಟು ಬೆಳೆ ರಕ್ಷಿಸಿಕೊಳ್ಳಲು ಕಷ್ಟಪಡುವಂತಾಗಿದೆ’ ಎಂದು ರೈತ ಮಲ್ಲೇಶ ಗಿರಿಮಲ್ಲ ತಿಳಿಸಿದರು.

ಕಾಳು ಕಟ್ಟದ ಮೆಣಸು

● ಕೆ.ಎಸ್.ಗಿರೀಶ

ಮಡಿಕೇರಿ: ಈ ವರ್ಷ ಉಷ್ಣಾಂಶ ಹೆಚ್ಚಿದ್ದು, ಕಾಳುಮೆಣಸಿನ ಇಳುವರಿ ಕುಸಿಯುವ ಲಕ್ಷಣಗಳು ಗೋಚರಿಸುತ್ತಿವೆ. ಬಳ್ಳಿಗಳಲ್ಲಿ ಕಾಳು ಕಟ್ಟುವುದು ತಡವಾಗುತ್ತಿರುವುದರಿಂದ ಬೆಳೆಗಾರರಲ್ಲಿ ಆತಂಕ ಹೆಚ್ಚಿದೆ.

ದೇಶದಲ್ಲಿ ಕಾಳುಮೆಣಸು ಬೆಳೆಯುವ ರಾಜ್ಯಗಳ ಪೈಕಿ ಕರ್ನಾಟಕವು (5.49 ಲಕ್ಷ ಎಕರೆ) ಮೊದಲ ಸ್ಥಾನದಲ್ಲಿದೆ. ಕೊಡಗು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿಹೆಚ್ಚಾಗಿ ಬೆಳೆಯಲಾಗುತ್ತದೆ.



ರೈತರ ತೋಟವೊಂದರಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಳು ಕಟ್ಟಿರುವ ಮೆಣಸು
ಪ್ರಜಾವಾಣಿ ಚಿತ್ರ: ಸಿ.ಎಸ್ ಸುರೇಶ್

ಉತ್ತಮ ನೀರಾವರಿ ಸೌಲಭ್ಯ ಇರುವ ಪ್ರದೇಶದಲ್ಲಿ ಆತಂಕದ ಸನ್ನಿವೇಶವಿಲ್ಲ. ಆದರೆ, ಹಲವೆಡೆ ಬೇಸಿಗೆಯಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿ, ಕೊಳವೆಬಾವಿಗಳು ಬತ್ತಿದ್ದವು. ತೋಟಗಳಲ್ಲಿದ್ದ ಕೆರೆ–ಕಟ್ಟೆಗಳೂ ಒಣಗಿದ್ದವು. ಸಮರ್ಪಕವಾಗಿ ನೀರು ಹಾಯಿಸದಿರುವ ತೋಟಗಳ ಕಾಳುಮೆಣಸಿನ ಬಳ್ಳಿಗಳಲ್ಲಿ ಕಾಳು ಕಟ್ಟುವಿಕೆ ಕಡಿಮೆಯಾಗಿದೆ.

‘ಬಳ್ಳಿಗಳಿಗೆ ಕಾಡುವ ರೋಗ ನಿಯಂತ್ರಣಕ್ಕೆ ಬೋರ್ಡೋ ದ್ರಾವಣ ಸಿಂಪಡಿಸುವುದು ಸೇರಿ ಹಲವು ಪ್ರಯತ್ನ ಮಾಡಿದ್ದೆವು. ಆದರೆ, ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ಇಳುವರಿ ಇಳಿಮುಖವಾಗಿದೆ’ ಎಂದು ಬಲ್ಲಮಾವಟಿ ಗ್ರಾಮದ ಕೃಷಿಕ ಹೊಸೊಕ್ಲು ಮುತ್ತಪ್ಪ ನೋವು ತೋಡಿಕೊಂಡರು.

‘ಬೇಸಿಗೆಯಲ್ಲಿ ಉಷ್ಣಾಂಶ ಹೆಚ್ಚಿತ್ತು. ಹಲವು ವಾರ ಮಳೆಯಾಗಲಿಲ್ಲ. ಲಭ್ಯ ನೀರು ಕೂಡ ಬೆಳೆಗಾರರಿಗೆ ಸಾಕಾಗಲಿಲ್ಲ’ ಎಂದು ಜಿಲ್ಲಾ ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಯೋಗೇಶ್ ತಿಳಿಸಿದರು.

‘ಕೊಡಗಿನಲ್ಲಷ್ಟೇ ಅಲ್ಲದೆ ಬೇಸಿಗೆಯಲ್ಲಿ ನೀರಿನ ಕೊರತೆ ತಲೆದೋರಿದ ಪ್ರದೇಶಗಳಲ್ಲೂ ಈ ಸಮಸ್ಯೆ ಕಾಣಿಸಿಕೊಂಡಿದೆ’ ಎಂದು ಭಾರತೀಯ ಸಾಂಬಾರ ಬೆಳೆಗಳ ಸಂಶೋಧನಾ ಸಂಸ್ಥೆಯ ಪ್ರಾದೇಶಿಕ ಕೇಂದ್ರದ ಪ್ರಧಾನ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ.ಎಸ್.ಜೆ. ಅಂಕೇಗೌಡ ಹೇಳುತ್ತಾರೆ.

ರಸ್ತೆ ಅಪಘಾತ: ವಾರ್ಷಿಕ 1.5 ಲಕ್ಷ ಜನರು ಸಾವು

ನವದೆಹಲಿ (ಪಿಟಿಐ): ‘ಯುದ್ಧ, ಭಯೋತ್ಪಾದನೆ ಮತ್ತು ನಕ್ಸಲೀಯರ ವಿಧ್ವಂಸಕ ಕೃತ್ಯದಿಂದ ಸಂಭವಿಸುವ ಸಾವುಗಳಿಗಿಂತಲೂ ದೇಶದಲ್ಲಿ ರಸ್ತೆ ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಹೆಚ್ಚಿದೆ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಎಫ್‌ಐಸಿಸಿಐನಿಂದ ಬುಧವಾರ ಹಮ್ಮಿಕೊಂಡಿದ್ದ 6ನೇ ವರ್ಷದ ರಸ್ತೆ ಸುರಕ್ಷತೆ ಪ್ರಶಸ್ತಿ ಪ್ರದಾನ ಮತ್ತು ಸಮಾವೇಶದಲ್ಲಿ ಅವರು ಮಾತನಾಡಿದರು.

ಹೆದ್ದಾರಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಅವೈಜ್ಞಾನಿಕವಾಗಿ ಸಿದ್ಧಪಡಿಸುವ ವಿಸ್ತೃತ ಯೋಜನಾ ವರದಿಗಳಿಂದ ಹೆದ್ದಾರಿಗಳಲ್ಲಿ ಬ್ಲಾಕ್ ಸ್ಪಾಟ್ (ಅಪಘಾತ ವಲಯ) ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಅಪಘಾತಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ ಎಂದರು.

ದೇಶದಲ್ಲಿ ವಾರ್ಷಿಕವಾಗಿ 5 ಲಕ್ಷ ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು, 1.5 ಲಕ್ಷ ಜನರು ಮೃತಪಡುತ್ತಿದ್ದಾರೆ. 3 ಲಕ್ಷ ಜನರು ಗಾಯಗೊಳ್ಳುತ್ತಿದ್ದಾರೆ. ಇದರಿಂದ ದೇಶದ ಜಿಡಿಪಿಗೆ ಶೇ 3ರಷ್ಟು ನಷ್ಟವಾಗುತ್ತಿದೆ ಎಂದು ಹೇಳಿದರು.

‘ಪ್ರತಿ ರಸ್ತೆ ಅಪಘಾತಕ್ಕೂ ಚಾಲಕರನ್ನು ಹರಕೆಯ ಕುರಿ ಮಾಡುತ್ತೇವೆ. ಈ ಬಗ್ಗೆ ನಾನು ಸೂಕ್ಷ್ಮವಾಗಿ ಗಮನಿಸಿದ್ದು, ರಸ್ತೆ ಎಂಜಿನಿಯರ್‌ಗಳ ತಪ್ಪು ಎದ್ದು ಕಾಣುತ್ತದೆ’ ಎಂದರು.

ಒಟ್ಟು ಖಾತೆದಾರರ ಪೈಕಿ ಶೇ 55ರಷ್ಟು ಮಹಿಳೆಯರು

‘ಜನಧನ್’ಗೆ ದಶಕ ಸಂಭ್ರಮ

ನವದೆಹಲಿ (ಪಿಟಿಐ): ‘ಪ್ರಧಾನ ಮಂತ್ರಿ ಜನಧನ್ ಯೋಜನೆಯು ಇಡೀ ವಿಶ್ವದಲ್ಲಿಯೇ ಆರ್ಥಿಕ ಸೇರ್ಪಡೆಗೆ ಅತಿದೊಡ್ಡ ಮಾದರಿಯಾಗಿದೆ. ಬಡವರು ಆರ್ಥಿಕ ಮುಂಚೂಣಿ ಸ್ತರಕ್ಕೆ ಬರಲು ನೆರವಾಗಿದೆ.




ನಿರ್ಮಲಾ ಸೀತಾರಾಮನ್

ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವಹಿಸಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಪಾದಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು 2014ರ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯಂದು ಈ ಯೋಜನೆ ಪ್ರಕಟಿಸಿದ್ದರು. ಅದೇ ತಿಂಗಳ 28ರಂದು ಅಧಿಕೃತವಾಗಿ ಯೋಜನೆಗೆ ಚಾಲನೆ ಸಿಕ್ಕಿತ್ತು. ಈ ಯೋಜನೆ ಜಾರಿಯಾಗಿ ಬುಧವಾರಕ್ಕೆ ಹತ್ತು ವರ್ಷ ಸಂದಿವೆ.

ಇದರ ಅಂಗವಾಗಿ ನಿರ್ಮಲಾ ಸಂದೇಶ ನೀಡಿದ್ದು, ‘ಆರ್ಥಿಕ ಸೇರ್ಪಡೆ ಮತ್ತು ಸಬಲೀಕರಣಕ್ಕೆ ಔಪಚಾರಿಕ ಬ್ಯಾಂಕಿಂಗ್ ಸೇವೆಯ ಅಗತ್ಯವಿದೆ. ಇದು ಸಾರ್ವತ್ರಿಕವಾಗಿ ಹಾಗೂ ಕೈಗೆಟುಕುವಂತಿರಬೇಕು. ಜನಧನ್‌ನಿಂದ ಈ ಆಶಯ ಸಾಕಾರಗೊಂಡಿದೆ’ ಎಂದು ಹೇಳಿದ್ದಾರೆ.



ಆರ್ಥಿಕ ಸಬಲೀಕರಣ: ಮೋದಿ

ನವದೆಹಲಿ (ಪಿಟಿಐ): ‘ಜನಧನ್ ಯೋಜನೆಯು ಖಾತೆದಾರರಿಗೆ ಘನತೆ ತಂದುಕೊಟ್ಟಿದ್ದು, ಸಬಲರಾಗಿಸಿದೆ. ಅಲ್ಲದೆ, ದೇಶದ ಆರ್ಥಿಕತೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

‘ನಾವು 2014ರಲ್ಲಿ ಅಧಿಕಾರಕ್ಕೆ ಬಂದಾಗ ಪರಿಸ್ಥಿತಿ ಭಿನ್ನವಾಗಿತ್ತು. ಸ್ವಾತಂತ್ರ್ಯ ಲಭಿಸಿ 65 ವರ್ಷ ಕಳೆದಿದ್ದರೂ ಹಲವರಿಗೆ ಬ್ಯಾಂಕ್ ಸೇವೆ ಗಗನಕುಸುಮವೇ ಆಗಿತ್ತು’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಈ ಮೊದಲು ಬ್ಯಾಂಕ್ ಖಾತೆ, ಸಣ್ಣ ಉಳಿತಾಯ, ವಿಮೆ ಮತ್ತು ಸಾಲ ಸೌಲಭ್ಯ ಪಡೆಯಲು ಕಷ್ಟಕರವಾಗಿತ್ತು. ಜನಧನ್ ಯೋಜನೆಯು ಈ ಕೊರತೆ ನೀಗಿಸಿದೆ. ದೇಶದ ಬ್ಯಾಂಕಿಂಗ್ ಹಾಗೂ ಹಣಕಾಸು ಸೇವಾ ವ್ಯಾಪ್ತಿಯ ವಿಸ್ತರಣೆಗೆ ನೆರವಾಗಿದೆ ಎಂದು ತಿಳಿಸಿದ್ದಾರೆ.

ಶೇ 67ರಷ್ಟು ಖಾತೆಗಳನ್ನು ಗ್ರಾಮೀಣ ಅಥವಾ ಅರೆ ನಗರ ಪ್ರದೇಶದ ವ್ಯಾಪ್ತಿಯಲ್ಲಿ ತೆರೆಯಲಾಗಿದೆ. ಒಟ್ಟು ಖಾತೆದಾರರ ಪೈಕಿ ಶೇ 55ರಷ್ಟು ಮಹಿಳೆಯರಿದ್ದಾರೆ ಎಂದು ವಿವರಿಸಿದ್ದಾರೆ.

ಅನ್ನಭಾಗ್ಯ: ನಗದಿನ ಬದಲು ‘ದಿನಸಿ ಕಿಟ್’

ಒಂದನೇ ಪುಟದಿಂದ...

ಆದರೆ, ಈ ಹಿಂದೆ ಪ್ರತಿ ವ್ಯಕ್ತಿಗೆ ನೀಡುತ್ತಿದ್ದ ಐದು ಕೆ.ಜಿ ಹೊರತುಪಡಿಸಿ ಹೆಚ್ಚುವರಿ ಅಕ್ಕಿ ಸರಬರಾಜು ಮಾಡಲು ಕೇಂದ್ರ ಒಪ್ಪಿರಲಿಲ್ಲ.

ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ₹34 ನೀಡಿ ಖರೀದಿಸಲು ಸಿದ್ಧವಿರುವುದಾಗಿ ರಾಜ್ಯ ಸರ್ಕಾರ ಹೇಳಿತ್ತು. ಆದರೂ ಕೇಂದ್ರ ನೀಡಿರಲಿಲ್ಲ. ಈಗ ಕೇಂದ್ರವೇ ₹28ರಂತೆ ಪೂರೈಸಲು ಸಿದ್ಧವಿದ್ದರೂ ಖರೀದಿಸಲು ರಾಜ್ಯ ಸರ್ಕಾರ ನಿರಾಕರಿಸಿದೆ. ಕೇಂದ್ರದಿಂದ ಅಕ್ಕಿಗೆ ಯಾಚನೆ ಮಾಡುವ ಬದಲು, ದಿನಸಿ ಕಿಟ್ ವಿತರಿಸುವ ಯೋಜನೆಯನ್ನು ರೂಪಿಸಿದೆ.

ಬಿಪಿಎಲ್ ಕುಟುಂಬದ ಪ್ರತಿ ಸದಸ್ಯರಿಗೆ ಅನ್ನಭಾಗ್ಯದಡಿ ಅಕ್ಕಿ ಹೊಂದಿಸಲು ಸಾಧ್ಯವಾಗದೇ ಹೋದಾಗ ತಲಾ 5 ಕೆ.ಜಿ ಅಕ್ಕಿ ಹಾಗೂ ಪ್ರತಿ ಕೆ.ಜಿ ಅಕ್ಕಿಗೆ ₹34ರಂತೆ ಲೆಕ್ಕಹಾಕಿ ಪ್ರತಿ ಫಲಾನುಭವಿ ಖಾತೆಗೆ ₹170 ನೇರ ಜಮಾ ಮಾಡಲು ಸರ್ಕಾರ ತೀರ್ಮಾನಿಸಿತ್ತು. 2023ರ ಜುಲೈ 10ರಿಂದ ಅಧಿಕೃತ ಚಾಲನೆ ನೀಡಲಾಗಿತ್ತು.

> ಸಮೀಕ್ಷೆಯಲ್ಲಿ ಶೇ 93ರಷ್ಟು ಜನರು ಐದು ಕೆ.ಜಿ. ಅಕ್ಕಿ ಬದಲು ಬೇಳೆ, ಎಣ್ಣೆ ಪೂರೈಸಲು ಬೇಡಿಕೆ ಸಲ್ಲಿಸಿದ್ದಾರೆ. ಕೇಂದ್ರ ಆಹಾರ ಸಚಿವರಿಗೂ ಮನವರಿಕೆ ಮಾಡಿದ್ದೇವೆ
> **ಕೆ.ಎಚ್. ಮುನಿಯಪ್ಪ,** ಆಹಾರ ಸಚಿವ

₹28ಕ್ಕೆ ಅಕ್ಕಿ ನೀಡಲು ಆಹ್ವಾನ; ನಿರಾಕರಣೆ

ಎಫ್‌ಸಿಐ ಇಲ್ಲಿಯವರೆಗೂ ಪ್ರತಿ ಕೆ.ಜಿ. ಅಕ್ಕಿಗೆ ₹34 ದರದಲ್ಲಿ ಅಕ್ಕಿ ಪೂರೈಸುತ್ತಿತ್ತು. ಈಗ ₹28 ದರಲ್ಲಿ ನೀಡಲು ಕೇಂದ್ರ ಸರ್ಕಾರ ಮುಂದೆ ಬಂದಿದೆ. ಈ ಕುರಿತು ರಾಜ್ಯ ಸರ್ಕಾರಕ್ಕೆ ಪತ್ರವನ್ನೂ ಬರೆದಿದೆ.

ಆಹಾರ ಭದ್ರತಾ ಯೋಜನೆ ಅಡಿ ಕೇಂದ್ರ ನೀಡುತ್ತಿರುವ ಐದು ಕೆ.ಜಿ. ಅಕ್ಕಿಯನ್ನಷ್ಟೇ ಪೂರೈಸುವಂತೆ ರಾಜ್ಯ ಸರ್ಕಾರ ಮನವಿ ಮಾಡಿದ್ದು, ಗ್ಯಾರಂಟಿ ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಅಕ್ಕಿ ಖರೀದಿಸದಿರಲು ನಿರ್ಧರಿಸಿದೆ.

ಅಂಕಿ ಅಂಶಗಳು



1.16 ಕೋಟಿ – ಪಡಿತರ ಚೀಟಿದಾರರು	**4.8** ಕೋಟಿ – ಫಲಾನುಭವಿಗಳು
2.29 ಲಕ್ಷ ಟನ್ – ಪ್ರತಿ ತಿಂಗಳು ಅಗತ್ಯವಿದ್ದ ಅಕ್ಕಿ	**₹841.06** ಕೋಟಿ – ತಲಾ ಐದು ಕೆ.ಜಿ. ಅಕ್ಕಿಗೆ ಪ್ರತಿ ತಿಂಗಳ ವೆಚ್ಚ
₹7,763 ಕೋಟಿ – ಒಂದು ವರ್ಷದಲ್ಲಿ ಫಲಾನುಭವಿಗಳ ಖಾತೆಗೆ ಜಮೆ	**₹8,079** ಕೋಟಿ – 2024–25ನೇ ಸಾಲಿನಲ್ಲಿ ಮೀಸಲಿಟ್ಟ ಮೊತ್ತ

ಸಿಗುತ್ತಿರುವುದು ಮೂರೇ ಕೆ.ಜಿ ಅಕ್ಕಿ

ಕೇಂದ್ರದ ಆಹಾರ ಭದ್ರತಾ ಯೋಜನೆ ಸೇರಿದಂತೆ ಅನ್ನಭಾಗ್ಯ ಯೋಜನೆ ಅಡಿ ರಾಜ್ಯದಲ್ಲಿ ಆದ್ಯತಾ ವಲಯದ ಕುಟುಂಬದ ಪ್ರತಿ ಸದಸ್ಯರಿಗೆ ಘೋಷಿಸಿರುವುದು 10 ಕೆ.ಜಿ. ಅಕ್ಕಿ. ಆದರೆ, ವಾಸ್ತವದಲ್ಲಿ ಸಿಗುತ್ತಿರುವುದು ಮೂರು ಕೆ.ಜಿ ಮಾತ್ರ.

10 ಕೆ.ಜಿ.ಯಲ್ಲಿ ಐದು ಕೆ.ಜಿ.ಯ ಹಣವನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುತ್ತಿದೆ. ಉಳಿದ ಐದು ಕೆ.ಜಿ.ಯಲ್ಲಿ ಮೂರು ಕೆ.ಜಿ. ಅಕ್ಕಿ, ಉಳಿದ ಎರಡು ಕೆ.ಜಿ. ರಾಗಿ ಅಥವಾ ಜೋಳ ನೀಡಲಾಗುತ್ತಿದೆ. ಪ್ರಸ್ತುತ 4 ಲಕ್ಷ ಟನ್ ರಾಗಿ, 1 ಲಕ್ಷ ಟನ್ ಜೋಳ ವಿತರಿಸಲಾಗುತ್ತಿದ್ದು. 8 ಲಕ್ಷ ಟನ್ ರಾಗಿ, 3 ಲಕ್ಷ ಟನ್ ಜೋಳ ಹೆಚ್ಚುವರಿ ಖರೀದಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಜಮಾತ್–ಎ–ಇಸ್ಲಾಮಿ ಪಕ್ಷದ ಮೇಲಿನ ನಿಷೇಧ ತೆರವು

ಢಾಕಾ (ಪಿಟಿಐ): ‘ಜಮಾತ್–ಎ–ಇಸ್ಲಾಮಿ’ ಪಕ್ಷದ ಮೇಲೆ ಹೇರಲಾಗಿದ್ದ ನಿಷೇಧವನ್ನು ಬಾಂಗ್ಲಾದೇಶದ ಮೊಹಮ್ಮದ್ ಯೂನಸ್ ಅವರ ನೇತೃತ್ವದ ಮಧ್ಯಂತರ ಸರ್ಕಾರ ಬುಧವಾರ ತೆರವುಗೊಳಿಸಿದೆ.

ಜಮಾತ್–ಎ–ಇಸ್ಲಾಮಿ ಪಕ್ಷವನ್ನು ‘ಉಗ್ರವಾದಿ ಮತ್ತು ಭಯೋತ್ಪಾದಕ’ ಸಂಘಟನೆ ಎಂದು ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ನಿಷೇಧಿಸಿದ್ದರು.

ಪಕ್ಷದ ಮೇಲಿನ ನಿಷೇಧವನ್ನು ಸರ್ಕಾರ ತೆರವುಗೊಳಿಸಿದ್ದು, ಅದು ತನ್ನ ಚಟುವಟಿಕೆ ಗಳನ್ನು ಪುನರಾರಂಭಿಸಬಹುದು ಎಂದು ಬಾಂಗ್ಲಾದ ಗೃಹ ಸಚಿವಾಲಯ ತಿಳಿಸಿದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷವು ಚುನಾವಣಾ ಆಯೋಗದಲ್ಲಿ ನೋಂದಾಯಿಸಿಕೊಳ್ಳಬೇಕಿದೆ. ಈ ಪಕ್ಷವನ್ನು ಚುನಾವಣೆಗಳಲ್ಲಿ ಭಾಗವಹಿಸದಂತೆ 2013ರಲ್ಲಿ ನಿಷೇಧಿಸಲಾಗಿತ್ತು.

ಸಾಮರಸ್ಯ ಇರಲಿ: ‘ಬಾಂಗ್ಲಾದೇಶ ಮತ್ತು ಭಾರತದ ಜತೆ ಸಾಮರಸ್ಯ ಮತ್ತು ಸ್ಥಿರವಾದ ಬಾಂಧವ್ಯ ಇರಬೇಕು ಎಂದು ತಮ್ಮ ಪಕ್ಷ ಬಯಸುತ್ತದೆ’ ಎಂದು ಜಮಾತ್–ಎ–ಇಸ್ಲಾಮಿ ಪಕ್ಷದ ಮುಖ್ಯಸ್ಥರಾದ ಶಫಿಕುರ್ ರಹಮಾನ್ ಪ್ರತಿಪಾದಿಸಿದ್ದಾರೆ.

ಭಾರತ ವಿರೋಧಿಯಲ್ಲ: ‘ಜಮಾತ್–ಎ–ಇಸ್ಲಾಮಿ’ಯು ಭಾರತ ವಿರೋಧಿ ಎಂಬ ಗ್ರಹಿಕೆಯನ್ನು ಭಾರತ ಹೊಂದಿದೆ. ಆದರೆ ಅದು ತಪ್ಪು ಕಲ್ಪನೆ. ‘ಜಮಾತ್–ಎ–ಇಸ್ಲಾಮಿ’ ಬಾಂಗ್ಲಾದೇಶ ಪರ ಇರುವಂತಹದ್ದಾಗಿದ್ದು, ಬಾಂಗ್ಲಾದ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಮಾತ್ರ ಆಸಕ್ತಿ ಹೊಂದಿದೆ. ಅದು ಯಾವುದೇ ದೇಶಗಳ ವಿರೋಧಿ ಅಲ್ಲ’ ಎಂದು ಅವರು ಹೇಳಿದ್ದಾರೆ.

‘ಬಾಂಗ್ಲಾದೇಶದಲ್ಲಿ ಹಿಂದೂ ಸಮುದಾಯದವರ ಮೇಲಿನ ದಾಳಿಯಲ್ಲಿ ಪಕ್ಷ ಭಾಗಿಯಾಗಿಲ್ಲ. ಈ ರೀತಿಯ ಆರೋಪಗಳು ಆಧಾರರಹಿತ’ ಎಂದು ತಿಳಿಸಿದ್ದಾರೆ.

ಪೊಲೀಸರ ಜೊತೆ ಬಿಜೆಪಿ ಕಾರ್ಯಕರ್ತರ ಘರ್ಷಣೆ ● ರಾಜ್ಯದ ಅಲ್ಲಲ್ಲಿ ಹಿಂಸಾಚಾರ

ಬಂಗಾಳ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಕೋಲ್ಕತ್ತ (ಪಿಟಿಐ): 'ನಬನ್ನಾ ಅಭಿಯಾನ್' ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದವರನ್ನು ಗುರಿಯಾಗಿಸಿಕೊಂಡು ಪೊಲೀಸರು ಕೈಗೊಂಡ ಕ್ರಮ ಖಂಡಿಸಿ ಬಿಜೆಪಿ ಕರೆ ನೀಡಿದ್ದ 12 ತಾಸುಗಳ ಪಶ್ಚಿಮ ಬಂಗಾಳ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಅಲ್ಲದೆ, ರಾಜ್ಯದ ಅಲ್ಲಲ್ಲಿ ಹಿಂಸಾಚಾರ ನಡೆದಿದೆ.

ಬಂದ್ ಕರೆಯನ್ನು ಯಶಸ್ವಿಗೊಳಿಸಲು ಬಿಜೆಪಿ ಕಾರ್ಯಕರ್ತರು ಬುಧವಾರ ಮುಂದಾದಾಗ ರಾಜ್ಯದ ಹಲವೆಡೆ ಪೊಲೀಸರ ಜೊತೆ ಸಂಘರ್ಷ ಉಂಟಾಯಿತು. ಬಿಜೆಪಿ ಕಾರ್ಯಕರ್ತರು ಹಾಗೂ ಟಿಎಂಸಿ ಕಾರ್ಯಕರ್ತರ ನಡುವೆಯೂ ಅಲ್ಲಲ್ಲಿ ಸಂಘರ್ಷ ಉಂಟಾಯಿತು. ರಸ್ತೆಯಲ್ಲಿ ಸಂಚಾರಕ್ಕೆ ಅಡ್ಡಿಪಡಿಸಿದ ಕಾರಣಕ್ಕೆ ಬಿಜೆಪಿಯ ಮುಖಂಡರಾದ ರೂಪಾ ಗಂಗೂಲಿ, ಸಮಿಕ್ ಭಟ್ಟಾಚಾರ್ಯ, ಅಗ್ನಿಮಿತ್ರ ಪಾಲ್ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದರು.



12 ತಾಸುಗಳ ಪಶ್ಚಿಮ ಬಂಗಾಳ ಬಂದ್ ಸಂದರ್ಭದಲ್ಲಿ ರಾಜ್ಯ ಸರ್ಕಾರಿ ಸ್ವಾಮ್ಯದ ಬಸ್ ಸಂಚಾರಕ್ಕೆ ಅಡ್ಡಿ ಉಂಟುಮಾಡಲು ಬಿಜೆಪಿ ಕಾರ್ಯಕರ್ತರೊಬ್ಬರು ಸಿಲಿಗುರಿಯಲ್ಲಿ ರಸ್ತೆಗೆ ಅಡ್ಡಲಾಗಿ ಮಲಗಿದರು —ಪಿಟಿಐ ಚಿತ್ರ

ಬಂದ್ ಕರೆಯು ಜನಜೀವನದ ಮೇಲೆ ಭಾಗಶಃ ಪರಿಣಾಮ ಉಂಟು ಮಾಡಿತು. ರಸ್ತೆಗಿಳಿದರೆ ಸಮಸ್ಯೆ ಎದುರಾಗಬಹುದು ಎಂಬ ಭೀತಿಯಿಂದ ಹಲವರು ಮನೆಯಿಂದ ಹೊರಬರಲಿಲ್ಲ.

ರಾಜ್ಯ ರಾಜಧಾನಿ ಕೋಲ್ಕತ್ತದಲ್ಲಿ ಎಂದಿನ ದಟ್ಟಣೆ ಇರಲಿಲ್ಲ. ಬಸ್ಸು, ಆಟೊರಿಕ್ಷಾ ಮತ್ತು ಟ್ಯಾಕ್ಸಿಗಳು ಕಡಿಮೆ ಸಂಖ್ಯೆಯಲ್ಲಿ ಸಂಚರಿಸಿದವು. ಖಾಸಗಿ ವಾಹನಗಳ ಸಂಚಾರ ಕೂಡ ಕಡಿಮೆ ಇತ್ತು. ಆದರೆ ಮಾರುಕಟ್ಟೆಗಳು, ಅಂಗಡಿಗಳು ತೆರೆದಿದ್ದವು.

ಶಾಲೆ ಹಾಗೂ ಕಾಲೇಜುಗಳು ತೆರೆದಿದ್ದರೂ ವಿದ್ಯಾರ್ಥಿಗಳ ಹಾಜರಾತಿ ಕಡಿಮೆ ಇತ್ತು. ಕೋಲ್ಕತ್ತದ ಹಲವು ಇಂಗ್ಲಿಷ್ ಮಾಧ್ಯಮ ಶಾಲೆಗಳು ತರಗತಿ ನಡೆಸಲಿಲ್ಲ. ಖಾಸಗಿ ಕಚೇರಿಗಳಲ್ಲಿ ಹಾಜರಾತಿ ಕಡಿಮೆ ಇತ್ತು. ಅಲ್ಲಿನ ನೌಕರರಿಗೆ ಮನೆಯಿಂದಲೇ ಕೆಲಸ ಮಾಡುವಂತೆ ಸೂಚಿಸಲಾಗಿತ್ತು. ಆದರೆ ಸರ್ಕಾರಿ ಕಚೇರಿಗಳಲ್ಲಿ ಹಾಜರಾತಿಯು ಎಂದಿನಂತೆಯೇ ಇತ್ತು.

ಬಂದ್ ಮಾಡಿಸಲು ಯತ್ನಿಸುತ್ತಿದ್ದ ಬಿಜೆಪಿಯ ಹಲವು ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.

ಬಂದರುಗಳಲ್ಲಿ ಕಾರ್ಯಾಚರಣೆಯು ಸಹಜವಾಗಿತ್ತು. ಐ.ಟಿ. ವಲಯದ ಮೇಲೆ ಹಾಗೂ ಪ್ರಮುಖ ಕೈಗಾರಿಕೆಗಳ ಮೇಲೆ ಬಂದ್ ಯಾವುದೇ ಪರಿಣಾಮ ಬೀರಲಿಲ್ಲ ಎಂದು ಮೂಲಗಳು ಹೇಳಿವೆ.

ಡಾ. ಸಂದೀಪ್ ಘೋಷ್ ಅಮಾನತು: ಆರ್.ಜಿ. ಕರ್ ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್ ಅವರನ್ನು ಭಾರತೀಯ ವೈದ್ಯಕೀಯ ಸಂಸ್ಥೆಯು (ಐಎಂಎ) ಸದಸ್ಯತ್ವದಿಂದ ಅಮಾನತುಗೊಳಿಸಿದೆ.

'ಪ್ರಕರಣದ ಸೂಕ್ಷ್ಮವನ್ನು ಅರಿತು ಕ್ರಮ ಕೈಗೊಳ್ಳುವಲ್ಲಿ ನೀವು ವಿಫಲರಾಗಿದ್ದೀರಿ. ಹೀಗಾಗಿ ಸಂಸ್ಥೆಯ ಸದಸ್ಯತ್ವದಿಂದ ಅಮಾನತುಗೊಳಿಸಿದ್ದೇವೆ' ಎಂದು ಸಂದೀಪ್ ಘೋಷ್ ಅವರಿಗೆ ಹೇಳಲಾಗಿದೆ ಎಂದು ಐಎಂಎ ತಿಳಿಸಿದೆ.

ಕಾರ್ಯಕರ್ತರ ಮೇಲೆ ಗುಂಡು: ಬಿಜೆಪಿ ಆರೋಪ

ಉತ್ತರ 24 ಪರಗಣ ಜಿಲ್ಲೆಯಲ್ಲಿ ಟಿಎಂಸಿ ಗೂಂಡಾಗಳು ಸ್ಥಳೀಯ ಬಿಜೆಪಿ ಮುಖಂಡ ಪ್ರಿಯಾಂಗು ಪಾಂಡೆ ಅವರ ಕಾರಿನ ಮೇಲೆ ಹಲವು ಸುತ್ತು ಗುಂಡು ಹಾರಿಸಿದರು ಎಂದು ಬಿಜೆಪಿ ಆರೋಪಿಸಿದೆ. ಇದಕ್ಕೆ ಸಂಬಂಧಿಸಿದ್ದು ಎನ್ನಲಾದ ವಿಡಿಯೊ ಒಂದನ್ನು ಅದು ಹಂಚಿಕೊಂಡಿದೆ.

ಕಾರಿನ ಚಾಲಕ ಹಾಗೂ ಪಕ್ಷದ ಕಾರ್ಯಕರ್ತರೊಬ್ಬರಿಗೆ ತಲೆಗೆ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ. ಆದರೆ ಈ ಇಬ್ಬರನ್ನು ಯಾರೋ ಹೊಡೆದಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

'ಟಿಎಂಸಿ ನಿಷ್ಠ ದುಷ್ಕರ್ಮಿಗಳು ಗುಂಡು ಹಾರಿಸಿದರು. ಪೊಲೀಸರು ನಮ್ಮ ಸುತ್ತ ಇಲ್ಲದಿದ್ದರೆ ಜನರ ಶಕ್ತಿ ಹೇಗಿರುತ್ತದೆ ಎಂಬುದನ್ನು ನಾವು ಟಿಎಂಸಿಗೆ ತೋರಿಸುತ್ತೇವೆ' ಎಂದು ಬಿಜೆಪಿ ಮುಖಂಡ ಅರ್ಜುನ್ ಸಿಂಗ್ ಹೇಳಿದರು.

ಬಂದ್ ವೇಳೆ ಕಂಡಿದ್ದು

- ಮೆರವಣಿಗೆ ನಡೆಸಿದ ಬಿಜೆಪಿಯ ಪಶ್ಚಿಮ ಬಂಗಾಳ ಘಟಕದ ಅಧ್ಯಕ್ಷ ಸುಕಾಂತ ಮಜುಮ್ದಾರ್
- ಬಂದ್ ಮಾಡುವಂತೆ ಒತ್ತಾಯಿಸುತ್ತಿದ್ದ ಕಾರಣಕ್ಕೆ ಬಿಜೆಪಿ ಸಂಸದ ಮನೋಜ್ ತಿಗ್ಗಾ ಬಂಧನ
- 49 ಕಡೆಗಳಲ್ಲಿ ರೈಲು ಸಂಚಾರಕ್ಕೆ ಅಡ್ಡಿ
- ಕೂಚ್ ಬಿಹಾರ್, ಆಲಿಪುರದ್ವಾರ್, ಸಿಲಿಗುರಿ, ಪುರುಲಿಯಾ, ಬಂಕುರಾ ಮತ್ತು ಮಾಲ್ದಾದಲ್ಲಿ ಬಿಜೆಪಿ ಪ್ರತಿಭಟನೆಯ ಕಾರಣದಿಂದಾಗಿ ಸಾರ್ವಜನಿಕ ಸಾರಿಗೆ ವಾಹನಗಳ ಸಂಚಾರಕ್ಕೆ ತೊಂದರೆ

ಮಹಿಳೆಯರ ಮೇಲಿನ ದೌರ್ಜನ್ಯ: ಆತ್ಮಾವಲೋಕನ ಅಗತ್ಯ–ಮುರ್ಮು

ನವದೆಹಲಿ (ಪಿಟಿಐ): ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿ, ಕೃತ್ಯವನ್ನು ಕಟು ಶಬ್ದಗಳಲ್ಲಿ ಖಂಡಿಸಿದ್ದಾರೆ. ಮಹಿಳೆಯರ ಮೇಲಿನ ನಿರಂತರ ದೌರ್ಜನ್ಯಕ್ಕೆ ಕಳವಳ ಕೂಡ ವ್ಯಕ್ತಪಡಿಸಿದ್ದಾರೆ.



ಮಹಿಳೆಯರ ವಿರುದ್ಧದ ಕೃತ್ಯಗಳನ್ನು ಬುಡಸಮೇತ ಕಿತ್ತುಹಾಕಲು ಆತ್ಮಾವಲೋಕನ ಅಗತ್ಯ ಎಂದು ಅವರು 'ಪಿಟಿಐ'ಗೆ ಬರೆದಿರುವ ಲೇಖನದಲ್ಲಿ ಪ್ರತಿಪಾದಿಸಿದ್ದಾರೆ.

'ಕೋಲ್ಕತ್ತದ ಪ್ರಕರಣವು ಇಡೀ ದೇಶಕ್ಕೇ ಆಘಾತ ಉಂಟುಮಾಡಿದೆ. ಕೃತ್ಯದ ವಿರುದ್ಧ ವಿದ್ಯಾರ್ಥಿಗಳು, ವೈದ್ಯರು, ಸಾರ್ವಜನಿಕರು ಹೋರಾಟ ನಡೆಸುತ್ತಿದ್ದಾರೆ. ಆದರೆ ಕ್ರಿಮಿನಲ್‌ಗಳು ಬೇಟೆ ಅರಸಿ ಸುತ್ತುತ್ತಿದ್ದಾರೆ. ಶಿಶುವಿಹಾರದ ಮಕ್ಕಳೂ ಸಂತ್ರಸ್ತರಾಗಿದ್ದಾರೆ. ತಮ್ಮ ಮಕ್ಕಳು ಮತ್ತು ಸಹೋದರಿಯರನ್ನು ಇಂಥ ದೌರ್ಜನ್ಯಕ್ಕೆ ಗುರಿಮಾಡಲು ಯಾವ ನಾಗರಿಕ ಸಮಾಜವೂ ಅವಕಾಶ ನೀಡುವುದಿಲ್ಲ. ಇಡೀ ದೇಶವೇ ಕ್ರುದ್ಧವಾಗಿದೆ. ನಾನೂ ಕ್ರೋಧಿತಳಾಗಿದ್ದೇನೆ' ಎಂದು ಹೇಳಿದ್ದಾರೆ.

ಆತ್ಮರಕ್ಷಣೆ ತರಬೇತಿ ಅಗತ್ಯ: ರಕ್ಷಾಬಂಧನ ದಿನದಂದು ರಾಷ್ಟ್ರಪತಿ ಭವನಕ್ಕೆ ಬಂದ ಶಾಲಾ ಮಕ್ಕಳು, 'ನಿರ್ಭಯಾ ರೀತಿ ಪ್ರಕರಣಗಳು ಭವಿಷ್ಯದಲ್ಲಿ ನಡೆಯುವುದಿಲ್ಲ ಎಂದು ಭರವಸೆ ನೀಡುತ್ತೀರಾ? ಎಂದು ಮುಗ್ಧತೆಯಿಂದ ಕೇಳಿದ್ದರು. ನಾಗರಿಕರ ರಕ್ಷಣೆಗೆ ದೇಶವು ಬದ್ಧವಾಗಿದೆ, ಎಲ್ಲರಿಗೂ ಅದರಲ್ಲೂ ಹೆಣ್ಣುಮಕ್ಕಳು ಆತ್ಮರಕ್ಷಣೆ ಮತ್ತು ಮಾರ್ಷಲ್ ಆರ್ಟ್ ತರಬೇತಿ ಪಡೆಯುವುದು ಅಗತ್ಯ ಎಂದು ತಿಳಿಸಿರುವೆ. ಆದರೆ ಮಕ್ಕಳ ಮುಗ್ಧ ಪ್ರಶ್ನೆಗೆ ಪೂರ್ಣ ಉತ್ತರವನ್ನು ಸಮಾಜವೇ ನೀಡಬೇಕು' ಎಂದು ಹೇಳಿದ್ದಾರೆ.

ನಟ ಸಿದ್ದೀಕ್ ವಿರುದ್ಧ ಪ್ರಕರಣ ದಾಖಲು

ತಿರುವನಂತಪುರ: ನಟಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದ ಮೇಲೆ ಮಲಯಾಳ ಚಿತ್ರನಟ ಸಿದ್ದೀಕ್ ವಿರುದ್ಧ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಚಿತ್ರರಂಗದ ಹಲವು ಗಣ್ಯರ ವಿರುದ್ಧ ಲೈಂಗಿಕ ಆರೋಪಗಳನ್ನು ಮಾಡಿರುವ ಇತರ ಮಹಿಳೆಯರ ಹೇಳಿಕೆಯನ್ನು ವಿಶೇಷ ತನಿಖಾ ತಂಡವು ದಾಖಲಿಸಿಕೊಳ್ಳಲು ಆರಂಭಿಸಿದೆ. ಲೈಂಗಿಕ ಕಿರುಕುಳ ಸಂಬಂಧ ಪೊಲೀಸರು ಇದುವರೆಗೆ 15ಕ್ಕೂ ಹೆಚ್ಚು ದೂರುಗಳನ್ನು ಸ್ವೀಕರಿಸಿದ್ದಾರೆ. ಮಹಿಳಾ ಐಪಿಎಸ್ ಅಧಿಕಾರಿಗಳನ್ನೊಳಗೊಂಡ ವಿಶೇಷ ತನಿಖಾ ತಂಡ ಈ ಪ್ರಕರಣಗಳ ತನಿಖೆ ನಡೆಸಲಿದೆ. ಸಂತ್ರಸ್ತರ ಹೇಳಿಕೆಗಳನ್ನು ದಾಖಲಿಸಿಕೊಂಡ ನಂತರ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗುವುದು. ಕೆಲವು ಆರೋಪಿಗಳು ಸಲ್ಲಿಸಿರುವ ಪ್ರತಿ ದೂರುಗಳನ್ನೂ ವಿಶೇಷ ತನಿಖಾ ತಂಡ ಪರಿಗಣಿಸಲಿದೆ.

'ಅತ್ಯಾಚಾರಿಗೆ ಮರಣದಂಡನೆ'

ಕಾಯ್ದೆ ತಿದ್ದುಪಡಿಗೆ ಕ್ರಮ: ಪಶ್ಚಿಮ ಬಂಗಾಳ ಸಿ.ಎಂ ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಅತ್ಯಾಚಾರದಂತಹ ಕೃತ್ಯಗಳನ್ನು ರಾಜ್ಯ ಸರ್ಕಾರ ಸಹಿಸುವುದಿಲ್ಲ ಎಂದಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಅತ್ಯಾಚಾರಿಗಳಿಗೆ ಮರಣದಂಡನೆ ವಿಧಿಸಲು ಅನುವಾಗುವಂತೆ ಕಾಯ್ದೆಗೆ ತಿದ್ದುಪಡಿ ತರುತ್ತೇವೆ' ಎಂದು ಹೇಳಿದ್ದಾರೆ.

'ವಿಧಾನಸಭೆಯಲ್ಲಿ ಮುಂದಿನ ವಾರ ತಿದ್ದುಪಡಿ ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆಯುತ್ತೇವೆ. ಇದಕ್ಕೆ ರಾಜ್ಯಪಾಲರು ಅನುಮೋದನೆ ನೀಡುವುದನ್ನು ವಿಳಂಬ ಮಾಡಿದರೆ, ರಾಜಭವನದ ಎದುರೇ ಧರಣಿ ಕೂರುತ್ತೇನೆ' ಎಂದೂ ಬುಧವಾರ ಘೋಷಿಸಿದರು.

ಅತ್ಯಾಚಾರ ಪ್ರಕರಣದ ಅಪರಾಧಿಗಳಿಗೆ ಕಠಿಣ ಸಜೆ ವಿಧಿಸಲು ಆಗುವಂತೆ ಕಾಯ್ದೆ ರೂಪಿಸಬೇಕು ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಶನಿವಾರದಿಂದ ಟಿಎಂಸಿ ಪಕ್ಷವು ಅಭಿಯಾನ ಆರಂಭಿಸಲಿದೆ ಎಂದು ಪ್ರಕಟಿಸಿದರು.



ಕೋಲ್ಕತ್ತದಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಕೃತ್ಯ ಖಂಡಿಸಿ, ತರಬೇತಿ ತರಬೇತಿ ಪಡೆಯುತ್ತಿರುವ ವೈದ್ಯರು ಬುಧವಾರ ಪ್ರತಿಭಟನಾ ಜಾಥಾ ನಡೆಸಿದರು —ಪಿಟಿಐ ಚಿತ್ರ

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಕಳೆದ 20 ದಿನಗಳಿಂದ ಮುಷ್ಕರ ನಡೆಸುತ್ತಿರುವ ವೈದ್ಯರು ಕೂಡಲೇ ಸೇವೆಗೆ ಮರಳಬೇಕು' ಎಂದು ಮನವಿ ಮಾಡಿದರು.

ಇಲ್ಲಿನ ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿ ತರಬೇತಿ ಪಡೆಯುತ್ತಿದ್ದ ವೈದ್ಯ ವಿದ್ಯಾರ್ಥಿನಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಅವರ ಮೇಲೆ ಆಗಸ್ಟ್ 9ರಂದು ಅತ್ಯಾಚಾರ ನಡೆದು, ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ತಪ್ಪಿತಸ್ಥನ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ವೈದ್ಯರು ಮುಷ್ಕರ ನಡೆಸುತ್ತಿದ್ದಾರೆ.

'ಈ ಪ್ರಕರಣದ ತನಿಖೆಯನ್ನು ಸಿಬಿಐ ಆರಂಭಿಸಿ ಈಗಾಗಲೇ 16 ದಿನ ಕಳೆದಿವೆ. ನ್ಯಾಯ ಎಲ್ಲಿದೆ' ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

12 ಗಂಟೆ ಬಂದ್‌ಗೆ ಕರೆ ನೀಡಿರುವ ಬಿಜೆಪಿ ವಿರುದ್ಧ ಹರಿಹಾಯ್ದ ಅವರು, 'ರಾಜಕೀಯ ಲಾಭ ಪಡೆಯಲು ಬಿಜೆಪಿ ಯತ್ನಿಸುತ್ತಿದ್ದು, ಅದೇ ಕಾರಣಕ್ಕೆ ಬಂದ್‌ಗೆ ಕರೆ ನೀಡಿದೆ. ಪಶ್ಚಿಮ ಬಂಗಾಳ ಸರ್ಕಾರಕ್ಕೆ ಕಳಂಕ ತರುವುದು ಬಿಜೆಪಿ ಗುರಿಯಾಗಿದೆ' ಎಂದರು.

ಬಿಜೆಪಿಯು ಎಐ ತಂತ್ರಜ್ಞಾನ ಬಳಸಿಕೊಂಡು ದೊಡ್ಡ ಪ್ರಮಾಣದಲ್ಲಿ ಸೈಬರ್ ಅಪರಾಧದಲ್ಲಿ ತೊಡಗಿದೆ. ಇದೂ ಸಮಸ್ಯೆ ಉಲ್ಬಣಿಸಲು ಕಾರಣವಾಗಿದೆ ಎಂದು ಆರೋಪಿಸಿದರು.

'ನಬನ್ನಾ ಅಭಿಯಾನ್' ನೆಪದಲ್ಲಿ ಹಿಂಸಾಚಾರ ನಡೆಸಿದ್ದನ್ನು ಹತ್ತಿಕ್ಕಲು ಪೊಲೀಸರು ಯತ್ನಿಸಿದರು ಎಂದರು.

ಗೋವಾ: ಪಾಕಿಸ್ತಾನ ಮೂಲದ ಕ್ರಿಶ್ಚಿಯನ್‌ಗೆ ಮೊದಲ 'ಸಿಎಎ' ಪತ್ರ

ಪಣಜಿ: ಪಾಕಿಸ್ತಾನ ಮೂಲದ 78 ವರ್ಷ ವಯಸ್ಸಿನ ಕ್ರಿಶ್ಚಿಯನ್ ಧರ್ಮದ ಜೋಸೆಫ್ ಫ್ರಾನ್ಸಿಸ್ ಫೆರೀರಾ ಎನ್ನುವ ವ್ಯಕ್ತಿಗೆ ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಬುಧವಾರ ಪೌರತ್ವ ಪ್ರಮಾಣಪತ್ರವನ್ನು ಹಸ್ತಾಂತರಿಸಿದರು. ಅವರು ಪೌರತ್ವ (ತಿದ್ದುಪಡಿ) ಕಾಯ್ದೆಯ (ಸಿಎಎ) ಅನುಸಾರ ಭಾರತದ ಪೌರತ್ವ ಪಡೆದ ಗೋವಾದ ಮೊದಲ ವ್ಯಕ್ತಿಯಾಗಿದ್ದಾರೆ.



ಫೆರೀರಾ ಅವರಿಗೆ ಗೋವಾ ಸಿ.ಎಂ ಪ್ರಮೋದ್ ಸಾವಂತ್ ಪೌರತ್ವ ಪ್ರಮಾಣಪತ್ರ ನೀಡಿದರು ಪಿಟಿಐ ಚಿತ್ರ

ದಕ್ಷಿಣ ಗೋವಾದ ಪರೋಡ ಗ್ರಾಮದವರಾದ ಜೋಸೆಫ್, ವಿದ್ಯಾಭ್ಯಾಸಕ್ಕಾಗಿ ಪಾಕಿಸ್ತಾನಕ್ಕೆ ತೆರಳಿದ್ದವರು, ಉದ್ಯೋಗ ಹಿಡಿದು ಅಲ್ಲಿಯೇ ನೆಲೆಸಿದ್ದರು. ಪಾಕಿಸ್ತಾನದ ಪೌರತ್ವ ಪಡೆದಿದ್ದ ಅವರು ಕರಾಚಿಯಲ್ಲಿ ವಾಸವಾಗಿದ್ದರು. ಅವರು 2013ರಲ್ಲಿ ಭಾರತಕ್ಕೆ ಹಿಂದಿರುಗಿದ್ದರು. ಜೋಸೆಫ್ ಗೋವಾದ ಮಹಿಳೆಯನ್ನು ಮದುವೆ ಆಗಿದ್ದರೂ, ಭಾರತದ ಪೌರತ್ವ ಸಿಕ್ಕಿರಲಿಲ್ಲ. ನರೇಂದ್ರ ಮೋದಿ ಅವರ ಸರ್ಕಾರವು ಪೌರತ್ವ ಕಾಯ್ದೆಗೆ ತಿದ್ದುಪಡಿ ಮಾಡಿದ್ದರಿಂದಾಗಿ ಅವರಿಗೆ ಪೌರತ್ವ ಪಡೆಯಲು ಸಾಧ್ಯವಾಯಿತು ಎಂದರು.

26ಕ್ಕೆ ಏರಿದ ಸಾವು ● ಅಪಾಯದ ಮಟ್ಟ ಮೀರಿದ 24 ನದಿಗಳು

ಗುಜರಾತ್: ಭಾರಿ ಮಳೆ, 19 ಸಾವು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಕೆಲವೆಡೆ ಸತತ ನಾಲ್ಕನೇ ದಿನ ಬುಧವಾರವೂ ಧಾರಾಕಾರ ಮಳೆಯಾಗಿದ್ದು, ಮಳೆ ಸಂಬಂಧಿತ ಅವಘಡಗಳಲ್ಲಿ 19 ಮಂದಿ ಮೃತಪಟ್ಟಿದ್ದಾರೆ. ಮೃತರ ಸಂಖ್ಯೆ ಮೂರು ದಿನದಲ್ಲಿ 26ಕ್ಕೆ ಏರಿದೆ.

ಸುಮಾರು 17,800 ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ಎಸ್‌ಡಿಆರ್‌ಎಫ್, ಸೇನೆ, ಕರಾವಳಿ ಕಾವಲು ಪಡೆಗಳನ್ನು ರಕ್ಷಣಾ ಕಾರ್ಯಗಳಿಗೆ ನಿಯೋಜಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಂದ ಪರಿಸ್ಥಿತಿಯ ಮಾಹಿತಿ ಪಡೆದರು.

'ಗೋಡೆ ಕುಸಿತ ಹಾಗೂ ನೀರಿನಲ್ಲಿ ಮುಳುಗಿದ ಪ್ರತ್ಯೇಕ ಅವಘಡಗಳಲ್ಲಿ ಒಂಬತ್ತು ಜನರು ಮೃತಪಟ್ಟಿದ್ದಾರೆ. ಸೋಮವಾರ 7 ಜನ ಮೃತಪಟ್ಟಿದ್ದರು ಮತ್ತು ಆನಂದ್ ಜಿಲ್ಲೆಯಲ್ಲಿ ಗೋಡೆ ಕುಸಿದು ಮೂವರು ಮೃತಪಟ್ಟಿದ್ದರು' ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಜುನಾಗಢ ಮತ್ತು ಭರೂಚ್ ಜಿಲ್ಲೆಗಳಲ್ಲಿ ತಲಾ ಒಬ್ಬರು ಮುಳುಗಿ ಸತ್ತಿದ್ದಾರೆ. ಖೇಡಾ, ಮೊರ್ಬಿ ಜಿಲ್ಲೆಗಳಲ್ಲಿ 169 ಜನರನ್ನು ರಕ್ಷಿಸಲಾಗಿದೆ.

ಸೌರಾಷ್ಟ್ರ ವಲಯದಲ್ಲಿ ದೇವ್‌ಭೂಮಿ ದ್ವಾರಕಾ, ಜಾಮ್‌ನಗರ, ಪೋರಬಂದರ್ ಸೇರಿ ಹಲವು ಜಿಲ್ಲೆಗಳಲ್ಲಿ ಕಳೆದ 24 ಗಂಟೆಗಳಲ್ಲಿ ಭಾರಿ ಮಳೆಯಾಗಿದೆ. ಜಾಮ್‌ನಗರದಲ್ಲಿ 38.7 ಸೆಂ.ಮೀ. ಮಳೆ ಸುರಿದಿದೆ.



ಬಿಜೆಪಿ ನಾಯಕಿ ರಿವಾಬಾ ಜಡೇಜಾ ಪ್ರವಾಹ ಪೀಡಿತ ಜಾಮ್‌ನಗರ್‌ದಲ್ಲಿ ಸ್ಥಳ ಪರಿಶೀಲಿಸಿದರು —ಪಿಟಿಐ ಚಿತ್ರ

ರಾಜಸ್ಥಾನದಲ್ಲೂ ಭಾರಿ ಮಳೆ

ಜೈಪುರ (ಪಿಟಿಐ): ರಾಜಸ್ಥಾನದ ಹಲವೆಡೆ ಬುಧವಾರ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ. ಹವಾಮಾನ ಇಲಾಖೆ ಪ್ರಕಾರ, ಮೌಂಟ್ ಅಬುವಿನಲ್ಲಿ ಗರಿಷ್ಠ ಅಂದರೆ 8.2 ಸೆಂ.ಮೀ. ಮಳೆಯಾಗಿದೆ. ಸೆಪ್ಟೆಂಬರ್ ಮೊದಲ ವಾರವು ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

13 ತಾಲ್ಲೂಕುಗಳಲ್ಲಿ 20 ಸೆಂ.ಮೀಗೂ ಹೆಚ್ಚು ಮಳೆಯಾಗಿದೆ. ರಾಜ್ಯದಲ್ಲಿ 137 ಜಲಾಶಯಗಳು, ಕೆರೆಗಳು, 24 ನದಿಗಳು ಅಪಾಯಮಟ್ಟ ಮೀರಿ ಹರಿಯುತ್ತಿವೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಭಾರಿ ಮಳೆ ಹಿನ್ನೆಲೆಯಲ್ಲಿ ವಂದೇಭಾರತ್ ಸೇರಿದಂತೆ 10 ರೈಲುಗಳ ಸಂಚಾರ ಭಾಗಶಃ ರದ್ದಾಗಿದೆ. ಹವಾಮಾನ ಇಲಾಖೆ ಪ್ರಕಾರ, ಗುಜರಾತ್‌ನಲ್ಲಿ ವಾರ್ಷಿಕ ವಾಡಿಕೆ ಮಳೆಗಿಂತ ಶೇ 105ರಷ್ಟು ಮಳೆ ಹೆಚ್ಚು ಸುರಿದಿದೆ.

ವಡೋದರಾ ನಗರದಲ್ಲಿ ಹಲವು ಭಾಗಗಳು ಜಲಾವೃತಗೊಂಡಿವೆ. ರಕ್ಷಣೆಗೆ ಸೇನೆಯ ನೆರವು ಪಡೆಯಲಾಗಿದೆ. ಕೆಲವೆಡೆ 10ರಿಂದ 12 ಅಡಿಯಷ್ಟು ನೀರು ನಿಂತಿದೆ ಎಂದು ಆರೋಗ್ಯ ಸಚಿವ ಹೃಷಿಕೇಶ್ ಪಟೇಲ್ ಹೇಳಿದ್ದಾರೆ.

ಅಜ್ವಾ ಅಣೆಕಟ್ಟಿನಿಂದ ನೀರು ಬಿಟ್ಟಿರುವ ಕಾರಣ ವಿಶ್ವಾಮಿತ್ರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಮುಂಜಾಗ್ರತೆಯಾಗಿ ಜಿಲ್ಲಾಡಳಿತ ಶಾಲೆಗಳಿಗೆ ರಜೆ ಘೋಷಿಸಿದೆ.

ಪರಿಹಾರ, ರಕ್ಷಣಾ ಕಾರ್ಯದಲ್ಲಿ ಸಂತ್ರಸ್ತರಿಗೆ ಮತ್ತು ಆಡಳಿತಕ್ಕೆ ಸಾಧ್ಯವಿರುವ ಎಲ್ಲ ಸಹಾಯ ಒದಗಿಸುವಂತೆ ಕಾಂಗ್ರೆಸ್ ಕಾರ್ಯಕರ್ತರಿಗೆ ಸೂಚಿಸಲಾಗಿದೆ

ರಾಹುಲ್ ಗಾಂಧಿ, ಲೋಕಸಭೆ ವಿರೋಧಪಕ್ಷದ ನಾಯಕ

'ಪ್ರಧಾನಿ ಅವರು ಕರೆ ಮಾಡಿದ್ದು, ಪರಿಸ್ಥಿತಿಯ ವಿವರ ಪಡೆದಿದ್ದಾರೆ. ಕೇಂದ್ರ ಸರ್ಕಾರ ಎಲ್ಲ ಅಗತ್ಯ ನೆರವು ನೀಡಲಿದೆ ಎಂದು ಭರವಸೆ ನೀಡಿದ್ದಾರೆ

ಭೂಪೇಂದ್ರ ಪಟೇಲ್, ಮುಖ್ಯಮಂತ್ರಿ

ಗುಜರಾತ್‌ನಲ್ಲಿ ಪ್ರವಾಹ ಉಲ್ಬಣಿಸಿದೆ. ಅನೇಕರು ನಾಪತ್ತೆಯಾಗಿದ್ದಾರೆ. ಕಾರ್ಯಕರ್ತರು ಪರಿಹಾರ ಕಾರ್ಯಗಳಿಗೆ ಕೈಜೋಡಿಸಬೇಕು

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಅತ್ಯಾಚಾರ ಪ್ರಕರಣ ● ಐಐಟಿ ವಿದ್ಯಾರ್ಥಿ ಬಂಧನ

16 ದಿನ ಠಾಣೆಗೆ ಅಲೆದ ಸಂತ್ರಸ್ತೆ

ಲಖನೌ: ಉತ್ತರ ಪ್ರದೇಶದ ಆಗ್ರಾ ನಗರದಲ್ಲಿ ಹಿರಿಯ ಸಹಪಾಠಿಯಿಂದ ಅತ್ಯಾಚಾರಕ್ಕೆ ಒಳಗಾದ ಮಹಿಳೆಯು, ದೂರು ನೀಡಲು ಪೊಲೀಸ್ ಠಾಣೆಗೆ 16 ದಿನ ಅಲೆದಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಹತಾಶೆಗೊಂಡ ಮಹಿಳೆಯು ಬಟ್ಟೆಯನ್ನು ಭಾಗಶಃ ಹರಿದುಕೊಂಡು ರಸ್ತೆ ಮೇಲೆ ಪ್ರತಿಭಟನೆ ನಡೆಸಿದ ನಂತರ ಪೊಲೀಸರು ದೂರು ದಾಖಲಿಸಿಕೊಂಡು ಆರೋಪಿ, ಐಐಟಿ ವಿದ್ಯಾರ್ಥಿಯನ್ನು ಮಂಗಳವಾರ ಬಂಧಿಸಿದ್ದಾರೆ.

ಮೂಲಗಳ ಪ್ರಕಾರ, ಆರೋಪಿಯನ್ನು ಶಿವಾಂಶ್ ಸಿಂಗ್ ಎಂದು ಗುರುತಿಸಲಾಗಿದ್ದು, ಈತ ಐಐಟಿ ಜಮ್ಮುನಲ್ಲಿ ಎಂ.ಟೆಕ್ ಓದುತ್ತಿದ್ದಾನೆ.

ಸಂತ್ರಸ್ತೆಯು ಲಖನೌ ನಿವಾಸಿಯಾಗಿದ್ದು, 'ಕೆಲ ದಿನಗಳ ಹಿಂದೆ ಶಿವಾಂಶ್ ಕಾರಿನಲ್ಲಿ ಅತ್ಯಾಚಾರ ನಡೆಸಿ, ಬಳಿಕ ರಸ್ತೆಗೆ ಎಸೆದು ಹೋಗಿದ್ದ' ಎಂದು ಆರೋಪಿಸಿದ್ದಾರೆ.

ಅತ್ಯಾಚಾರ ನಡೆದಿದೆ ಎನ್ನಲಾದ ದಿನ ಆರೋಪಿಯ ಲೊಕೇಷನ್ ಜಮ್ಮುನಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ದೂರು ಸ್ವೀಕರಿಸಲು ನಿರಾಕರಿಸಿದ್ದರು. ಅದಕ್ಕಾಗಿ ಸಂತ್ರಸ್ತೆ ಸತತ 16 ದಿನ ಪ್ರಯತ್ನ ನಡೆಸಿದ್ದರು. ಈ ಮಧ್ಯೆ ಸಂತ್ರಸ್ತೆಗೆ ಮಾನಸಿಕ ಕಾಯಿಲೆ ಇದೆ ಎಂದು ಆಕೆಯನ್ನು ಮಾನಸಿಕ ಆರೋಗ್ಯ ಕೇಂದ್ರಕ್ಕೂ ಪೊಲೀಸರು ಕಳುಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಇದರಿಂದ ಹತಾಶೆಗೊಂಡ ಸಂತ್ರಸ್ತೆ ಬಟ್ಟೆಯನ್ನು ಭಾಗಶಃ ಹರಿದುಕೊಂಡು ರಸ್ತೆ ಮಧ್ಯೆ ಪ್ರತಿಭಟಿದರು. ಈ ಮಾಹಿತಿ ತಿಳಿಯುತ್ತಿದ್ದಂತೆಯೇ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಪ್ರಕರಣ ದಾಖಲಿಸಿಕೊಂಡು ಶಿವಾಂಶ್‌ನನ್ನು ಬಂಧಿಸಿದ್ದಾರೆ ಎಂದು ಹೇಳಿವೆ.

ಕೃತ್ಯ ನಡೆದಿದೆ ಎನ್ನಲಾದ ದಿನ ಆರೋಪಿಯು ಕ್ಯಾಂಪಸ್‌ನಲ್ಲಿ ಇದ್ದನೇ ಎಂದು ಜಮ್ಮು ಐಐಟಿಯಿಂದ ಪೊಲೀಸರು ಮಾಹಿತಿ ಕೇಳಿದ್ದಾರೆ. ಸಿ.ಸಿ.ಟಿ.ವಿ ದೃಶ್ಯ ಮತ್ತು ಹಾಜರಾತಿ ವಿವರ ನೀಡುವಂತೆಯೂ ಕೇಳಿದ್ದಾರೆ.

ಸ್ಮಶಾನದಲ್ಲಿ ಬಾಲಕಿ ಮೇಲೆ ಅತ್ಯಾಚಾರ

ನವದೆಹಲಿ (ಪಿಟಿಐ): ಅನಾರೋಗ್ಯಪೀಡಿತ ತಂದೆಯು ಗುಣಮುಖರಾಗಲೆಂದು ಪಶ್ಚಿಮ ದೆಹಲಿಯ ರೋಹಿಣಿ ಸ್ಮಶಾನದಲ್ಲಿ ನಿಗೂಢ ಆಚರಣೆಗಳನ್ನು ಮಾಡುತ್ತಿದ್ದ ಬಾಲಕಿಯ ಮೇಲೆ 52 ವರ್ಷದ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿದ್ದಾನೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ದೀರ್ಘಕಾಲದಿಂದಲೂ ಕಾಯಿಲೆಯಿಂದ ಬಳಲುತ್ತಿರುವ ತಂದೆಯ ಗುಣಮುಖಕ್ಕಾಗಿ 'ತಂತ್ರ'ದ ಮೊರೆಹೋಗುವಂತೆ ಆರೋಪಿ ಮೊಹಮ್ಮದ್ ಷರೀಫ್ ಕಾಂಜಾವಾಲದಲ್ಲಿರುವ ಸ್ಮಶಾನಕ್ಕೆ ಕರೆಸಿಕೊಂಡು ಅತ್ಯಾಚಾರ ಎಸಗಿದ್ದಾನೆ' ಎಂದು 12 ವರ್ಷದ ಸಂತ್ರಸ್ತ ಬಾಲಕಿ ದೂರು ನೀಡಿದ್ದಾಳೆ.

'ಕಾಂಜವಾಲಾ ಪೊಲೀಸ್ ಠಾಣೆಗೆ ಮಂಗಳವಾರ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ದೂರು ಬಂದಿದೆ. ಸ್ಥಳಕ್ಕೆ ಪೊಲೀಸರ ತಂಡವನ್ನು ಕಳುಹಿಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿ ಮೊಹಮ್ಮದ್ ಷರೀಫ್‌ನನ್ನು ಬಂಧಿಸಿದ್ದೇವೆ. ಬಾಲಕಿಯನ್ನು ಚಿಕಿತ್ಸೆಗಾಗಿ ಸಂಜಯ್ ಗಾಂಧಿ ಮೆಮೋರಿಯಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಚ್ಚಿನ ತನಿಖೆ ನಡೆದಿದೆ' ಎಂದು ಹೇಳಿದ್ದಾರೆ.

ಸಂಜಯ್ ಸಿಂಗ್‌ಗೆ ಜಾಮೀನು

ಸುಲ್ತಾನಪುರ್ (ಪಿಟಿಐ): 2001ರ ಪ್ರತಿಭಟನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಕ್ಷದ ನಾಯಕ ಮತ್ತು ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಬುಧವಾರ ಇಲ್ಲಿನ ವಿಶೇಷ ನ್ಯಾಯಾಲಯಕ್ಕೆ ಶರಣಾಗಿದ್ದು, ಜಾಮೀನು ಪಡೆದಿದ್ದಾರೆ.

ನ್ಯಾಯಾಲಯವು ₹50,000 ಶ್ಯೂರಿಟಿ ಬಾಂಡ್ ಮೇಲೆ ಅವರಿಗೆ ಜಾಮೀನು ನೀಡಿದೆ ಎಂದು ಅವರ ವಕೀಲ ಮದನ್ ಸಿಂಗ್ ಹೇಳಿದರು.

ತೆರಿಗೆ ಹಂಚಿಕೆ ಶೇ 50ಕ್ಕೆ ಹೆಚ್ಚಿಸಲು ಒತ್ತಾಯ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 16 ನೇ ಕೇಂದ್ರ ಹಣಕಾಸು ಆಯೋಗದೊಂದಿಗೆ ಗುರುವಾರ ಸಭೆ ನಡೆಯಲಿದ್ದು, ತೆರಿಗೆ ಹಂಚಿಕೆಯನ್ನು ಶೇ 41ರಿಂದ ಶೇ 50ಕ್ಕೆ ಹೆಚ್ಚಿಸುವಂತೆ ಒತ್ತಾಯಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯಗಳ ಬಗ್ಗೆ ವಿವರಿಸಲಾಗುವುದು ಎಂದು ಅವರು ಸುದ್ದಿಗಾರರಿಗೆ ಹೇಳಿದರು.

ಕರ್ನಾಟಕ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದ ರಾಜ್ಯ ಎಂಬುದನ್ನು ಆಯೋಗಕ್ಕೆ ಮನದಟ್ಟು ಮಾಡಲಾಗುವುದು. ಸೆಸ್ ಮತ್ತು ಸರ್ಚಾರ್ಜ್‌ನಲ್ಲಿ ರಾಜ್ಯಗಳಿಗೂ ಪಾಲು ನೀಡಬೇಕು. ಸೆಸ್ ಮತ್ತು ಸರ್ಚಾರ್ಜ್‌ಗಳು ಹೆಚ್ಚುತ್ತಿದ್ದು, ರಾಜ್ಯಕ್ಕೆ ತೆರಿಗೆ ಹಂಚಿಕೆ ಕಡಿಮೆ ಆಗುತ್ತಿರುವುದನ್ನು ಹಣಕಾಸು ಆಯೋಗಕ್ಕೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹೇಳಿದರು.

ದಿನೇಶ್ ಗುಂಡೂರಾವ್ ನಿರ್ದೇಶನ • ಜಿಲ್ಲೆ – ತಾಲ್ಲೂಕು ಕೇಂದ್ರಗಳ ಹೋಟೆಲ್‌ಗಳಲ್ಲಿ ತಪಾಸಣೆ

ತಿಂಗಳಿಗೊಂದು ಆಹಾರ ಪದಾರ್ಥ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸುರಕ್ಷತೆ ಕುರಿತು ಜನಜಾಗೃತಿ ಮೂಡಿಸುವ ಜೊತೆಗೆ, ಪ್ರತಿ ತಿಂಗಳು ಒಂದೊಂದು ಪದಾರ್ಥಗಳನ್ನು ಪರೀಕ್ಷಿಸಿ, ವರದಿ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಗಸ್ಟ್‌ನಲ್ಲಿ ಬೇಕರಿ ತಿನಿಸುಗಳನ್ನು ವಿಶ್ಲೇಷಿಸಲು 211 ಪನ್ನೀರ್, 246 ಕೇಕ್, 67 ಕೋವಾದ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು' ಎಂದರು.

'ಆಹಾರ ಸುರಕ್ಷತಾ ಇಲಾಖೆಯಿಂದ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಇದೇ ಶುಕ್ರವಾರ ಮತ್ತು ಶನಿವಾರ ರಾಜ್ಯದಾದ್ಯಂತ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿರುವ ಹೋಟೆಲ್, ರೆಸ್ಟೋರೆಂಟ್‌ಗಳನ್ನು ಆಂದೋಲನದ ರೂಪದಲ್ಲಿ ತಪಾಸಣೆ ನಡೆಸಲಾಗುವುದು. ಮಾಂಸ, ಮೀನು, ಮೊಟ್ಟೆಗಳ ಮಾದರಿಗಳನ್ನು ಸಂಗ್ರಹಿಸಿ ತಪಾಸಣೆ ನಡೆಸಲಾಗುವುದು' ಎಂದು ಹೇಳಿದರು.

'ಏಪ್ರಿಲ್ – ಜುಲೈವರೆಗೆ 8,418 ಸರ್ವೆ ಆಹಾರ ಮಾದರಿಗಳು ಮತ್ತು 2593 ಕಾನೂನಾತ್ಮಕ ಆಹಾರ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಜುಲೈ ತಿಂಗಳೊಂದರಲ್ಲೇ 2,753 ಸರ್ವೆ ಆಹಾರ ಮಾದರಿಗಳು ಮತ್ತು 711 ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಕಳಿಸಲಾಗಿದೆ. ಇದೇ ತಿಂಗಳಲ್ಲಿ 96 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ. ನೈರ್ಮಲ್ಯ ಕೊರತೆ ಕಂಡು ಬಂದ 132 ಆಹಾರ ಉದ್ದಿಮೆಗಳಿಗೆ ₹4.93 ಲಕ್ಷ ದಂಡ ವಿಧಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಹಣ್ಣು, ತರಕಾರಿ ಪರೀಕ್ಷೆ: 'ಬಿಬಿಎಂಪಿ ವ್ಯಾಪ್ತಿ, ಚಿತ್ರದುರ್ಗ, ದಾವಣಗೆರೆ ಸೇರಿದಂತೆ ರಾಜ್ಯದ 13 ಜಿಲ್ಲೆಗಳಿಂದ ಹಣ್ಣು ಮತ್ತು ತರಕಾರಿಗಳ 385 ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದ್ದು, 27 ಮಾದರಿಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚು ಪ್ರಮಾಣದ ಕ್ರಿಮಿನಾಶಕಗಳು ಮತ್ತು ಶಿಲೀಂಧ್ರ ಪತ್ತೆಯಾಗಿದೆ' ಎಂದು ತಿಳಿಸಿದರು.

ಶಿಕ್ಷೆ, ಪರವಾನಗಿ ಅಮಾನತು: 'ಅಸುರಕ್ಷಿತ ಆಹಾರಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ 106 ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥಗೊಂಡಿವೆ. 34 ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. 18 ಪ್ರಕರಣಗಳಲ್ಲಿ ನ್ಯಾಯಾಲಯ ದಂಡವನ್ನು ವಿಧಿಸಿದೆ. ದೇವನಹಳ್ಳಿಯ ಕೆಎಫ್‌ಸಿ, ಬಿಬಿಎಂಪಿ ದಕ್ಷಿಣದಲ್ಲಿರುವ ನುಪ ಟೆಕ್ನಾಲಜೀಸ್, ಮಮತಾ ಏಜೆನ್ಸಿ ಮತ್ತು ಮೈಸೂರಿನ ವಿಶಾಲ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಪರವಾನಗಿಯನ್ನು ಅಮಾನತುಗೊಳಿಸಲಾಗಿದೆ' ಎಂದು ಸಚಿವರು ಮಾಹಿತಿ ನೀಡಿದರು.

'ಎಲ್ಲ ವರ್ಗದ ಆಹಾರ ತಯಾರಕರು ಕಡ್ಡಾಯವಾಗಿ ಪರವಾನಗಿ ಪಡೆಯಬೇಕು. ಪರವಾನಗಿ ಪರಿಶೀಲನೆಗೆ ವಿಶೇಷ ಆಂದೋಲನ ಹಮ್ಮಿಕೊಳ್ಳಲಾಗುವುದು. ನೋಂದಣಿ, ಪರವಾನಗಿ ಪಡೆಯದಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಅವರು ಎಚ್ಚರಿಸಿದರು.



ಆನ್‌ಲೈನ್ ಮೂಲಕ ಆಹಾರ ಉದ್ಯಮಿಗಳ ಪರವಾನಗಿ/ನೋಂದಣಿ ಅರ್ಜಿಗಳನ್ನು ಶೀಘ್ರ ವಿಲೇವಾರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇಲಾಖೆಯ ಆಹಾರ ಸುರಕ್ಷತಾಧಿಕಾರಿಗಳಿಗೆ ಟ್ಯಾಬ್‌ಗಳನ್ನು ವಿತರಿಸಿದರು –ಪ್ರಜಾವಾಣಿ ಚಿತ್ರ

ಶೀಘ್ರ ಆಹಾರ ಪರೀಕ್ಷಾ ಕಿಟ್

ಜನರು ತಾವು ಸೇವಿಸುವ ಆಹಾರದ ಗುಣಮಟ್ಟವನ್ನು ತಾವೇ ಪರೀಕ್ಷಿಸಿಕೊಳ್ಳುವುದಕ್ಕಾಗಿ ಹೋಟೆಲ್, ರೆಸ್ಟೋರೆಂಟ್, ಫುಡ್‌ಪಾರ್ಕ್‌ನಂತಹ ಸಾರ್ವಜನಿಕ ಸ್ಥಳಗಳಲ್ಲಿ 3,400 ಪರೀಕ್ಷಾ ಕಿಟ್‌ಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ಈಗಾಗಲೇ ಒಂದು ಸಾವಿರ ಕಿಟ್‌ಗಳು ಬಂದಿದ್ದು, ಶೀಘ್ರದಲ್ಲಿಯೇ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಲಿವೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ಸುದ್ದಿ 2 ನಿಮಿಷ

ಕೋವಿಡ್ ಲಸಿಕೆ ಮಾರಾಟ ಆರೋಪ: ಪ್ರಕರಣಕ್ಕೆ ತಡೆ

ಬೆಂಗಳೂರು: 'ಕೋವಿಡ್ ಲಸಿಕೆ ಪಡೆಯಲು ಬಸವನಗುಡಿ ಬಿಜೆಪಿ ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಅವರಿಗೆ ಲಂಚ ನೀಡಬೇಕು' ಎಂದು ವೈರಲ್ ಆಗಿದ್ದ ಆಡಿಯೊ ಸಂಭಾಷಣೆ ಆಧರಿಸಿ ಸುದ್ದಿ ಪ್ರಕಟಿಸಿದ್ದ ಆನ್‌ಲೈನ್ ಮಾಧ್ಯಮ, 'ದಿ ನ್ಯೂಸ್ ಮಿನಿಟ್' ವಿರುದ್ಧದ ಮಾನಹಾನಿ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ, 'ದಿ ನ್ಯೂಸ್ ಮಿನಿಟ್' ಮಾತೃ ಸಂಸ್ಥೆ, 'ಸ್ಪಂಕ್ಲೇನ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ' ಸಲ್ಲಿಸಿರುವ ಸಿವಿಲ್ ರಿವಿಷನ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: 'ಸಾಮಾಜಿಕ ಕಾರ್ಯಕರ್ತ ಎಚ್.ಎಂ.ವೆಂಕಟೇಶ್, ಬಸವನಗುಡಿಯ ಅನುಗ್ರಹ ವಿಠ್ಠಲ ಆಸ್ಪತ್ರೆ ಸಿಬ್ಬಂದಿ ಜೊತೆ ಮಾತನಾಡುತ್ತಿದ್ದಾರೆ' ಎನ್ನಲಾದ ಆಡಿಯೊದಲ್ಲಿ, ಸಿಬ್ಬಂದಿಯು, 'ಕೋವಿಡ್ ಲಸಿಕೆಯೊಂದಕ್ಕೆ ₹900 ವೆಚ್ಚವಾಗುತ್ತದೆ. ಇದರಲ್ಲಿ ₹700 ಅನ್ನು ಶಾಸಕ ರವಿಸುಬ್ರಹ್ಮಣ್ಯ ಅವರಿಗೆ ನೀಡಬೇಕು. ಆಸ್ಪತ್ರೆಗೆ ₹200 ಮಾತ್ರ ಉಳಿಯಲಿದೆ' ಎಂಬ ಸಂಭಾಷಣೆ ವೈರಲ್ ಆಗಿತ್ತು.

ತದನಂತರ ವೆಂಕಟೇಶ್, 'ಕೋವಿಡ್ ಲಸಿಕೆಯನ್ನು ಲಾಭ ಮಾಡಿಕೊಳ್ಳುವ ದಂಧೆಯನ್ನಾಗಿ ಮಾಡಿಕೊಳ್ಳಲಾಗಿದೆ' ಎಂದು ಆರೋಪಿಸಿದ್ದರು. ಇದನ್ನು ಆಧರಿಸಿ 'ದಿ ನ್ಯೂಸ್ ಮಿನಿಟ್' ಸೇರಿದಂತೆ ಇತರೆ ಮಾಧ್ಯಮಗಳು ಈ ಸಂಭಾಷಣೆಯನ್ನು ಬಿತ್ತರಿಸಿದ್ದವು.

ಶಾಸಕ ರವಿ ಸುಬ್ರಹ್ಮಣ್ಯ ಅವರು, ಎಚ್.ಎಂ.ವೆಂಕಟೇಶ್, ಅನುಗ್ರಹ ವಿಠ್ಠಲ ಆಸ್ಪತ್ರೆ, ಆಪ್ನಾ ದೆಹಲಿ ಘಟಕ ಮತ್ತು ಆಪ್ ನಾಯಕಿ ಅತಿಶಿ ಮರ್ಲೇನಾ ವಿರುದ್ಧ ಪ್ರಕರಣ ಹೂಡಿದ್ದರು.

ಅನಧಿಕೃತ ನೀರಿನ ಸಂಪರ್ಕ ತಡೆಗೆ ಸಹಕರಿಸಲು ಮನವಿ



ಬೆಂಗಳೂರು: 'ಅನಧಿಕೃತ ನೀರಿನ ಸಂಪರ್ಕಗಳನ್ನು ಕಡಿತಗೊಳಿಸಿ, ಅವುಗಳನ್ನು ಅಧಿಕೃತಗೊಳಿಸುವ ಮೂಲಕ ಜಲಮಂಡಳಿ ಆದಾಯ ಹೆಚ್ಚಿಸಲು ಕೈ ಜೋಡಿಸಬೇಕು' ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸನ್ನದು ಪಡೆದ ಗುತ್ತಿಗೆದಾರರ ಸಂಘ ಆಯೋಜಿಸಿದ್ದ ಕಾವೇರಿ ತಾಯಿಗೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಗುತ್ತಿಗೆದಾರರು ಹಾಗೂ ಪ್ಲಂಬರ್‌ಗಳು ಈ ಬಾರಿ ಬೇಸಿಗೆಯಲ್ಲಿ ನೀರಿನ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಉತ್ತಮ ಸೇವೆ ಸಲ್ಲಿಸಿದ್ದೀರಿ. ಇದೇ ರೀತಿ ನೂರಾರು ಕಿಲೋಮೀಟರ್ ದೂರದಿಂದ ನಗರಕ್ಕೆ ತರುವ ನೀರು ಪೋಲಾಗದಂತೆ ತಡೆಯಲು ಮಂಡಳಿಯೊಂದಿಗೆ ಕೈಜೋಡಿಸಬೇಕು' ಎಂದು ಕರೆ ನೀಡಿದರು.

ಇದೇ ವೇಳೆ ಜಲಮಂಡಳಿಯ ನೋಂದಾಯಿತ ಪ್ಲಂಬರ್‌ಗಳ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

'ಸಫಲ್: ನವೋದ್ಯಮಗಳಿಗೆ ಉತ್ತೇಜನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷಗಳ ಹಿಂದೆ ರಾಜ್ಯದಲ್ಲಿ ಆರಂಭವಾದ ಸೆಮಿಕಂಡಕ್ಟರ್ ಫ್ಯಾಬ್‌ಲೆಸ್ ಆಕ್ಸಿಲರೇಟರ್ ಲ್ಯಾಬ್ (ಎಸ್‌ಎಫ್‌ಎಎಲ್–ಸಫಲ್)–ಉತ್ಕೃಷ್ಟತಾ ಕೇಂದ್ರವು 43 ನವೋದ್ಯಮಗಳ ಬೆಳವಣಿಗೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೆರವಾಗಿದ್ದು, ನೂರಾರು ಕಂಪನಿಗಳ ಆರಂಭ ಹಾಗೂ ಉದ್ಯೋಗಗಳ ಸೃಷ್ಟಿಗೆ ಕಾರಣವಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, 'ಸೆಮಿಕಂಡಕ್ಟರ್ ಆಧಾರಿತ ನವೋದ್ಯಮಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿರುವ ಸಫಲ್‌ನಿಂದ, 95ಕ್ಕೂ ಹೆಚ್ಚು ಕಂಪನಿಗಳು ಪ್ರತ್ಯಕ್ಷ ಮತ್ತು ಪರೋಕ್ಷ ಫಲಾನುಭವಿಗಳಾಗಿವೆ. ಈ ಕಂಪನಿಗಳಿಂದ ಇಎಸ್‌ಡಿಎಂನಲ್ಲಿ (ಎಲೆಕ್ಟ್ರಾನಿಕ್ಸ್ ಸಿಸ್ಟಂ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್) 800 ಉದ್ಯೋಗಗಳು ಸೃಷ್ಟಿಯಾಗಿವೆ' ಎಂದರು.

'ಸಫಲ್‌ಗೆ ಸರ್ಕಾರ ಆರಂಭದಲ್ಲಿ ವೆಚ್ಚ ಮಾಡಿದ್ದು ₹21.56 ಕೋಟಿ. ಇದರಿಂದ ಪ್ರಯೋಜನ ಪಡೆದ ಕಂಪನಿಗಳಿಗೆ ₹114 ಕೋಟಿ ಹೂಡಿಕೆ ದೊರೆತಿದೆ. ಸಂಸ್ಥೆಯನ್ನು ಇನ್ನೂ ಐದು ವರ್ಷ ಮುಂದುವರಿಸಲಾಗುವುದು' ಎಂದು ಮಾಹಿತಿ ನೀಡಿದರು.

'ಸಫಲ್'ನಿಂದ ವಿವಿಧ ರೀತಿಯಲ್ಲಿ ನೆರವು ಪಡೆದು, ಇಎಸ್‌ಡಿಎಂ ಕ್ಷೇತ್ರದಲ್ಲಿ ಹಲವು ಆವಿಷ್ಕಾರಗಳೊಂದಿಗೆ ಸೆಮಿಕಂಡಕ್ಟರ್ ಚಿಪ್‌ಗಳನ್ನು ರೂಪಿಸಿದ ನವೋದ್ಯಮದ ಮುಖ್ಯಸ್ಥರು ತಮ್ಮ ಅನುಭವ ಮತ್ತು ಉತ್ಪನ್ನಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

'ನಮ್ಮ ಮಾದರಿ ಅಳವಡಿಕೆ'



'ಸರ್ಕಾರದ ಸಹಯೋಗದಲ್ಲಿ ನಡೆಯುತ್ತಿರುವ ಸಫಲ್, ಸೆಮಿಕಂಡಕ್ಟರ್ ಆಧಾರಿತ 200ಕ್ಕೂ ಹೆಚ್ಚು ಆವಿಷ್ಕಾರಗಳಿಗೆ ಉತ್ತೇಜನ ನೀಡಿದೆ. ಇದೊಂದು ವಿಶಿಷ್ಟ ಮಾದರಿಯಾಗಿದ್ದು, ಗುಜರಾತ್ ಮತ್ತು ತಮಿಳುನಾಡು ರಾಜ್ಯಗಳು ಈಗ ನಮ್ಮ ರಾಜ್ಯದ ಮಾದರಿಯನ್ನೇ ಅಳವಡಿಸಿಕೊಳ್ಳಲು ಮುಂದಾಗಿವೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

13 ವಿವಿ ಸಿಂಡಿಕೇಟ್‌ಗೆ 80 ಸದಸ್ಯರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 13 ವಿಶ್ವವಿದ್ಯಾಲಯಗಳ ಸಿಂಡಿಕೇಟ್‌ಗಳಿಗೆ ಒಟ್ಟು 80 ಸದಸ್ಯರನ್ನು ನೇಮಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಬೆಂಗಳೂರು ವಿ.ವಿ.: ಕೋರಮಂಗಲದ ಡಾ.ಜಯಶ್ರೀ ಹೆಗ್ಡೆ, ದೊಡ್ಡಕಲ್ಲಸಂದ್ರದ ಎಂ.ಎ. ಮಹಾದೇವನಾಯ್ಕ, ಆರ್.ಟಿ. ನಗರದ ಕೆ. ಷರೀಫಾ, ದಾಸನಪುರದ ಡಿ.ಬಿ. ಗಂಗರಾಜು, ಮೈಸೂರು ಜಿಲ್ಲೆ ವರುಣದ ದಂಡಿಕೆರೆ ನಾಗರಾಜ್, ರಾಮನಗರದ ರಮೇಶ್ ಬಾಬು.

ಬೆಂಗಳೂರು ನಗರ ವಿ.ವಿ.: ಮಂಗಳೂರಿನ ಆಯೇಷಾ ಫರ್ಜಾನಾ, ಬೆಂಗಳೂರು ಸೊಣ್ಣೇನಹಳ್ಳಿಯ ಎಚ್. ಕೃಷ್ಣರಾಮ್, ಥಾಮಸ್ ಟೌನ್‌ನ ಫ್ರಾನ್ಸಿಸ್ ಅಸ್ಸಿಸಿ ಅಲ್ಮೇಡಾ, ಗಾಂಧಿನಗರದ ವಿ. ಶಿವಕುಮಾರ್, ಜೆ.ಪಿ. ನಗರದ ಕೆ.ಪಿ. ಪಾಟೀಲ, ಮೈಸೂರಿನ ಎಚ್. ಬೀರಪ್ಪ.

ಬೆಂಗಳೂರು ಉತ್ತರ ವಿ.ವಿ.: ವರ್ತೂರಿನ ಎಸ್.ಆರ್. ಸಹನಾ, ಕೋಲಾರದ ಜೈದೀಪ್, ಅಬ್ಬಾಜ್ ಪಾಶಾ, ಎಂ. ಗೋಪಾಲಗೌಡ, ಬೆಂಗಳೂರಿನ ನಿರೂಪ್, ನಂಜನಗೂಡಿನ ಕೆ. ಬಸವರಾಜು.

ರಘುನಾಥ ನೇಮಕ



ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ 'ಪ್ರಜಾವಾಣಿ' ಸಮೂಹದ 'ಸುಧಾ'ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಅವರು ನೇಮಕವಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪತ್ರ

'ಅತ್ತಿಬೆಲೆ ಚೆಕ್‌ಪೋಸ್ಟ್ ಜಮೀನು ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತಿಬೆಲೆ ಚೆಕ್‌ಪೋಸ್ಟ್ ಬಳಿ ವಾಣಿಜ್ಯ ತೆರಿಗೆ ಇಲಾಖೆ ಸ್ವಾಧೀನದಲ್ಲಿರುವ 25 ಎಕರೆ ಜಮೀನನ್ನು ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ಗೆ ಹಸ್ತಾಂತರಿಸುವಂತೆ ಕೋರಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ತಮಿಳುನಾಡು, ಕರ್ನಾಟಕದ ನಡುವೆ ಸಂಚರಿಸುವ ವಾಣಿಜ್ಯ ಮತ್ತು ಸರಕು ಸಾಗಾಣಿಕೆ ವಾಹನಗಳ ಸರಕುಗಳನ್ನು ಪರಿಶೀಲನೆ ಮಾಡಿ, ವಾಣಿಜ್ಯ ತೆರಿಗೆ ವಸೂಲಿಗಾಗಿ ಅತ್ತಿಬೆಲೆಯಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಲಾಗಿತ್ತು. ಚೆಕ್‌ಪೋಸ್ಟ್ ಬಳಿಯೇ 25 ಎಕರೆ ಪ್ರದೇಶದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಕಚೇರಿ ತೆರೆದಿತ್ತು. ಅಲ್ಲೇ ಲಾರಿಗಳ ನಿಲುಗಡೆಯನ್ನೂ ಮಾಡಲಾಗುತ್ತಿತ್ತು.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯಾದ ನಂತರ ಈ ಚೆಕ್‌ಪೋಸ್ಟ್ ಮತ್ತು ಇಲ್ಲಿ ವಾಣಿಜ್ಯ ತೆರಿಗೆ ಕಚೇರಿಯ ಅಗತ್ಯ ಇಲ್ಲದಾಯಿತು. ಉಪಯೋಗವಿಲ್ಲದಂತಾದ ಈ ಪ್ರದೇಶವನ್ನು ಏಳು ವರ್ಷಗಳಿಂದ ಕೆಲವು ಖಾಸಗಿ ವ್ಯಕ್ತಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಸಚಿವರು ಪತ್ರದಲ್ಲಿ ತಿಳಿಸಿದ್ದಾರೆ.

ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ಗೆ ಈ ಜಮೀನು ನೀಡಿದರೆ ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿಯೊಂದಿಗೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರಲಿದೆ. ಈ ಜಮೀನಿನಲ್ಲಿ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳಿಗೂ ತಡೆಬೀಳಬಹುದು ಎಂದು ತಿಳಿಸಿದ್ದಾರೆ.

ಎಕರೆಗೆ ₹1ರ ದರದಲ್ಲಿ ಒಟ್ಟು 25 ಎಕರೆ ಜಮೀನನ್ನು ಗುತ್ತಿಗೆಗೆ ನೀಡಲು ಮನವಿ

ಅತ್ತಿಬೆಲೆ ಸುತ್ತಮುತ್ತ ಕರ್ನಾಟಕ ಗೃಹ ಮಂಡಳಿಯಿಂದ ಸೂರ್ಯನಗರ ವಸತಿ ಬಡಾವಣೆ, ಕೆಲವು ಖಾಸಗಿ ಬಡಾವಣೆಗಳು ನಿರ್ಮಾಣಗೊಳ್ಳುತ್ತಿವೆ. ಜಿಗಣಿ, ಬೊಮ್ಮಸಂದ್ರ, ಅತ್ತಿಬೆಲೆ ಕೈಗಾರಿಕಾ ಪ್ರದೇಶಗಳಿವೆ. ಇಲ್ಲಿಗೆ ಕಚ್ಚಾವಸ್ತುಗಳನ್ನು, ನಿರ್ಮಾಣ ಸಾಮಗ್ರಿಗಳನ್ನು ಸಾಗಿಸಲು ಟ್ರಕ್, ಲಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಮಾರ್ಗದಲ್ಲಿ ಸಂಚರಿಸುತ್ತಿವೆ. ಇದರಿಂದ ಸರಕು ಸಾಗಾಣಿಕೆ ಮತ್ತು ಇತರೆ ಲಾರಿಗಳ ನಿಲುಗಡೆಗೆ ಜಾಗದ ಅವಶ್ಯಕತೆ ಉಂಟಾಗಿದೆ. ವಾಣಿಜ್ಯ ತೆರಿಗೆ ಇಲಾಖೆಯ ಸ್ವಾಧೀನದಲ್ಲಿರುವ ಒಟ್ಟು 25 ಎಕರೆ ಜಾಗವನ್ನು, ಎಕರೆಗೆ ₹1ರ ದರದಲ್ಲಿ ಗುತ್ತಿಗೆ ಆಧಾರದಲ್ಲಿ ಅರಸು ಟ್ರಕ್ ಟರ್ಮಿನಲ್ ಸುಪರ್ದಿಗೆ ವಹಿಸಬೇಕು. ಜೊತೆಗೆ ಚೆಕ್‌ಪೋಸ್ಟ್ ಜಾಗವನ್ನು ಮರಳು ಸಂಗ್ರಹ ಮಾಡಲು ನೀಡಬೇಕು ಎಂದು ಸಚಿವ ರಾಮಲಿಂಗಾರೆಡ್ಡಿ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಪತ್ರದಲ್ಲಿರುವುದು

- ಅರಸು ಟ್ರಕ್ ಟರ್ಮಿನಲ್‌ಗೆ ಜಮೀನು: ಸುತ್ತಲ ಪ್ರದೇಶ ಅಭಿವೃದ್ಧಿಗೆ ಪೂರಕ
- 7 ವರ್ಷಗಳಿಂದ ಖಾಸಗಿ ವ್ಯಕ್ತಿಗಳಿಂದ ಜಾಗ ದುರುಪಯೋಗ

ತಿರುಪತಿ ಲಡ್ಡು ಪ್ರಸಾದಕ್ಕೆ ನಂದಿನಿ ತುಪ್ಪ ಪೂರೈಕೆ



ಟ್ಯಾಂಕರ್‌ಗೆ ಸಿ.ಎಂ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ, ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ಇದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿರುಪತಿ ತಿರುಮಲ ದೇವಸ್ಥಾನದ ಲಡ್ಡು ಪ್ರಸಾದಕ್ಕೆ ರಾಜ್ಯದ ನಂದಿನಿ ತುಪ್ಪವನ್ನು ಪೂರೈಕೆ ಮಾಡಲಾಗುತ್ತಿದ್ದು, ಟ್ಯಾಂಕರ್ ಮೂಲಕ ತುಪ್ಪ ಸಾಗಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಬುಧವಾರ ಚಾಲನೆ ನೀಡಿದರು.

ತಿರುಪತಿ ದೇವಸ್ಥಾನಕ್ಕೆ ಶ್ರೀವಾರಿ ಪ್ರಸಾದ ತಯಾರಿಕೆಗೆ ಹಲವು ವರ್ಷಗಳಿಂದ ಆಗ್ಮಾರ್ಕ್ ಸ್ಪೆಷಲ್ ಗ್ರೇಡ್ ಹೊಂದಿರುವ ನಂದಿನಿ ತುಪ್ಪವನ್ನು ಕೆಎಂಎಫ್ ಪೂರೈಸುತ್ತಿದೆ.



2013–14ನೇ ಸಾಲಿನಿಂದ 2021–22ರವರೆಗೆ 5 ಸಾವಿರ ಟನ್ ತುಪ್ಪವನ್ನು ತಿರುಪತಿ ದೇವಸ್ಥಾನಕ್ಕೆ ಸರಬರಾಜು ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಆರಂಭಿಕವಾಗಿ 350 ಟನ್ ತುಪ್ಪವನ್ನು ಸರಬರಾಜು ಮಾಡಲು ಟೆಂಡರ್ ಮೂಲಕ ಬೇಡಿಕೆ ಬಂದಿದೆ. ಬೇಡಿಕೆಗೆ ಅನುಗುಣವಾಗಿ ಹಸುವಿನ ತುಪ್ಪವನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುವುದು ಎಂದು ಕೆಎಂಎಫ್ ತಿಳಿಸಿದೆ.

2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ವೇಳೆ ತೀವ್ರ ಸ್ಪರ್ಧೆ ಏರ್ಪಟ್ಟ ಕಾರಣ ತಿರುಪತಿ ದೇವಸ್ಥಾನಕ್ಕೆ ಕೆಎಂಎಫ್ ತುಪ್ಪ ಪೂರೈಸಿರಲಿಲ್ಲ. 'ಈ ಹಿಂದಿನಂತೆಯೇ ತಿರುಪತಿ ತಿರುಮಲ ದೇವಸ್ಥಾನಕ್ಕೆ ತುಪ್ಪ ಪೂರೈಸಲು ಉತ್ಸುಕವಾಗಿದ್ದೇವೆ' ಎಂದು ಟಿಟಿಡಿ ಆಡಳಿತ ಮಂಡಳಿಗೆ ಕೆಎಂಎಫ್ ಇತ್ತೀಚೆಗೆ ಪತ್ರ ಬರೆದಿತ್ತು.

ಎಸ್‌ಐಟಿ ಕೋರಿಕೆ ವಜಾ ಮಾಡಿದ ಹೈಕೋರ್ಟ್

ಶಾಸಕ ರೇವಣ್ಣ ಜಾಮೀನು ಅಬಾಧಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯ ಅಪಹರಣದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿನ ಮೊದಲನೇ ಆರೋಪಿ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣಗೆ ವಿಚಾರಣಾ ನ್ಯಾಯಾಲಯ ನೀಡಿದ್ದ ಜಾಮೀನು ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.


'ಎಚ್.ಡಿ.ರೇವಣ್ಣಗೆ ಜಾಮೀನು ಮಂಜೂರು ಮಾಡಿರುವುದನ್ನು ರದ್ದುಗೊಳಿಸಬೇಕು' ಎಂದು ಕೋರಿ ಎಸ್‌ಐಟಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಬುಧವಾರ ಪ್ರಕಟಿಸಿದೆ. ಎಸ್‌ಐಟಿ ಅರ್ಜಿಯನ್ನು ವಜಾ ಮಾಡಿದೆ. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

ಎಸ್‌ಐಟಿ ಪರ ವಾದ ಮಂಡಿಸಿದ್ದ ವಿಶೇಷ ಪ್ರಾಸಿಕ್ಯೂಟರ್, ಹಿರಿಯ ವಕೀಲ ರವಿವರ್ಮ ಕುಮಾರ್, 'ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಈಗಾಗಲೇ ಸಲ್ಲಿಕೆಯಾಗಿದೆ. ಆರೋಪಿಗೆ ಜಾಮೀನು ನೀಡುವಾಗ ವಿಚಾರಣಾ ನ್ಯಾಯಾಲಯ ಪ್ರಮಾದ ಎಸಗಿದೆ. ಸಂತ್ರಸ್ತೆ ಮಹಿಳೆಯನ್ನು ಅಪಹರಿಸಿ 7ನೇ ಆರೋಪಿಯ ಮನೆಯಲ್ಲಿ ಇರಿಸಲಾಗಿತ್ತು. ಆಕೆಗೂ ಆತನಿಗೂ ಸಂಬಂಧ ಇರಲಿಲ್ಲ. ಆ ಸ್ಥಳದಲ್ಲಿ ಮಹಜರು ನಡೆಸಿದಾಗ, ಆಕೆಯ ಕೂದಲು ದೊರೆತಿದೆ' ಎಂದಿದ್ದರು.

'ಸಂತ್ರಸ್ತೆ ತನ್ನ ಮೇಲೆ ಅತ್ಯಾಚಾರ ನಡೆಸದಂತೆ ಪ್ರಜ್ವಲ್‌ರನ್ನು ಕೈಮುಗಿದು ಕೋರಿದ್ದಾರೆ. ಇಂತಹ ಆರೋಪಿಯನ್ನು ರಕ್ಷಿಸಲು ರೇವಣ್ಣ, ಸಂತ್ರಸ್ತೆಯ ಅಪಹರಣ ಮಾಡಿಸಿದ್ದಾರೆ. ಇದು ಅತ್ಯಂತ ಘೋರ ಕೃತ್ಯ. ಸಂತ್ರಸ್ತ ಮಹಿಳೆಯನ್ನು ಒತ್ತೆ ಇಟ್ಟಿದ್ದ ಏಳನೇ ಆರೋಪಿ ಈ ಹಿಂದೆ ರೇವಣ್ಣಗೆ ವಿಶೇಷ ಕರ್ತವ್ಯಾಧಿಕಾರಿ ಆಗಿದ್ದರು ಎಂಬುದು ತನಿಖೆಯ ಸಂದರ್ಭದಲ್ಲಿ ಗೊತ್ತಾಗಿದೆ. ಹೀಗಾಗಿ, ಅವರ ಜಾಮೀನು ರದ್ದುಪಡಿಸಬೇಕು' ಎಂದು ಕೋರಿದ್ದರು.

ರೇವಣ್ಣ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್, 'ಇಡೀ ಘಟನೆಗೆ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 364 ಎ ಅನ್ವಯಿಸುವುದಿಲ್ಲ. ಪ್ರಕರಣದಲ್ಲಿ ಆರೋಪಿಯು ಸಂತ್ರಸ್ತೆಗೆ ಯಾವುದೇ ಹಾನಿ ಉಂಟು ಮಾಡಿಲ್ಲ, ಬೆದರಿಕೆ ಹಾಕಿಲ್ಲ ಎಂಬುದನ್ನು ವಿಚಾರಣಾ ನ್ಯಾಯಾಲಯ ತನ್ನ ಆದೇಶದಲ್ಲಿ ಸ್ಪಷ್ಟವಾಗಿ ದಾಖಲಿಸಿದೆ' ಎಂದಿದ್ದರು.

ಇತರ ಆರೋಪಿಗಳಿಗೆ ಜಾಮೀನು



ಸಂತ್ರಸ್ತೆ ಅಪಹರಣ ಆರೋಪದ ಇದೇ ಪ್ರಕರಣದಲ್ಲಿ ಹಾಸನದ ಸತೀಶ್ ಬಾಬು ಅಲಿಯಾಸ್ ಸತೀಶ್ ಬಾಬಣ್ಣ, ಎಚ್.ಕೆ.ಸುಜಯ್, ಎಚ್.ಎನ್.ಮಧು, ಎಸ್.ಟಿ.ಕೀರ್ತಿ, ಎಚ್.ಡಿ.ಮಾಯು ಗೌಡ, ಕೆ.ಎ.ರಾಜಗೋಪಾಲ್ ಅವರ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪುರಸ್ಕರಿಸಿದೆ.

'ಎಲ್ಲ ಜಾಮೀನು ಅರ್ಜಿಗಳನ್ನು ಪುರಸ್ಕರಿಸಿರುವ ಪೀಠ 2ರಿಂದ 7ನೇ ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು. ಆರೋಪಿಗಳು ತಲಾ ₹4 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್, ಇತರೆ ಷರತ್ತು ಪೂರೈಸಬೇಕು' ಎಂದು ಆದೇಶಿಸಿದೆ.





ಪ್ಯಾರಿಸ್‌ನಲ್ಲಿ ಬುಧವಾರ ನಡೆದ ಪ್ಯಾರಾಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದ ಮೆರವಣಿಗೆಯಲ್ಲಿ ಸಾಗಿದ ಭಾರತದ ಕ್ರೀಡಾಪಟುಗಳ ತಂಡ. ಪ್ಯಾರಾ ಜಾವೆಲಿನ್ ಥ್ರೋಪಟು ಸುಮಿತ್ ಅಂಟಿಲ್ ಮತ್ತು ಶಾಟ್‌ಪಟ್ ಅಥ್ಲೀಟ್ ಭಾಗ್ಯಶ್ರೀ ಜಾಧವ್ ಧ್ವಜಧಾರಿಯಾಗಿದ್ದರು (ಎಡಚಿತ್ರ). ಮೆರವಣಿಗೆಯಲ್ಲಿ ಸಾಗಿದ ಬ್ರೆಜಿಲ್ ತಂಡದ ಪ್ಯಾರಾ ಕ್ರೀಡಾಪಟುಗಳು –ಎಎಫ್‌ಪಿ ಚಿತ್ರಗಳು

ಪ್ಯಾರಿಸ್‌ನಲ್ಲಿ ಈಗ ಪ್ಯಾರಾಲಿಂಪಿಕ್ಸ್



ಪ್ಯಾರಿಸ್ (ಎಎಫ್‌ಪಿ): 'ಪ್ರಣಯ ನಗರಿ' ಪ್ಯಾರಿಸ್‌ನಲ್ಲಿ ಈಗ ಮತ್ತೆ ಕ್ರೀಡಾ ಹಬ್ಬದ ವಾತಾವರಣ ಗರಿಗೆದರಿತು. ಬುಧವಾರ ರಾತ್ರಿ ಪ್ಯಾರಾಲಿಂಪಿಕ್ಸ್‌ಗೆ ರಂಗುರಂಗಿನ ಚಾಲನೆ ದೊರೆಯಿತು.

17 ದಿನಗಳ ಹಿಂದಷ್ಟೇ ಒಲಿಂಪಿಕ್ಸ್ ಮುಕ್ತಾಯಗೊಂಡಿತ್ತು. ಪ್ಲೇಸ್ ಡಿ ಲಾ ಕಾಂಕಾರ್ಡ್‌ನಲ್ಲಿ ಕೂಟವು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರ ಸಮ್ಮುಖದಲ್ಲಿ ಉದ್ಘಾಟನೆಗೊಂಡಿತು.

ಕಾಲ್ಡ್ರನ್‌ನಲ್ಲಿ ಕ್ರೀಡಾಜ್ಯೋತಿಯನ್ನು ಬೆಳಗುವ ಮೂಲಕ ಕೂಟಕ್ಕೆ ಚಾಲನೆ ದೊರೆಯಿತು. ಗುರುವಾರದಿಂದ ಕ್ರೀಡೆಗಳು ಆರಂಭವಾಗಲಿವೆ. ಈಚೆಗೆ ಒಲಿಂಪಿಕ್ ಕೂಟದ ಸ್ಪರ್ಧೆಗಳು ನಡೆದ ತಾಣಗಳಲ್ಲಿ ಪ್ಯಾರಾಲಿಂಪಿಕ್ಸ್ ಕ್ರೀಡೆಗಳೂ ನಡೆಯಲಿವೆ. ಒಲಿಂಪಿಕ್ಸ್ ನಡೆದಿದ್ದ 35 ತಾಣಗಳಲ್ಲಿ 18ರಲ್ಲಿ ಸ್ಪರ್ಧೆಗಳು ಆಯೋಜನೆಗೊಳ್ಳಲಿವೆ. ಸೆಪ್ಟೆಂಬರ್ 8ರಂದು ಕೂಟವು ಮುಕ್ತಾಯವಾಗಲಿದೆ.

ಪ್ಯಾರಾಲಿಂಪಿಕ್ಸ್ ಜ್ಯೋತಿಯನ್ನು ಮೊದಲಿಗೆ ಇಂಗ್ಲೆಂಡ್‌ನ ಸ್ಟೋಕ್ ಮ್ಯಾನೆವೆಲ್ ಆಸ್ಪತ್ರೆಯಲ್ಲಿ ಬೆಳಗಲಾಯಿತು. ಇದೇ ಸ್ಥಳದಲ್ಲಿ ಪ್ಯಾರಾಲಿಂಪಿಕ್ಸ್ ಮೊದಲ ಬಾರಿ ನಡೆದಿತ್ತು. ಬಲಾಢ್ಯ ತಂಡವಾದ ಚೀನಾ, ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ (2020) 96 ಚಿನ್ನದ ಪದಕ ಮತ್ತು ಬ್ರಿಟನ್ 41 ಚಿನ್ನದ ಪದಕಗಳನ್ನು ಗೆದ್ದಿದ್ದವು.

ಒಟ್ಟು 20 ಲಕ್ಷ ಟಿಕೆಟ್‌ಗಳ ಮಾರಾಟ: ಪ್ಯಾರಾಲಿಂಪಿಕ್ ಕ್ರೀಡಾಕೂಟವನ್ನು ವೀಕ್ಷಿಸಲು 20 ಲಕ್ಷ ಮಂದಿ ಟಿಕೆಟ್ ಕಾಯ್ದಿರಿಸಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

'ಕಳೆದ ಒಂದು ತಿಂಗಳಲ್ಲಿ ಮಾರಾಟವಾದ 10 ಲಕ್ಷ ಟಿಕೆಟ್ ಸೇರಿದಂತೆ ಈವರೆಗೆ 20 ಲಕ್ಷ ಟಿಕೆಟ್‌ಗಳನ್ನು ಜನ ಕಾಯ್ದಿರಿಸಿದ್ದಾರೆ. ಇನ್ನೂ 5 ಲಕ್ಷ ಟಿಕೆಟ್‌ಗಳು ಲಭ್ಯ ಇವೆ' ಎಂದು ಆಯೋಜಕರ ಪ್ರಕಟಣೆ ತಿಳಿಸಿದೆ.

ಅಥ್ಲೆಟಿಕ್ಸ್‌ನಿಂದ 10 ಪದಕ: ಸತ್ಯನಾರಾಯಣ ವಿಶ್ವಾಸ

ನವದೆಹಲಿ (ಪಿಟಿಐ): ಪ್ಯಾರಾಲಿಂಪಿಕ್ ಕೂಟದ ಅಥ್ಲೆಟಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಐದು ಚಿನ್ನ ಸೇರಿದಂತೆ ಹತ್ತು ಪದಕಗಳನ್ನು ಜಯಿಸುವುದು ಖಚಿತ ಎಂದು ಪ್ಯಾರಾ ಅಥ್ಲೆಟಿಕ್ಸ್ ಮುಖ್ಯ ಕೋಚ್ ಸತ್ಯನಾರಾಯಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಹೋದ ಸಲ ಟೋಕಿಯೊದಲ್ಲಿ ನಡೆದಿದ್ದ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಬಹುತೇಕ ಅಥ್ಲೀಟ್‌ಗಳು ಬೆಳ್ಳಿ ಮತ್ತು ಕಂಚು ಗೆದ್ದಿದ್ದರು. ಈ ಬಾರಿ ಆ ಪದಕಗಳನ್ನು ಬಂಗಾರದ ಬಣ್ಣಕ್ಕೆ ಪರಿವರ್ತಿಸುವ ಗುರಿ ನಮ್ಮದು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ಬಾರಿ ಎಲ್ಲ ಅಥ್ಲೀಟ್‌ಗಳಿಗೂ ಬಹಳ ವಿಶೇಷವಾದ ತರಬೇತಿ ನೀಡಲಾಗಿದೆ. ನಿರ್ದಿಷ್ಟ ತಂತ್ರಗಾರಿಕೆಗಳೊಂದಿಗೆ ತಾಲೀಮು ಕೊಡಲಾಗಿದೆ. ತಂಡದ ಬಹುತೇಕ ಎಲ್ಲ ಸದಸ್ಯರೂ ಪ್ಯಾರಿಸ್ ತಲುಪಿದ್ದಾರೆ.ಅಲ್ಲಿಯ ವಾತಾವರಣ ಮತ್ತು ಪರಿಸ್ಥಿತಿಗೆ ಹೊಂದಿಕೊಳ್ಳುತ್ತಿದ್ದಾರೆ' ಎಂದು ವಿವರಿಸಿದ್ದಾರೆ.

ಅಥ್ಲೀಟ್‌ಗಳಾದ ಸುಮಿತ್ ಅಂಟಿಲ್ (ಪುರುಷರ ಜಾವೆಲಿನ್ ಥ್ರೋ; ಎಫ್64), ಮರಿಯಪ್ಪನ್ ತಂಗವೇಲು (ಪುರುಷರ ಹೈಜಂಪ್; ಟಿ42), ದೀಪ್ತಿ ಜೀವಂಜಿ (ಮಹಿಳೆಯರ 400 ಮೀ; ಟಿ20), ಸಚಿನ್ ಖಿಲಾರಿ (ಪುರುಷರ ಶಾಟ್‌ಪಟ್; ಎಫ್46), ಏಕತಾ ಬಯಾನ್ (ಮಹಿಳೆಯರ ಕ್ಲಬ್ ಥ್ರೋ; ಎಫ್ 52) ಮತ್ತು ಸಿಮ್ರನ್ ಶರ್ಮಾ (ಮಹಿಳೆಯರ 200 ಮೀ; ಟಿ 12) ಪದಕ ಜಯದ ಭರವಸೆ ಮೂಡಿಸಿದ್ದಾರೆ. ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ತಂಡವು ಒಟ್ಟು 19 ಪದಕ ಜಯಿಸಿತ್ತು. ಆ ಕೂಟದಲ್ಲಿ ಅಥ್ಲೆಟಿಕ್ಸ್‌ನಿಂದ ಎಂಟು ಪದಕಗಳು ಸಂದಿದ್ದವು.

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಸಿಟ್ಸಿಪಾಸ್‌ಗೆ ಆಘಾತ

ಅಲ್ಕರಾಜ್, ಸಿನ್ನರ್ ಮುನ್ನಡೆ

ನ್ಯೂಯಾರ್ಕ್ (ಎಪಿ): ಸ್ಪೇನ್‌ನ ಟೆನಿಸ್ ತಾರೆ ಕಾರ್ಲೋಸ್ ಅಲ್ಕರಾಜ್ ಅವರು ಮಂಗಳವಾರ ತಡರಾತ್ರಿ ಅಮೆರಿಕ ಓಪನ್ ಪುರುಷರ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು. ಈ ಮೂಲಕ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಸತತ 15 ಪಂದ್ಯಗಳಿಗೆ ಗೆಲುವಿನ ಸರಣಿಯನ್ನು ವಿಸ್ತರಿಸಿದರು.

ಮೂರನೇ ಶ್ರೇಯಾಂಕದ ಅಲ್ಕರಾಜ್ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 6-2, 4-6, 6-3, 6-1ರ ಸೆಟ್‌ಗಳಿಂದ ಆಸ್ಟ್ರೇಲಿಯಾದ ಲೀ ಟು ಅವರನ್ನು ಹಿಮ್ಮೆಟ್ಟಿಸಿ 64ರ ಘಟ್ಟಕ್ಕೆ ಮುನ್ನಡೆದರು. ಮುಂದಿನ ಸುತ್ತಿನಲ್ಲಿ ಗುರುವಾರ ನೆದರ್ಲೆಂಡ್ಸ್‌ನ ಬೋಟಿಕ್ ವ್ಯಾನ್ ಡಿ ಝ್ಯಾಂಡ್‌ಸ್ಚುಲ್ಪ್ ಅವರನ್ನು ಎದುರಿಸಲಿದ್ದಾರೆ.

ಪ್ರಸ್ತುತ ಋತುವಿನ ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಕಿರೀಟವನ್ನು ಮುಡಿಗೇರಿಸಿಕೊಂಡಿರುವ ಸ್ಪೇನ್ 21 ವರ್ಷ ವಯಸ್ಸಿನ ಆಟಗಾರ ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಎದುರು ನೋಡುತ್ತಿದ್ದಾರೆ. 2022ರ ಚಾಂಪಿಯನ್ ಆಗಿರುವ ಅಲ್ಕರಾಜ್ ಈ ಬಾರಿಯೂ ಪ್ರಶಸ್ತಿ ಗೆದ್ದರೆ ಓಪನ್ ಯುಗದಲ್ಲಿ ಒಂದೇ ವರ್ಷ ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಜಯಿಸಿದ ವಿಶ್ವದ ಮೂರನೇ ಆಟಗಾರ ಎಂಬ ಹಿರಿಮೆಗೆ ಪಾತ್ರರಾಗುವರು. ಈ ಹಿಂದೆ ರಾಡ್ ಲೇವರ್ ಮತ್ತು ರಫೆಲ್ ನಡಾಲ್ ಈ ಸಾಧನೆ ಮಾಡಿದ್ದರು.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಎರಡನೇ ಸುತ್ತಿಗೆ ಮುನ್ನಡೆದರು. ಆರಂಭಿಕ ಸುತ್ತಿನಲ್ಲಿ ಇಟಲಿಯ ಆಟಗಾರ 2-6, 6-2, 6-1, 6-2ರಿಂದ ಆತಿಥೇಯ ಅಮೆರಿಕದ ಮೆಕೆಂಜಿ ಮೆಕ್ ಡೊನಾಲ್ಡ್ ಅವರನ್ನು ಹಿಮ್ಮೆಟ್ಟಿಸಿದರು.

ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿರುವ 23 ವರ್ಷ ವಯಸ್ಸಿನ ಸಿನ್ನರ್ ವಾರದ ಹಿಂದೆ ಸಿನ್ಸಿನಾಟಿ ಓಪನ್ ಎಟಿಪಿ ಮಾಸ್ಟರ್ ಟ್ರೋಫಿಯನ್ನು ಮುಡಿಗೇರಿಸಿಕೊಂಡಿದ್ದರು. ಡೋಪಿಂಗ್ ಪ್ರಕರಣದಲ್ಲಿ ಅಂತರರಾಷ್ಟ್ರೀಯ ಟೆನಿಸ್ ಇಂಟೆಗ್ರಿಟಿ ಏಜೆನ್ಸಿಯಿಂದ (ಐಟಿಐಎ) ನಿರ್ದೋಷಿ ಎಂದು ತೀರ್ಪು ಪ್ರಕಟವಾದ ಬಳಿಕ ಇಲ್ಲಿ ಕಣಕ್ಕೆ ಇಳಿದಿದ್ದಾರೆ. ಅವರು ಮುಂದಿನ ಸುತ್ತಿನಲ್ಲಿ ಅಮೆರಿಕದ ಅಲೆಕ್ಸ್ ಮೈಕೆಲ್‌ಸೆನ್ ರನ್ನು ಎದುರಿಸಲಿದ್ದಾರೆ.

ಐದನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೇವ್ (ರಷ್ಯಾ) 6-3, 3-6, 6-3, 6-1ರಿಂದ ದುಸಾನ್ ಲಾಜೊವಿಕ್ ವಿರುದ್ಧ; 10ನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೌರ್ (ಆಸ್ಟ್ರೇಲಿಯಾ) 6-3, 6-4, 5-7, 6-4ರಿಂದ ಅಮೆರಿಕದ ಮಾರ್ಕೋಸ್ ಗಿರಾನ್ ವಿರುದ್ಧ, ಆತಿಥೇಯ ದೇಶದ ಟಾಮಿ ಪೌಲ್ 6-4, 6-2, 5-7, 6-2ರಿಂದ ಇಟಲಿಯ ಲೊರೆಂಜೊ ಸೋನೆಗೊ ವಿರುದ್ಧ ಗೆಲುವು ಸಾಧಿಸಿದರು.

ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.ಆಸ್ಟ್ರೇಲಿಯಾದಥಾನಾಸಿಕೊಕ್ಕಿನಾಕಿಸ್ ಅವರು 7-6 (7/5), 4-6, 6-3, 7-5ರಿಂದ 11ನೇ ಶ್ರೇಯಾಂಕದ ಸಿಟ್ಸಿಪಾಸ್‌ಗೆ ಆಘಾತ ನೀಡಿದರು.



ಸ್ಪೇನ್ ಕಾರ್ಲೋಸ್ ಅಲ್ಕರಾಜ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಎರಡನೇ ಸುತ್ತಿಗೆ ಶ್ವಾಂಟೆಕ್, ರಿಬಾಕಿನಾ

ಮಹಿಳೆಯರ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ ನೇರ ಸೆಟ್‌ಗಳ ಗೆಲುವಿನಂದಿಗೆ ಎರಡನೇ ಸುತ್ತು ಪ್ರವೇಶಿಸಿದರು. ಪೋಲೆಂಡ್‌ನ 23 ವರ್ಷ ವಯಸ್ಸಿನ ಆಟಗಾರ್ತಿ 6-4, 7-6 (8/6)ರಿಂದ ರಷ್ಯಾದ ಕಮಿಲಾ ರಾಖಿಮೋವಾ ಅವರನ್ನು ಸೋಲಿಸಿದರು.

ನಾಲ್ಕನೇ ಶ್ರೇಯಾಂಕದ ಎಲೆನಾ ರಿಬಾಕಿನಾ (ಕಜಕಸ್ತಾನ) 6-1, 7-6 (7/1)ರಿಂದ ಆಸ್ಟ್ರೇಲಿಯಾದ ದೆಸ್ತನಿ ಐವಾ ಅವರನ್ನು; ಐದನೇ ಶ್ರೇಯಾಂಕದ ಜಾಸ್ಮಿನ್ ಪಾವೊಲಿನಿ (ಇಟಲಿ) 6-7 (5/7), 6-2, 6-4ರಿಂದ ಕೆನಡಾದ ಬಿಯಾಂಕಾ ಆ್ಯಂಡ್ರಿಸ್ಕು ಅವರನ್ನು; ಆರನೇ ಶ್ರೇಯಾಂಕದ ಜೆಸ್ಸಿಕಾ ಪೆಗುಲಾ (ಅಮೆರಿಕ) 6-4, 6-3ರಿಂದ ಅಮೆರಿಕದ ಶೆಲ್ಬಿ ರೋಜರ್ಸ್ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆದರು. ಶ್ರೇಯಾಂಕರಹಿತ ನವೊಮಿ ಒಸಾಕಾ (ಜಪಾನ್) 6-3, 6-2 ರಿಂದ 10ನೇ ಶ್ರೇಯಾಂಕದ ಜೆಲೆನಾ ಒಸ್ಟಾಪೆಂಕೊ (ಲಾಟ್ವಿಯಾ) ಅವರಿಗೆ ಆಘಾತ ನೀಡಿದರು.

ಸ್ನೂಕರ್: ನತಾಶಾಗೆ ಚೊಚ್ಚಲ ಪ್ರಶಸ್ತಿ



ಬೆಂಗಳೂರು: ಭಾರತದ ನತಾಶಾ ಚೇತನ್ ಅವರು ವಿಶ್ವ 21 ವರ್ಷದೊಳಗಿನವರ ಸ್ನೂಕರ್ ಚಾಂಪಿಯನ್‌ಷಿಪ್ ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದರು. ಇದು ಅವರ ವೃತ್ತಿಜೀವನದ ಮೊದಲ ಕಿರೀಟವಾಗಿದೆ.

ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ನಡೆಯುತ್ತಿರುವ ಟೂರ್ನಿಯ ಫೈನಲ್‌ನಲ್ಲಿ ನತಾಶಾ 3–2 (21-67 (31), 60-41, 67-45, 10-81, 45-34) ರಿಂದ ಥಾಯ್ಲೆಂಡ್‌ನ ನರುಚಾ ಫೋಮ್‌ಪುಲ್ ವಿರುದ್ಧ ಜಯಿಸಿದರು.

ಫಲಿತಾಂಶ: ಪುರುಷರ ವಿಭಾಗದ ಪಂದ್ಯಗಳಲ್ಲಿ; ತಿರದಾದ್ ಆಘ್ಯಾದಿಪೋರ್ (ಇರಾನ್) 3–2ರಿಂದ ದೈಲ್ಯಾನ್ ಟ್ರಾಯ್ (ಐರ್ಲೆಂಡ್) ವಿರುದ್ಧ; ಆರವ್ ಸಂಚೇತಿ (ಭಾರತ) ವಿರುದ್ಧ 3–2ರಿಂದ ಭವ್ಯಾ ಪಿಪಾಲಿಯಾ (ಭಾರತ) ಎದುರು; ಸೈಯದ್ ಅರ್ಸಲ್ಯಾನ್ ಬಾಗೇರಿ (ಇರಾನ್) ವಿರುದ್ಧ 3–2ರಿಂದ ರಾಹುಲ್ (ಭಾರತ) ಎದುರು; ಜೋಯೆಲ್ ಫಾಂಡ್ರೀ (ಜರ್ಮನಿ) 3–1ರಿಂದ ಜುಬಿನ್ (ಭಾರತ) ವಿರುದ್ಧ; ರಣವೀರ್ ದುಗ್ಗಲ್ (ಭಾರತ) 3–2ರಿಂದ ಶಾಹೀನ್ ಸಬ್ಜಿ (ಇರಾನ್) ಎದುರು; ಕ್ಲೈಟನ್ ಕ್ರೆಗನ್ (ಐರ್ಲೆಂಡ್) 3–2ರಿಂದ ಪಾಲ್ ಆರ್ಥರ್ ಜೆರೊಚ್ (ಜರ್ಮನಿ) ವಿರುದ್ಧ; ಝ್ಯಾಕ್ ಕಾಸ್ಕರ್ (ವೇಲ್ಸ್) 3–0ಯಿಂದ ಶಾಮ್ ಅಲ್ವಿನ್ (ಭಾರತ) ವಿರುದ್ಧ ಜಯಿಸಿದರು.

ಮಹಾರಾಜ ಟ್ರೋಫಿ ಕ್ರಿಕೆಟ್: ಮೈಸೂರು ತಂಡದ ಸೆಮಿ ಹಾದಿ ಸುಗಮ

ಕರುಣ್–ಕಾರ್ತಿಕ್ ಜೊತೆಯಾಟಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌.ಯು. ಕಾರ್ತಿಕ್ ಮತ್ತು ನಾಯಕ ಕರುಣ್ ನಾಯರ್ ಅವರಿಬ್ಬರ ಶತಕದ ಜೊತೆಯಾಟದ ಬಲದಿಂದ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಮೈಸೂರು ತಂಡವು 6 ವಿಕೆಟ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ಎದುರು ಗೆದ್ದಿತು. ಮೈಸೂರು ತಂಡಕ್ಕೆ ಇದು ಲೀಗ್ ಹಂತದ ಕೊನೆಯ ಪಂದ್ಯವಾಗಿತ್ತು. ಒಟ್ಟು 10 ಪಂದ್ಯಗಳಲ್ಲಿ ಸಾಧಿಸಿದ 6ನೇ ಜಯ ಇದಾಗಿದೆ. ನಾಲ್ಕರಲ್ಲಿ ಸೋತು 12 ಅಂಕ ಗಳಿಸಿದೆ. ಸೆಮಿಫೈನಲ್ ಪ್ರವೇಶ ಬಹುತೇಕ ಖಚಿತವಾಗಿದೆ. ಆದರೆ ಮಂಗಳೂರು ತಂಡವು ಸೆಮಿ ಹಾದಿಯಿಂದ ನಿರ್ಗಮಿಸಿದೆ.

ಮಂಗಳೂರು ತಂಡವು ಕೃಷ್ಣಮೂರ್ತಿ ಸಿದ್ಧಾರ್ಥ್ (50; 36ಎ) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 178 ರನ್ ಗಳಿಸಿತು. ಇದಕ್ಕುತ್ತರವಾಗಿ ಮೈಸೂರು 18.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 179 ರನ್ ಗಳಿಸಿ ಜಯಿಸಿತು.



ಅರ್ಧಶತಕ ಗಳಿಸಿದ ಕರುಣ್ ನಾಯರ್ ಸಂಭ್ರಮ

ಬೆಂಗಳೂರಿಗೆ ಜಯ: ಸೂರಜ್ ಅಹುಜಾ (ಔಟಾಗದೇ 82; 28ಎ, 4X9, 6X4) ಮತ್ತು ಶುಭಾಂಗ್ ಹೆಗ್ಡೆ (ಔಟಾಗದೇ 85; 41ಎ, 4X6, 6X6) ಅವರ ಬ್ಯಾಟಿಂಗ್ ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ದಿನದ ಮತ್ತೊಂದು ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಶಿವಮೊಗ್ಗ ಲಯನ್ಸ್ ತಂಡವನ್ನು ಸೋಲಿಸಿತು.

ಶಿವಮೊಗ್ಗ 20 ಓವರ್‌ಗಳಲ್ಲಿ ಐದು ವಿಕೆಟ್‌ಗೆ 227 ರನ್ ಗಳಿಸಿತ್ತು. ಸವಾಲಿನ ಗುರಿಯನ್ನು ಬೆನ್ನಟ್ಟಿದ ಬೆಂಗಳೂರು ಇನ್ನೂ ಆರು ಎಸೆತ ಬಾಕಿ ಇರುವಂತೆ 4 ವಿಕೆಟ್‌ಗೆ 228 ರನ್ ಗಳಿಸಿ, ಜಯಿಸಿತು. 59 ರನ್‌ಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ತಂಡಕ್ಕೆ ಸೂರಜ್ ಮತ್ತು ಶುಭಾಂಗ್ ಆಸರೆಯಾದರು. ಅವರು 5ನೇ ವಿಕೆಟ್‌ಗೆ ಮುರಿಯದ ದಾಖಲೆಯ 169 ರನ್ ಸೇರಿಸಿದರು.

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ನೆಟ್ ರನ್‌ರೇಟ್
ಬೆಂಗಳೂರು ಬ್ಲಾಸ್ಟರ್ಸ್	9	7	2	14	+1.008
ಮೈಸೂರು ವಾರಿಯರ್ಸ್	10	6	4	12	+0.687
ಹುಬ್ಬಳ್ಳಿ ಟೈಗರ್ಸ್	9	6	3	12	-0.537
ಗುಲ್ಬರ್ಗ ಮಿಸ್ಟಿಕ್ಸ್	9	4	4	9	+0.030
ಶಿವಮೊಗ್ಗ ಲಯನ್ಸ್	10	3	7	6	-0.827
ಮಂಗಳೂರು ಡ್ರ್ಯಾಗನ್ಸ್	9	1	7	3	-0.638

ಮುಖ್ಯಾಂಶಗಳು

- ಸೆಮಿಫೈನಲ್ ಪ್ರವೇಶಿಸಿದ ಬೆಂಗಳೂರು ಬ್ಲಾಸ್ಟರ್
- ಟೂರ್ನಿಯ ಇತಿಹಾಸದಲ್ಲೇ ಅತ್ಯಧಿಕ ರನ್ ಚೇಸ್ ಮಾಡಿದ ಬೆಂಗಳೂರು ತಂಡ
- ಮೊದಲ ಇನಿಂಗ್ಸ್‌ನ 18 ಸಿಕ್ಸರ್ ಸೇರಿ ಒಟ್ಟು 30 ಸಿಕ್ಸರ್‌ಗಳು ದಾಖಲು

ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 9ಕ್ಕೆ178 (ತುಷಾರ್ ಸಿಂಗ್ 43, ಕೆ.ವಿ. ಸಿದ್ಧಾರ್ಥ್ 50, ಸಿ.ಎ. ಕಾರ್ತಿಕ್ 37ಕ್ಕೆ2, ಕೆ. ಗೌತಮ್ 18ಕ್ಕೆ2, ಮನೋಜ್ ಬಾಂಢಗೆ 29ಕ್ಕೆ2) **ಮೈಸೂರು ವಾರಿಯರ್ಸ್:** 18.4 ಓವರ್‌ಗಳಲ್ಲಿ 4ಕ್ಕೆ179 (ಎಸ್‌.ಯು. ಕಾರ್ತಿಕ್ 69, ಕರುಣ್ ನಾಯರ್ 64, ಮೆಕ್ನಿಲ್ ಹ್ಯಾಡ್ಲಿ ನರೋನಾ 10ಕ್ಕೆ2) **ಪಂದ್ಯದ ಆಟಗಾರ:** ಕರುಣ್ ನಾಯರ್.

ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 5ಕ್ಕೆ 227 (ಮೋಹಿತ್ 56, ಅಭಿನವ್ ಮನೋಹರ್ ಔಟಾಗದೇ 59, ರೋಹನ್ ನವೀನ್ 45; ಆದಿತ್ಯ ಗೋಯಲ್ 53ಕ್ಕೆ 2). **ಬೆಂಗಳೂರು ಬ್ಲಾಸ್ಟರ್ಸ್:** 19 ಓವರ್‌ಗಳಲ್ಲಿ 4ಕ್ಕೆ 228 (ಮಯಂಕ್ ಅಗರವಾಲ್ 33, ಶುಭಾಂಗ್ ಹೆಗ್ಡೆ ಔಟಾಗದೇ 85, ಸೂರಜ್ ಅಹುಜಾ ಔಟಾಗದೇ 82; ಎಚ್‌.ಎಸ್. ಶರತ್ 47ಕ್ಕೆ 2). **ಪಂದ್ಯದ ಆಟಗಾರ:** ಸೂರಜ್ ಅಹುಜಾ

ಚೆಸ್: ಎಂಟನೇ ಸಲ ಗುಕೇಶ್, ಪ್ರಜ್ಞಾನಂದ 'ಡ್ರಾ'


ಪ್ರಶಸ್ತಿ ಖಚಿತಪಡಿಸಿಕೊಂಡ ಅಲಿರೇಜಾ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಡಿ.ಗುಕೇಶ್ ಮತ್ತು ಆರ್.ಪ್ರಜ್ಞಾನಂದ ಅವರು ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯಲ್ಲಿ ತಮ್ಮ ಎದುರಾಳಿಗಳ ವಿರುದ್ಧ ಸತತ ಎಂಟನೇ ಪಂದ್ಯವನ್ನು 'ಡ್ರಾ' ಮಾಡಿಕೊಂಡರು. ಈ ಟೂರ್ನಿಯಲ್ಲಿ ಇನ್ನೊಂದು ಸುತ್ತಷ್ಟೇ ಉಳಿದಿವೆ.

ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಈ ಟೂರ್ನಿಯಲ್ಲಿ ಗುಕೇಶ್ ಮಂಗಳವಾರ ಕೇವಲ 23 ನಡೆಗಳ ನಂತರ ಹಾಲೆಂಡ್‌ನ ಅನಿಶ್ ಗಿರಿ ಜೊತೆ 'ಡ್ರಾ' ಒಪ್ಪಂದಕ್ಕೆ ಸಹಿಮಾಡಿದರು. ಪ್ರಜ್ಞಾನಂದ ಸಹ ಡ್ರಾ ಸರಪಣಿಯಿಂದ ಹೊರಬರಲಿಲ್ಲ. ಅವರು 28 ನಡೆಗಳ ಬಳಿಕ ಸ್ಥಳೀಯ ಆಟಗಾರ ಫ್ಯಾಬಿಯಾನೊ ಕರುವಾನ ಜೊತೆ ಪಾಯಿಂಟ್ ಹಂಚಿಕೊಳ್ಳಲು ನಿರ್ಧರಿಸಿದರು.

ಹತ್ತು ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿಯ ಎಂಟನೇ ಸುತ್ತಿನ ಇತರ ಮೂರು ಪಂದ್ಯಗಳಲ್ಲೂ ನಿರ್ಣಾಯಕ (ಸೋಲು–ಗೆಲುವು) ಫಲಿತಾಂಶ ಬರಲಿಲ್ಲ.

ಅಲಿರೇಜಾಗೆ ಬಂಪರ್: ಒಂದು ಸುತ್ತು ಉಳಿದಿರುವಂತೆ ಫ್ರಾನ್ಸ್‌ನ ಅಲಿರೇಜಾ ಫಿರೋಜ್ ಅವರು ಗ್ರ್ಯಾಂಡ್ ಚೆಸ್ ಟೂರ್ನಿ ಟ್ರೋಫಿ ಖಚಿತಪಡಿಸಿಕೊಂಡರು. ಅವರು ಐದು ಟೂರ್ನಿಗಳ ಸರಣಿಯುದ್ದಕ್ಕೂ ಉತ್ತಮ ಸಾಧನೆಗಾಗಿ ಸುಮಾರು ₹84 ಲಕ್ಷ ನಗದು ಬಹುಮಾನವನ್ನು ಬೋನಸ್ ಆಗಿ ಪಡೆದರು.



ಅಲಿರೇಜಾ ಫಿರೋಜ್

ಅವರು ಎಂಟನೇ ಸುತ್ತಿನಲ್ಲಿ ಫಿರೋಜ್ ಸುದೀರ್ಘ ಪಂದ್ಯವಾಡಿದರೂ 80 ನಡೆಗಳ ರಷ್ಯಾದ ಇಯಾನ್ ನಿಪೊಮ್‌ನಿಯಾಷಿ ಜೊತೆ 'ಡ್ರಾ' ಮಾಡಿಕೊಳ್ಳಬೇಕಾಯಿತು. ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಅವರು ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ (ಚೀನಾ) ಜೊತೆ ಡ್ರಾ ಮಾಡಿಕೊಂಡರೆ, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್, ಅಮೆರಿಕದ ವೆಸ್ಲಿ ಸೊ ಜೊತೆ ಪಾಯಿಂಟ್ ಹಂಚಿಕೊಳ್ಳಲು ತೀರ್ಮಾನಿಸಿದರು.

ಅಲಿರೇಜಾ 5.5 ಪಾಯಿಂಟ್ಸ್ ಸಂಗ್ರಹಿಸಿದ್ದು ಈ ಟೂರ್ನಿಯಲ್ಲಿ ಪ್ರಶಸ್ತಿ ಗೆಲುವಿನತ್ತ ದಾಪುಗಾಲಿಟ್ಟಿದ್ದಾರೆ. ಕರುವಾನ (4.5) ಅವರಷ್ಟೇ ಅಲಿರೇಜಾ ಅವರ ಜೊತೆ ಪಾಯಿಂಟ್ಸ್ ಸಮಮಾಡಿಕೊಳ್ಳಲು ಅವಕಾಶವಿದೆ. ಅಲಿರೇಜಾ ಅಂತಿಮ ಸುತ್ತಿನಲ್ಲಿ ಪ್ರಜ್ಞಾನಂದ ವಿರುದ್ಧ ಸೋತರೆ, ಕರುವಾನ ಅವರು ಡಚ್ ಆಟಗಾರ ಅನಿಶ್ ಗಿರಿ ವಿರುದ್ಧ ಗೆದ್ದರೆ ಮಾತ್ರ ಇದು ಸಾಧ್ಯ. ಒಂದೊಮ್ಮೆ ಸೋತರೂ ಅಲಿರೇಜಾ ಅವರ ಟೈಬ್ರೇಕ್ ಸ್ಕೋರ್ ಉತ್ತಮವಾಗಿದ್ದು ಅವರ ಅಗ್ರಸ್ಥಾನಕ್ಕೆ ಚ್ಯುತಿಯಾಗದು.

ಐವರು ಆಟಗಾರರು– ಗುಕೇಶ್, ಪ್ರಜ್ಞಾನಂದ, ವೇಷಿಯರ್ ಲಗ್ರಾವ್, ಸೊ ಮತ್ತು ಅಬ್ದುಸತ್ತಾರೋವ್ ನಾಲ್ಕು ಅಂಕ ಸಂಗ್ರಹಿಸಿದ್ದು ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ನಿಪೊಮ್‌ನಿಯಾಷಿ ಮತ್ತು ಲಿರೆನ್ (ತಲಾ 3.5) ನಂತರದ ಸ್ಥಾನದಲ್ಲಿದ್ದರೆ, ಅನಿಶ್ ಗಿರಿ (3) ಕೊನೆಯ ಸ್ಥಾನದಲ್ಲಿದ್ದಾರೆ.

ಒಲಿಂಪಿಯನ್ ಹಾಕಿಪಟು ಆಶಿಶ್ ಬಲ್ಲಾಳ ಅಭಿಮತ: ಕರ್ನಾಟಕದಲ್ಲಿ ಆಮೂಲಾಗ್ರ ಸುಧಾರಣೆ ಬೇಕು...

ಹಾಕಿ ಬೆಳವಣಿಗೆಗೆ ಪಂಜಾಬ್ ಮಾದರಿ ಸೂಕ್ತ

● ಗಿರೀಶ ದೊಡ್ಡಮನಿ

ಬೆಂಗಳೂರು: 'ಭಾರತ ಹಾಕಿ ತಂಡವು ಸತತ ಎರಡು ಒಲಿಂಪಿಕ್ ಕೂಟಗಳಲ್ಲಿ ಕಂಚಿನ ಪದಕ ಗಳಿಸಿದೆ. ಈ ಅದ್ಭುತ ಸಾಧನೆಯು ದೇಶದ ಹಾಕಿ ಕ್ರೀಡೆಯ ಬೆಳವಣಿಗೆಗೆ ಪ್ರೇರಣೆಯಾಗಬೇಕು. ಅದಕ್ಕಾಗಿ ತಳಮಟ್ಟದಲ್ಲಿ ಹಾಕಿ ಆಟದ ಬೆಳವಣಿಗೆಗೆ ಯೋಜನೆಗಳು ಆರಂಭವಾಗಬೇಕು. ಒಲಿಂಪಿಕ್ಸ್ ಸಾಧನೆಯು ಕೇವಲ ಮಾಧ್ಯಮಗಳಲ್ಲಿ ಪ್ರಚಾರಕ್ಕೆ ಸೀಮಿತವಾಗಿ ನೇಪಥ್ಯಕ್ಕೆ ಸರಿಯಬಾರದು'–

ಕರ್ನಾಟಕದ ಒಲಿಂಪಿಯನ್ ಹಾಕಿಪಟು ಆಶಿಶ್ ಬಲ್ಲಾಳ ಅವರ ಅಭಿಪ್ರಾಯ ಇದು. ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಜನ್ಮದಿನದ ಅಂಗವಾಗಿ ಗುರುವಾರ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ 'ಪ್ರಜಾವಾಣಿ'ಗೆ ಸಂದರ್ಶನ ನೀಡಿರುವ ಮಾಜಿ ಗೋಲ್‌ಕೀಪರ್ ಆಶಿಶ್ ದೇಶದ ಹಾಕಿ ಕ್ರೀಡೆಯ ಸ್ಥಿತಿ–ಗತಿಯ ಬಗ್ಗೆ ಮಾತನಾಡಿದ್ದಾರೆ.

● **ಒಲಿಂಪಿಕ್ ಕೂಟಗಳಲ್ಲಿ ಪದಕ ಜಯಿಸಿದಾಗ ದೇಶದಲ್ಲಿ ಸಂಚಲನ ಮೂಡುತ್ತದೆ. ಈ ಸಂದರ್ಭವನ್ನು ಕ್ರೀಡೆಯ ಬೆಳವಣಿಗೆಗೆ ಬಳಕೆ ಮಾಡುವುದು ಹೇಗೆ?**


–ಅತ್ಯುನ್ನತ ಮಟ್ಟದಲ್ಲಿ ಹಾಕಿ ವೈಭವೋಪೇತವಾಗಿ ಕಾಣುತ್ತಿದೆ. ಪದಕ ಗೆದ್ದ ತಂಡದ ಆಟಗಾರರ ಸಾಧನೆಯು ದೇಶದ ಪ್ರತಿ ರಾಜ್ಯದ ಗ್ರಾಮಾಂತರ ಮಟ್ಟದಲ್ಲಿ ಹಾಕಿ ಬೆಳೆಯಲು ಕಾರಣವಾಗಬೇಕು. ಅದಕ್ಕಾಗಿ ಟೂರ್ನಿಗಳು ಹೆಚ್ಚು ನಡೆಯಬೇಕು. ಆದರೆ ಹಾಗಾಗುತ್ತಿಲ್ಲ. ಉತ್ತರ ಭಾರತ ಒಂದಿಷ್ಟು ಪರವಾಗಿಲ್ಲ. ಆದರೆ, ದಕ್ಷಿಣ ಭಾರತದಲ್ಲಿ ಹಾಕಿ ಕ್ರೀಡೆಯು ನೆಲಕಚ್ಚಿದೆ. ಅದರಲ್ಲಿ ಕರ್ನಾಟಕವೂ ಇದೆ.

● **ಕರ್ನಾಟಕದಲ್ಲಿ ಹಾಕಿ ಬೆಳವಣಿಗೆಗೆ ಯಾವ ರೀತಿಯ ಯೋಜನೆಗಳು ಬೇಕು?**

– ನಮ್ಮ ರಾಜ್ಯದಲ್ಲಿ ಎರಡು ಹಾಕಿ ಸಂಸ್ಥೆಗಳಿವೆ. ಒಂದು ಹಾಕಿ ಕರ್ನಾಟಕ ಮತ್ತು ಬೆಂಗಳೂರು ಹಾಕಿ ಸಂಸ್ಥೆ (ಈ ಹಿಂದೆ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ) ಇವೆ. ಅದರಲ್ಲಿ ಹಾಕಿ ಇಂಡಿಯಾದಿಂದ ಮಾನ್ಯತೆ ಪಡೆದಿರುವ ಹಾಕಿ ಕರ್ನಾಟಕದ ಹೊಣೆ ಹೆಚ್ಚು. ಈ ಸಂಸ್ಥೆಯು ಕೇವಲ ಒಂದು ಜಿಲ್ಲೆಗೆ ಸೀಮಿತವಾಗಬಾರದು. ರಾಜ್ಯವ್ಯಾಪಿ ಕಾರ್ಯನಿರ್ವಹಿಸುವಂತಾಗಬೇಕು. ಜಿಲ್ಲಾ ಸಂಸ್ಥೆಗಳಿಗೆ ಜೀವತುಂಬಬೇಕು. ಪಂಜಾಬ್ ರೀತಿಯ ಮಾದರಿಯನ್ನು ಅನುಸರಿಸರಿಸಬಹುದು. ಭಾರತ ತಂಡದಲ್ಲಿ ಪಂಜಾಬ್ ರಾಜ್ಯದ 8 ರಿಂದ 10 ಆಟಗಾರರು ಇರುತ್ತಾರೆ. ಅದಕ್ಕೆ ಕೆಲವು ವರ್ಷಗಳ ಹಿಂದೆ ಅಲ್ಲಿ ಸಚಿವರಾಗಿದ್ದ ಮಾಜಿ ಹಾಕಿಪಟು ಪರ್ಗಟ್ ಸಿಂಗ್ ಅವರು ಕಾರಣ. ಪ್ರತಿ ಜಿಲ್ಲೆಗೊಂದು ಹಾಕಿ ತರಬೇತಿ ಅಕಾಡೆಮಿ ಆರಂಭಿಸಿದರು. ಅವುಗಳಿಗೆ ಒಲಿಂಪಿಯನ್ ಮತ್ತು ಅಂತರರಾಷ್ಟ್ರೀಯ ಹಾಕಿಪಟುಗಳನ್ನು ನೇಮಕ ಮಾಡಿ ಉತ್ತಮ ಸಂಬಳ ನೀಡಿದರು. ಅವರು ಆ ಜಿಲ್ಲೆಯಲ್ಲಿರುವ ಪ್ರತಿಭಾನ್ವಿತ ಮಕ್ಕಳನ್ನು ಆಯ್ಕೆ ಮಾಡಿಕೊಂಡು ಬಂದು ತರಬೇತಿ ಕೊಟ್ಟರು. ಅದರ ಫಲವಾಗಿ ಅಂತರ ಅಕಾಡೆಮಿ, ಅಂತರ ಜಿಲ್ಲೆ, ವಲಯ ಹಾಗೂ ವಯೋಮಿತಿ ವಿಭಾಗಗಳಲ್ಲಿ ನಿರಂತರವಾಗಿ ಟೂರ್ನಿಗಳು ನಡೆಯುತ್ತಿವೆ. ಹರಿಯಾಣದಲ್ಲಿಯೂ ಇದೇ ಮಾದರಿ ಅನುಸರಿಸಲಾಗುತ್ತಿದೆ. ಮಧ್ಯಪ್ರದೇಶ, ಒಡಿಶಾ, ಉತ್ತರ ಪ್ರದೇಶಗಳಲ್ಲಿಯೂ ಮಾಜಿ ಒಲಿಂಪಿಯನ್ ಮತ್ತು ಅಂತರರಾಷ್ಟ್ರೀಯ ಆಟಗಾರರ ಅನುಭವವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುತ್ತಿದೆ. ಅದಕ್ಕೆ ತಕ್ಕಂತೆ ಮೂಲಸೌಲಭ್ಯ ಅಭಿವೃದ್ಧಿಪಡಿಸಲಾಗಿದೆ. ಆಟಗಾರರಿಗೆ, ತರಬೇತುದಾರರಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ. ಅಲ್ಲಿಯ ರಾಜ್ಯ ಹಾಕಿ ಸಂಸ್ಥೆಗಳು ಮತ್ತು ಸ್ಥಳೀಯ ಸರ್ಕಾರಗಳು ಕೈಜೋಡಿಸಿ ದುಡಿಯುತ್ತಿರುವುದರ ಫಲ ಇದು. ದಶಕದ ಹಿಂದೆ ಕರ್ನಾಟಕದಿಂದ ಕನಿಷ್ಠ 5 ಆಟಗಾರರು ಭಾರತ ತಂಡದಲ್ಲಿ ಇರುತ್ತಿದ್ದರು. ಈಗ ರಾಷ್ಟ್ರೀಯ ಶಿಬಿರದಲ್ಲಿಯೂ ರಾಜ್ಯ ಆಟಗಾರರು ಅಪರೂಪ ಆಗಿದ್ದಾರೆ.

● **ತಳಮಟ್ಟದಿಂದ ಅಂದರೆ ಯಾವ ರೀತಿಯ ಯೋಜನೆಗಳು ಬರಬೇಕು?**

–ನಮ್ಮ ರಾಜ್ಯದಲ್ಲಿ ವರ್ಷಕ್ಕೆ ಹೆಚ್ಚೆಂದರೆ ಎರಡು ಟೂರ್ನಿಗಳು ನಡೆಯುತ್ತವೆ. ಇದು ಸಾಲದು. ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಟೂರ್ನಿಗಳು ಹೆಚ್ಚಬೇಕು. ಡಿವೈಎಸ್‌ಎಸ್. ಸಾಯ್ ಹಾಸ್ಟೆಲ್‌ಗಳು ಉನ್ನತ ದರ್ಜೆಗೇರಬೇಕು. ಹಾಕಿ ಕರ್ನಾಟಕವು ಅದಕ್ಕಾಗಿ ಸಮಗ್ರ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಮನವರಿಕೆ ಮಾಡಬೇಕು. ಇತ್ತೀಚೆಗೆ ರಾಜ್ಯ ಸರ್ಕಾರವು ಕ್ರೀಡಾಪಟುಗಳಿಗೆ ಉದ್ಯೋಗ ನೀಡಲು ಮೀಸಲಾತಿ ಆರಂಭಿಸಿರುವುದು ಸ್ವಾಗತಾರ್ಹ. ಇಂತಹ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವುದು ರಾಜ್ಯ ಸಂಸ್ಥೆಯ ಹೊಣೆ. ತನ್ನ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ತರಬೇಕು. ನಿಯಮಾವಳಿಯ ಪ್ರಕಾರ ಪದಾಧಿಕಾರಿಗಳ ನೇಮಕವಾಗಬೇಕು. ಸತತ ನಾಲ್ಕು ಬಾರಿ ಒಬ್ಬರೇ ಅಧ್ಯಕ್ಷರಾಗಿರುವುದು ನಿಯಮದ ಉಲ್ಲಂಘನೆಯಲ್ಲವೇ? ಹಾಕಿ ಅಭಿವೃದ್ಧಿಯ ಏಕೈಕ ಗುರಿಯೊಂದಿಗೆ ಕಾರ್ಯನಿರ್ವಹಿಸಿದರೆ ಸಾವಿರ ಸಂಖ್ಯೆಯಲ್ಲಿ ಆಟಗಾರರು ಬೆಳೆಯುತ್ತಾರೆ. ಆಗ ಪೈಪೋಟಿ ಹೆಚ್ಚಿ, ಗುಣಮಟ್ಟ ವರ್ಧಿಸುತ್ತದೆಯಲ್ಲವೇ?



ಆಶಿಶ್ ಬಲ್ಲಾಳ..

1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. 1994 ಮತ್ತು 1998ರ ಏಷ್ಯನ್ ಗೇಮ್ಸ್‌ಗಳಲ್ಲಿ ಭಾರತ ಪದಕಗಳನ್ನು ಜಯಿಸಲು ಅವರ ಪಾತ್ರವೂ ಪ್ರಮುಖವಾಗಿತ್ತು. ವಿಶ್ವ ಕಪ್, ಚಾಂಪಿಯನ್ಸ್ ಟ್ರೋಫಿ ಟೂರ್ನಿಗಳಲ್ಲಿಯೂ ಅವರು ಆಡಿದ್ದರು. ತಮ್ಮ ಚುರುಕಾದ ಗೋಲ್‌ಕೀಪಿಂಗ್ ಮೂಲಕ ಮನೆಮಾತಾಗಿದ್ದರು. ಅವರು ಅರ್ಜುನ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸುಬ್ರತೊ ಕಪ್ ಫುಟ್‌ಬಾಲ್: ಮೇಘಾಲಯ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಮೇಘಾಲಯದ ನಾನ್‌ಗಿರಿ ಪ್ರೆಸ್‌ಬಿಟೇರಿಯನ್ ಸೆಕೆಂಡರಿ ಸ್ಕೂಲ್ ತಂಡವು 63ನೇ ಸುಬ್ರತೊ ಕಪ್ ಸಬ್ ಜೂನಿಯರ್ ಬಾಲಕರ ಅಂತರರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಎಎಸ್‌ಸಿ ಸೆಂಟರ್‌ನಲ್ಲಿ ಬುಧವಾರ ನಡೆದ ಫೈನಲ್‌ನಲ್ಲಿ 3–0 ಗೋಲುಗಳಿಂದ ಉತ್ತರಪ್ರದೇಶದ ಮೇಜರ್ ಧ್ಯಾನಚಂದ್ ಸ್ಪೋರ್ಟ್ಸ್ ಕಾಲೇಜು ತಂಡವನ್ನು ಮಣಿಸಿತು. ಮೇಘಾಲಯ ತಂಡದ ಪರ ಪ್ರಾಸ್ಪರ್‌ವೆಲ್ ರೈಂಟಾಂಗ್ (1ನೇ ಮತ್ತು 34ನೇ ನಿಮಿಷ) ಎರಡು ಗೋಲು ಗಳಿಸಿದರೆ, ನೇಮ್‌ಬಾನ್ಲಾಮ್ ನಾಂಗ್‌ಸೆಹ್ (48ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಏರ್ ಮಾರ್ಷಲ್ ನಾಗೇಶ್ ಕಪೂರ್ ಅವರು ಭಾರತದ ಬ್ಯಾಡ್ಮಿಂಟನ್ ತಾರೆ ಎಚ್‌.ಎಸ್. ಪ್ರಣಯ್ ಮತ್ತು ಅಥ್ಲೀಟ್ ಅಶ್ವಿನಿ ಅಕ್ಕುಂಜಿ ಅವರೊಂದಿಗೆ ವಿಜೇತ ತಂಡಕ್ಕೆ ಟ್ರೋಫಿಯನ್ನು ಹಸ್ತಾಂತರಿಸಿದರು. ವಿಜೇತ ತಂಡವು ₹4 ಲಕ್ಷ ಮತ್ತು ರನ್ನರ್ ಅಪ್ ತಂಡವು ₹ 2 ಲಕ್ಷ ಬಹುಮಾನ ತನ್ನದಾಗಿಸಿಕೊಂಡಿತು.

ರಾಹುಲ್, ಲಖನೌ ತಂಡದ ಭಾಗ ಎಂದ ಸಂಜೀವ್ ಗೋಯೆಂಕಾ

ಕೋಲ್ಕತ್ತ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಮುಂದಿನ ಐಪಿಎಲ್ ಆವೃತ್ತಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ತೊರೆಯಲಿದ್ದಾರೆ ಎಂಬ ವದಂತಿಗಳ ನಡುವೆ ಫ್ರಾಂಚೈಸಿ ಮಾಲೀಕ ಸಂಜೀವ್ ಗೋಯೆಂಕಾ ಅವರು 'ರಾಹುಲ್ ತಮ್ಮ ತಂಡದ ಅವಿಭಾಜ್ಯ ಅಂಗ' ಎಂದು ಸ್ಪಷ್ಟಪಡಿಸಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗೋಯೆಂಕಾ, ಭಾರತ ತಂಡದ ಮಾಜಿ ವೇಗದ ಬೌಲರ್ ಜಹೀರ್ ಖಾನ್ ಅವರು ಲಖನೌ ತಂಡದ ಮೆಂಟರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಘೋಷಿಸಿದ್ದಾರೆ.

'ನಾನು ಗಾಳಿಸುದ್ದಿಗಳ ಬಗ್ಗೆ ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ. ಆದರೆ, ಒಂದು ಮಾತನ್ನು ಹೇಳಲು ಬಯಸುತ್ತೇನೆ. ರಾಹುಲ್ ನಮ್ಮ ತಂಡದ ಅವಿಭಾಜ್ಯ ಅಂಗವಾಗಿದ್ದು, ಅವರು ನಮ್ಮ ಕುಟುಂಬದ ಸದಸ್ಯನಿದ್ದಂತೆ' ಎಂದು ಗೋಯೆಂಕಾ ಉತ್ತರಿಸಿದ್ದಾರೆ.

ನ್ಯೂನೆಝ್‌ಗೆ 5 ಪಂದ್ಯ ನಿಷೇಧ

ಅಸುನ್ಸಿಯಾನ್ (ಉರುಗ್ವೆ), (ಎಎಫ್‌ಪಿ): ಅಮೆರಿಕದಲ್ಲಿ ನಡೆದ ಕೊಪಾ ಅಮೆರಿಕ ಸೆಮಿಫೈನಲ್ ಪಂದ್ಯದ ನಂತರ ಪ್ರೇಕ್ಷಕರ ಗುಂಪಿನ ಜೊತೆ ಗಲಾಟೆಯಲ್ಲಿ ತೊಡಗಿದ್ದಕ್ಕೆ ಉರುಗ್ವೆಯ ಪ್ರಮುಖ ಫಾರ್ವರ್ಡ್ ಆಟಗಾರ ಡಾರ್ವಿನ್ ನ್ಯೂನೆಝ್ ಅವರಿಗೆ ಬುಧವಾರ ದಕ್ಷಿಣ ಆಫ್ರಿಕಾ ಫುಟ್‌ಬಾಲ್ ಒಕ್ಕೂಟ ಐದು ಪಂದ್ಯಗಳ ನಿಷೇಧ ಹೇರಿದೆ.

ಒಟ್ಟು 11 ಮಂದಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಇವರಲ್ಲಿ ನಾಲ್ವರು ಆಟಗಾರರಿಗೆ ಅಮಾನತು ಶಿಕ್ಷೆ ವಿಧಿಸಲಾಗಿದೆ. ನ್ಯೂನೆಝ್ ಬಿಟ್ಟರೆ ಉಳಿದವರಿಗೆ ಶಿಕ್ಷೆಯ ಪ್ರಮಾಣ ಕಡಿಮೆಯಿದ್ದು, ಕೆಲವರಿಗೆ ನಾಲ್ಕು, ಕೆಲವರಿಗೆ ಮೂರು ಪಂದ್ಯಗಳ ನಿಷೇಧ ಹೇರಲಾಗಿದೆ. ನ್ಯೂನೆಝ್‌ಗೆ ₹17 ಲಕ್ಷ ದಂಡವನ್ನೂ ವಿಧಿಸಲಾಗಿದೆ. ಆರು ಮಂದಿಗೆ ₹13 ಲಕ್ಷ ಮತ್ತು ಅದಕ್ಕಿಂತ ಕಡಿಮೆ ದಂಡ ಹೇರಲಾಗಿದೆ.

ಇಂದು ಕ್ರೀಡಾ ದಿನಾಚರಣೆ

ಬೆಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಆಶ್ರಯದಲ್ಲಿ ರಾಷ್ಟ್ರೀಯ ಕ್ರೀಡಾ ದಿನವನ್ನು ಇದೇ 29ರಂದು ಬೆಳಿಗ್ಗೆ 11ಕ್ಕೆ ಕರ್ನಾಟಕ ಒಲಿಂಪಿಕ್ ಭವನದಲ್ಲಿ ಆಚರಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ ಪರಮೇಶ್ವರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಮ್ಮ ಪ್ಲಾಟ್‌ಫಾರ್ಮ್‌ನಲ್ಲಿ ಹರೆಯದವರನ್ನು ರಕ್ಷಿಸಲು ಸಹಾಯ ಮಾಡಲು, Instagram ನ ಟೂಲ್‌ಗಳಾದ ಸೂಕ್ಷ್ಮ ಕಂಟೆಂಟ್ ನಿಯಂತ್ರಣದಂತದ್ದನ್ನು ಬಳಸಿ, ಅವು ಹರೆಯದವರ ಎಲ್ಲಾ ಖಾತೆಗಳು ಡೀಫಾಲ್ಟ್ ಆಗಿ ಕಡಿಮೆ ಸೂಕ್ಷ್ಮ ಕಂಟೆಂಟ್ ನೋಡುವಂತೆ ಸೆಟ್ ಮಾಡುತ್ತವೆ.

instagram.com/familytools ಇಲ್ಲಿ ನಮ್ಮ 50+ ಟೂಲ್‌ಗಳೊಂದಿಗೆ ಪ್ರಾರಂಭಿಸಿ

